# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಫೆಬ್ರವರಿ 12, 2021

ಸಂಪುಟ : 47 ಸಂಚಿಕೆ : 284 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




## ಇಂಧನ ಬೆಲೆ ಏರಿಕೆಗೆ ಕೈ ಖಂಡನೆ

### ಅಣಕು ಶವ ಯಾತ್ರೆ ನಡೆಸಿ ಪ್ರತಿಭಟನೆ, ಎಸಿಗೆ ಮನವಿ

ದಾವಣಗೆರೆ, ಫೆ.11- ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಬೆಲೆ ಏರಿಕೆಯ ಅಣಕು ಶವ ಯಾತ್ರೆ ಮುಖೇನ ಇಂದು ನಗರದಲ್ಲಿ ಪ್ರತಿಭಟಿಸಿದರು.

ಅಂಬೇಡ್ಕರ್ ವೃತ್ತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಗರ ಪಾಲಿಕೆ ಮುಂಭಾಗ ಆಗಮಿಸಿದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಡುಗೆ ಸಿಲಿಂಡರ್, ಹಳೆಯ ದ್ವಿಚಕ್ರ ವಾಹನವನ್ನು ಸಿದ್ದಿಗೆ ಕಟ್ಟಿ ಅಣಕು ಶವಯಾತ್ರೆಯ ಪ್ರತಿಭಟನಾ ಮೆರವಣಿಗೆ ಮುಖೇನ ಬೆಲೆ ಏರಿಕೆಯ ವಿರುದ್ಧದ ಘೋಷಣೆಯ ನಾಮಫಲಕಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಉಪ ವಿಭಾಗಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು. ನಂತರ ನಗರ ಪಾಲಿಕೆ ಮುಂಭಾಗ ಬಹಿರಂಗ ಸಭೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನಸಾಮಾನ್ಯರಿಗೆ ಬೆಲೆ ಏರಿಕೆಯ ಹೊರೆಯುಂಟು ಮಾಡಿ ಬದುಕನ್ನು ಸಂಕಷ್ಟಕ್ಕೆ ಸಿಲುಕಿಸಿರುವುದಾಗಿ ಅಸಮಾಧಾನ ವ್ಯಕ್ತಪಡಿಸಿದರು. ರೈತ ಸಮುದಾಯಕ್ಕೆ ಮಾರಕವಾದ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, 75 ದಿನಗಳಿಂದ ದೆಹಲಿಯ ಗಡಿಗಳಲ್ಲಿ ಚಳುವಳಿ ನಡೆಸುತ್ತಿರುವ ಲಕ್ಷಾಂತರ ಅನ್ನದಾತರ ನೋವು, ಅಳಲು, ಕಷ್ಟ ಕಾರ್ಪಣ್ಯಗಳಿಗೆ ಕಿವುಡಾಗಿ ಕೇಂದ್ರ ಸರ್ಕಾರವು ಚಳವಳಿಗೆ ಹಲವಾರು ಅಡೆತಡೆಗಳನ್ನೊಡ್ಡಿ ದಾರ್ಷ್ಟ್ಯವನ್ನು ಮೆರೆಯುತ್ತಿದೆ. ಮಂತ್ರಿಗಳ ಜೊತೆಗೆ ನಡೆದ 11 ಸುತ್ತಿನ ಮಾತುಕತೆಗಳ ನಂತರವೂ ರೈತರ ಬೇಡಿಕೆಗಳನ್ನು ಈಡೇರಿಸುವ ಕುರಿತಾದ ಯಾವುದೇ ಬೆಳವಣಿಗೆಯಾಗಿಲ್ಲ ಎಂದು ಆಕ್ಷೇಪಿಸಿದರು. (2ನೇ ಪುಟಕ್ಕೆ)

# ಲಸಿಕೆ ನಂತರ ಸಿಎಎ ಜಾರಿ

ಠಾಕೂರ್‌ನಗರ್ (ಪಶ್ಚಿಮ ಬಂಗಾಳ), ಫೆ. 11 – ಕೊರೊನಾ ಲಸಿಕೆ ಪ್ರಕ್ರಿಯೆ ಮುಗಿದ ನಂತರ ವಲಸೆ ಬಂದವರಿಗೆ ಸಿ.ಎ.ಎ. ಅಡಿ ಭಾರತೀಯ ಪೌರತ್ವ ನೀಡುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ತಿಳಿಸಿದ್ದಾರೆ.


ನೂತನ ಪೌರತ್ವ ಕಾಯ್ದೆ ಜಾರಿಗೆ ತರುವುದಾಗಿ ಮೋದಿ ಸರ್ಕಾರ 2018ರಲ್ಲಿ ಭರವಸೆ ನೀಡಿತ್ತು. 2019ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಈ ಭರವಸೆ ಈಡೇರಿಸಿದೆ ಎಂದವರು ಹೇಳಿದ್ದಾರೆ.

ದೇಶಕ್ಕೆ 2020ರಲ್ಲಿ ಕೊರೊನಾ ಸೋಂಕು ಅಪ್ಪಳಿಸಿದಾಗ ಪೌರತ್ವ ಕಾಯ್ದೆ ಜಾರಿಯನ್ನು ತಡೆಯಲಾಗಿತ್ತು ಎಂದು ಅಮಿತ್ ಷಾ ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸುಳ್ಳು ಭರವಸೆ ನೀಡಿದ್ದಾರೆ. ಸಿ.ಎ.ಎ. ವಿರೋಧಿಸುತ್ತಿರುವ ಅವರು, ಅದನ್ನು ಎಂದೂ ಜಾರಿಗೆ ತರುವುದಿಲ್ಲ ಎಂದಿದ್ದಾರೆ. ಬಿಜೆಪಿ ಸದಾ ತಾನು ನೀಡಿರುವ ಭರವಸೆ ಈಡೇರಿಸಿದೆ. ನಾವು ಈ ಕಾನೂನು ಜಾರಿಗೆ ತಂದಿದ್ದೇವೆ, ವಲಸಿಗರಿಗೆ ಪೌರತ್ವ ನೀಡಲಿದ್ದೇವೆ ಎಂದು ತಿಳಿಸಿದ್ದಾರೆ.

ಕೊರೊನಾ ಲಸಿಕೆ ನೀಡುವ ಪ್ರಕ್ರಿಯೆ ಮುಗಿದ ನಂತರ ಸಿ.ಎ.ಎ. ಅಡಿ ಪೌರತ್ವ ನೀಡುವ ಪ್ರಕ್ರಿಯೆ ಆರಂಭವಾಗಲಿದೆ. ನೀವೆಲ್ಲರೂ ಭಾರತದ ಗೌರವಾನ್ವಿತ ನಾಗರಿಕರಾಗಲಿದ್ದೀರಿ ಎಂದು ಮತುವಾ ಸಮುದಾಯದ ಸಮಾವೇಶ ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಹೇಳಿದ್ದಾರೆ.

**ಪೌರತ್ವ ತಿದ್ದುಪಡಿ ಕಾಯ್ದೆ (ಸಿ.ಎ.ಎ.) ಜಾರಿಗೆ ತರುವುದರಿಂದ ಭಾರತೀಯ**



**ಅಲ್ಪಸಂಖ್ಯಾತರ ಸ್ಥಾನಮಾನದ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ಆದರೂ, ಪ್ರತಿಪಕ್ಷಗಳು ಅಲ್ಪಸಂಖ್ಯಾತರ ದಾರಿ ತಪ್ಪಿಸುತ್ತಿವೆ ಎಂದು ಷಾ ಆರೋಪಿಸಿದ್ದಾರೆ.**

ಮತುವಾ ಸಮುದಾಯದವರು ಪೂರ್ವ ಪಾಕಿಸ್ತಾನದವರಾಗಿದ್ದಾರೆ. ದೇಶ ವಿಭಜನೆ ಹಾಗೂ ಬಾಂಗ್ಲಾದೇಶ ರಚನೆಯ ಸಂದರ್ಭಗಳಲ್ಲಿ ದುರ್ಬಲ ಹಿಂದೂ ಸಮುದಾಯಕ್ಕೆ ಸೇರಿದ ಅವರು ಭಾರತಕ್ಕೆ ಬಂದಿದ್ದರು. ಇವರಲ್ಲಿ ಕೆಲವರಿಗೆ ಭಾರತೀಯ ಪೌರತ್ವ ನೀಡಲಾಗಿದೆ. ಆದರೆ, ದೊಡ್ಡ ಪ್ರಮಾಣದ ಜನರಿಗೆ ಇನ್ನೂ ಪೌರತ್ವ ಸಿಕ್ಕಿಲ್ಲ.

ರಾಜ್ಯದಲ್ಲಿ ಸುಮಾರು 30 ಲಕ್ಷ ಮತುವಾ ಸಮುದಾಯದವರಿದ್ದಾರೆ ಎಂದು ಹೇಳಲಾಗುತ್ತಿದೆ. ಅವರು ಕನಿಷ್ಠ ನಾಲ್ಕು ಲೋಕಸಭೆ ಹಾಗೂ 30 ವಿಧಾನಸಭೆಗಳಲ್ಲಿ ಪ್ರಭಾವಿಗಳಾಗಿದ್ದಾರೆ. ಈ ಸಮುದಾಯ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುತ್ತಾ ಬಂದಿತ್ತು. ಆದರೆ, 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದ್ದಾರೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ. ಸಿ.ಎ.ಎ. ಜಾರಿ ವಿಳಂಬ ಹಾಗೂ ಅನುಮಾನ ಗಳಿಂದಾಗಿ ಈ ಸಮುದಾಯ ಕೈ ಬಿಟ್ಟು ಹೋಗಲಿದೆ ಎಂದು ರಾಜ್ಯ ಬಿಜೆಪಿ ನಾಯಕತ್ವದ ಒಂದು ವರ್ಗ ಕಳವಳ ವ್ಯಕ್ತಪಡಿಸಿತ್ತು.

ಮಮತಾ ಮುಖ್ಯಮಂತ್ರಿಯಾಗಿರದೇ ಇದ್ದರೆ ಅವರು ಸಿ.ಎ.ಎ. ಜಾರಿಗೆ ಅಡ್ಡಿಪಡಿಸಲು ಸಾಧ್ಯವಿಲ್ಲ ಎಂದೂ ಷಾ ಹೇಳಿದ್ದಾರೆ. ಈ ವರ್ಷ ಏಪ್ರಿಲ್ - ಮೇ ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಸಾಧ್ಯತೆ ಇದೆ.

ದೇಶದ ಅಲ್ಪಸಂಖ್ಯಾತರಾರೂ ಪೌರತ್ವ ಕಳೆದುಕೊಳ್ಳುವುದಿಲ್ಲ ಎಂದು ದೇಶದ ಗೃಹ ಸಚಿವನಾಗಿ ನಾನು ಭರವಸೆ ನೀಡಲು ಬಯಸುತ್ತೇನೆ. ಸಿ.ಎ.ಎ. ವಲಸಿಗರಿಗೆ ಪೌರತ್ವ ನೀಡುವ ಕಾಯ್ದೆಯಾಗಿದೆ. ಇದು ಯಾರೊಬ್ಬರ ಪೌರತ್ವವನ್ನೂ ಕಸಿಯುವುದಿಲ್ಲ ಎಂದು ಅಮಿತ್ ಷಾ ಹೇಳಿದ್ದಾರೆ.

## ಹಿಂದ ಹೋರಾಟಕ್ಕೆ ಸಿದ್ದು ಸಿದ್ಧತೆ



**ಕುರುಬರ ಎಸ್ಟಿ ಹೋರಾಟದ ಬೆನ್ನಲ್ಲೇ ಹಿಂದುಳಿದವರು, ದಲಿತರ ಸಂಘಟನೆ**

ಬೆಂಗಳೂರು, ಫೆ. 11- ಕುರುಬ ಸಮುದಾಯವನ್ನು ಎಸ್‌ಟಿ ಮೀಸಲಾತಿಗೆ ಸೇರಿಸಬೇಕೆಂದು ಪಂಚಾಯಿತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ನಡೆಸುತ್ತಿರುವ ಹೋರಾಟದಿಂದ ಹಿನ್ನಡೆ ಕಂಡಿರುವ ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಇದೀಗ 'ಹಿಂದ' (ಹಿಂದುಳಿದ - ದಲಿತ) ಹೋರಾಟಕ್ಕೆ ಚಾಲನೆ ನೀಡಲು ಮುಂದಾಗಿ ದ್ದಾರೆ.

ಅಲ್ಪಸಂಖ್ಯಾತರನ್ನು ಇದರಿಂದ ದೂರವಿಟ್ಟು, ಹಿಂದುಳಿದ ವರ್ಗಗಳನ್ನು ಒಗ್ಗೂಡಿಸುವ ಕಾರ್ಯಕ್ಕೆ ಚಾಲನೆ ಕೊಡಲು ಇದೀಗ ಹಿಂದ ಸಮಾವೇಶಗಳನ್ನು ನಾಲ್ಕು ವಲಯಗಳಲ್ಲೂ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಮೊದಲ ಸಭೆ ಯು ಮಾರ್ಚ್ 13 ರಂದು ಮೈಸೂರು ಇಲ್ಲವೇ ಗುಲ್ಬರ್ಗ ದಲ್ಲಿ 'ದಿಗ್ವಿಜಯ ಯಾತ್ರೆ' ನಡೆಸಲಿದ್ದಾರೆ. ಕಾಂಗ್ರೆಸ್ ಪಕ್ಷ ನೆರಳಿನಲ್ಲಿ ಈ ಯಾತ್ರೆ ಹಮ್ಮಿಕೊಳ್ಳದೇ ಕೆಲವು ಸಂಘಟನೆಗಳ ಮೂಲಕ ಈ ಯಾತ್ರೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಮೊದಲ ಹಂತವಾಗಿ ರಾಜ್ಯದ ನಾಲ್ಕು ವಿಭಾಗ ಗಳಲ್ಲೂ ಈ ಯಾತ್ರೆಗಳು ನಡೆಯಲಿದ್ದು, ಪ್ರತಿ ಯಾತ್ರೆಗೆ ಒಂದರಿಂದ ಮೂರು ಲಕ್ಷ (4ನೇ ಪುಟಕ್ಕೆ)



## ತ್ರಿವೇಣಿ ಸಂಗಮದಲ್ಲಿ ಪ್ರಿಯಾಂಕಾ ಪವಿತ್ರ ಸ್ನಾನ

ಪ್ರಯಾಗ್‌ರಾಜ್, ಫೆ. 11 – ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಅವರು ಉತ್ತರ ಪ್ರದೇಶದ ತ್ರಿವೇಣಿ ಸಂಗಮದಲ್ಲಿ ಮೌನಿ ಅಮವಾಸ್ಯೆ ದಿನದಂದು ಪವಿತ್ರ ಸ್ನಾನ ಕೈಗೊಂಡಿದ್ದಾರೆ.

ಅಲಹಾಬಾದ್‌ಗೆ ಬಂದಿಳಿದಿದ್ದ ಅವರು, ನೆಹರು - ಗಾಂಧಿ ಕುಟುಂಬಕ್ಕೆ ಸೇರಿದ ಆನಂದ ಭವನಕ್ಕೆ ಭೇಟಿ ನೀಡಿದರು. ಆನಂದ ಭವನವನ್ನು ಸ್ವಾತಂತ್ರ್ಯ ಹೋರಾಟದ ಸಂಗ್ರಹಾಲಯವಾಗಿ ಪರಿವರ್ತಿಸಲಾಗಿದೆ. ದೇಶದ ಪ್ರಥಮ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರ ಅಸ್ಥಿಕಲಶವನ್ನು ಗಂಗೆಯಲ್ಲಿ ವಿಸರ್ಜಿಸುವುದಕ್ಕೆ ಮುಂಚೆ ಸ್ವಲ್ಪ ಕಾಲ ಆನಂದ ಭವನದಲ್ಲಿ ಇರಿಸಲಾಗಿತ್ತು. ಅಸ್ತಿಕಲಶ ಇರಿಸಿದ್ದ ಸ್ಥಳಕ್ಕೆ ಪ್ರಿಯಾಂಕಾ ಗಾಂಧಿ ನಮನ ಸಲ್ಲಿಸಿದರು.

ತ್ರಿವೇಣಿ ಸಂಗಮದಲ್ಲಿ ಅವರು ತಮ್ಮ ಸಹಚರರ ಜೊತೆ ಪವಿತ್ರ ಸ್ನಾನ ಕೈಗೊಂಡರು. ನಂತರ ದೋಣಿಯಲ್ಲಿ ತಾವೇ ಹುಟ್ಟು ಹಾಕುತ್ತಲೇ ವಾಪಸ್ಸಾದರು.

ಈ ಸಂದರ್ಭದಲ್ಲಿ ಅವರ ಪುತ್ರಿ ಮಿರಯ ಹಾಗೂ ಕಾಂಗ್ರೆಸ್ ಶಾಸಕ ಆರಾಧನಾ ಮಿಶ್ರ ಅವರೂ ಉಪಸ್ಥಿತರಿದ್ದರು. ನಿನ್ನೆ ಸಹರಾನ್‌ಪುರದಲ್ಲಿ ಆಯೋಜಿಸಲಾಗಿದ್ದ ರೈತ ಮಹಾಪಂಚಾಯತಿಯಲ್ಲೂ ಪ್ರಿಯಾಂಕಾ ಗಾಂಧಿ ಭಾಗವಹಿಸಿದ್ದರು. ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಸರ್ಕಾರವನ್ನು ಒತ್ತಾಯಿಸಿದ್ದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕಾಯ್ದೆಗಳನ್ನು ವಾಪಸ್ ಪಡೆಯಲಿದೆ ಎಂದು ತಿಳಿಸಿದ್ದರು.

## ಮಿಶ್ರ ಬೆಳೆಗೆ ಕೃಷಿ ಇಲಾಖೆ ಆದ್ಯತೆ



**ಜಿ.ಪಂ. ಕೆಡಿಪಿ ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್**

ದಾವಣಗೆರೆ ಫೆ. 11- ಮೆಕ್ಕೆಜೋಳದ ನಡುವೆ ತೊಗರಿಯನ್ನು ಅಕ್ಕಡಿ ಬೆಳೆಯಾಗಿ ಬೆಳೆಯುವಂತೆ ರೈತರ ಮನವೊಲಿಸುವ ಮೂಲಕ ಜಿಲ್ಲೆಯಲ್ಲಿ ಮಿಶ್ರ ಬೆಳೆ ಪದ್ಧತಿಗೆ ಆದ್ಯತೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಹೇಳಿದರು.

ನಗರದ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಗುರುವಾರ ನಡೆದ ಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮಿಶ್ರ ಬೆಳೆಯನ್ನಾಗಿ ತೊಗರಿ ಬೆಳೆಯಲು ಚಿಕ್ಕ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ 1 ಕೆ.ಜಿ. ಬಿತ್ತನೆ ಬೀಜದ ಪೊಟ್ಟಣ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಇದಕ್ಕೂ ಮುನ್ನ ಮೆಕ್ಕೆಜೋಳ ಬೆಳೆದ ರೈತರಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ ಎಂದು ಜಿ.ಪಂ. ಉಪಾಧ್ಯಕ್ಷೆ ಸಾಕಮ್ಮ ಗಂಗಾಧರ ನಾಯ್ಕ ಅವರು ಸಭೆಯಲ್ಲಿ ಕಳವಳ ವ್ಯಕ್ತಪಡಿಸಿದಾಗ, ಜಿಲ್ಲೆಯಲ್ಲಿ 1.34 ಲಕ್ಷ ಹೆಕ್ಟೇರ್‌ಗಳಲ್ಲಿ ಮೆಕ್ಕೆಜೋಳ ಬೆಳೆಯಲಾಗುತ್ತಿದೆ. ಸುಮಾರು 7 ಲಕ್ಷ ಟನ್‌ಗಳಷ್ಟು ಇಳುವರಿ ನಿರೀಕ್ಷೆ ಇದೆ. ಆದರೆ 2 ಲಕ್ಷ ಟನ್ ಮೆಕ್ಕೆಜೋಳಕ್ಕೆ ಮಾತ್ರ ಬೇಡಿಕೆ ಇರುತ್ತದೆ. ಇದು ದರ ಇಳಿಕೆಗೆ ಪ್ರಮುಖ ಕಾರಣವಾಗಿದೆ. ಅಲ್ಲದೆ ತಾಂತ್ರಿಕ ಕಾರಣಗಳಿಂದಾಗಿ ಖರೀದಿ ಕೇಂದ್ರ ಆರಂಭಿಸದೇ ಇರುವುದೂ ಸಹ ದರ ವ್ಯತ್ಯಾಸಕ್ಕೆ ಕಾರಣ ಎಂದು ಜಂಟಿ ಕೃಷಿ ನಿರ್ದೇಶಕರು ವಿವರಿಸಿದರು. ರೈತರು ಮೆಕ್ಕೆಜೋಳವನ್ನು (5ನೇ ಪುಟಕ್ಕೆ)

### 3699 ಅನರ್ಹ ಪಡಿತರ ಚೀಟಿ ವಶ

ಜಿಲ್ಲೆಯಲ್ಲಿ ಶೇ.74ರಷ್ಟು ಜನರು ಬಿಪಿಎಲ್ ಕಾರ್ಡ್ ಪಡೆದಿದ್ದಾರೆ. 25 ಸರ್ಕಾರಿ ನೌಕರರು ಹಾಗೂ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು ಪಡಿತರ ಚೀಟಿ ಹೊಂದಿದವರಿಂದ 3,699 ಅನರ್ಹ ಕಾರ್ಡ್‌ಗಳನ್ನು ವಶಪಡಿಸಿಕೊಂಡು, 3,21,738 ರೂ. ದಂಡ ವಿಧಿಸಲಾಗಿದೆ ಎಂದು ಆಹಾರ ಇಲಾಖೆ ಸಹಾಯಕ (5ನೇ ಪುಟಕ್ಕೆ)

## ದಾವಣಗೆರೆ ವಕೀಲರ ಒಕ್ಕೂಟದ ವಿರುದ್ಧ ನ್ಯಾಯಾಂಗ ನಿಂದನಾ ಕ್ರಮ

**ಕಲಾಪ ಬಹಿಷ್ಕಾರಕ್ಕೆ ಕರೆ**

ಬೆಂಗಳೂರು, ಫೆ. 11 – ನ್ಯಾಯಾಂಗದ ಕಲಾಪಗಳಿಗೆ ಬಹಿಷ್ಕಾರ ಹಾಕುವಂತೆ ಕರೆ ನೀಡಿದ ದಾವಣಗೆರೆ ಹಾಗೂ ಮಂಡ್ಯ ಜಿಲ್ಲೆಗಳ ವಕೀಲರ ಒಕ್ಕೂಟದ ಕೆಲ ಪದಾಧಿಕಾರಿಗಳ ವಿರುದ್ಧ ಕರ್ನಾಟಕ ಹೈಕೋರ್ಟ್ ಸ್ವಯಂ ಪ್ರೇರಿತ ಕ್ರಮಕ್ಕೆ ಮುಂದಾಗಿದೆ.

ಬಹಿಷ್ಕಾರಕ್ಕೆ ನೀಡಿರುವ ಕರೆ ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ ಎಂಬ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ ಓಕ ಹಾಗೂ ನ್ಯಾಯಮೂರ್ತಿ ಸಚಿನ್ ಶಂಕರ್ ಮದ್ಗುಂ ಅವರನ್ನು ಒಳಗೊಂಡ ಪೀಠ ನ್ಯಾಯಾಂಗ ನಿಂದನೆ ಕ್ರಮಕ್ಕೆ ಮುಂದಾಗಿದೆ.

ಮಂಡ್ಯ ಹಾಗೂ ದಾವಣಗೆರೆ ಜಿಲ್ಲೆಗಳ ವಕೀಲರ ಒಕ್ಕೂಟ ಜನವರಿ 4ರಿಂದ ಫೆಬ್ರವರಿ 8ರ ನಡುವೆ ಹಲವಾರು ದಿನಾಂಕಗಳನ್ನು ಕಲಾಪಗಳಿಗೆ ಬಹಿಷ್ಕಾರ ಹಾಕಲು ತಿಳಿಸಿತ್ತು ಎಂದು ನ್ಯಾಯಾಲಯದ ರಿಜಿಸ್ಟ್ರಿಗೆ ವರದಿ (2ನೇ ಪುಟಕ್ಕೆ)

## 23ನೇ ಅವಧಿ ಮೀಸಲಾತಿ

### ಮೇಯರ್ ಪರಿಶಿಷ್ಟ ಜಾತಿ ಮಹಿಳೆ, ಉಪ ಮೇಯರ್ ಸಾಮಾನ್ಯ ಮಹಿಳೆ

ಬೆಂಗಳೂರು, ಫೆ. 11 – ದಾವಣಗೆರೆ ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ ಹತ್ತು ಮಹಾನಗರ ಪಾಲಿಕೆಗಳ ಮೇಯರ್ ಹಾಗೂ ಉಪ ಮೇಯರ್ ಸ್ಥಾನಗಳ 23ನೇ ಅವಧಿಗೆ ಮೀಸಲಾತಿಯನ್ನು ನಿಗದಿ ಪಡಿಸಿ ರಾಜ್ಯ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಈ ಆದೇಶದನ್ವಯ ದಾವಣಗೆರೆ ಮೇಯರ್ ಸ್ಥಾನವು 23ನೇ ಅವಧಿಗೆ ಪರಿಶಿಷ್ಟ ಜಾತಿಯ ಮಹಿಳೆಗೆ ಸಿಗಲಿದ್ದರೆ, ಉಪ ಮೇಯರ್ ಸ್ಥಾನ ಸಾಮಾನ್ಯ ಮಹಿಳೆಗೆ ದೊರೆಯಲಿದೆ. ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಎ. ವಿಜಯಕುಮಾರ್ ಅವರು ಆದೇಶ ಹೊರಡಿಸಿದ್ದಾರೆ.

## ಸತತ ಮೂರನೇ ದಿನ ತೈಲ ಬೆಲೆಯಲ್ಲಿ ಏರಿಕೆ

ಬೆಂಗಳೂರು, ಫೆ. 11-ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಸತತ ಮೂರನೇ ದಿನ ಏರಿಕೆಯಾಗಿವೆ. ಪೆಟ್ರೋಲ್ ಬೆಲೆ ಲೀಟರ್‌ಗೆ 25 ಪೈಸೆ ಹಾಗೂ ಡೀಸೆಲ್ ಬೆಲೆ ಲೀಟರ್‌ಗೆ 30 ಪೈಸೆ ಏರಿಕೆಯಾಗಿದೆ.

ಇದರಿಂದಾಗಿ ರಾಜ್ಯದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 92.35 ರೂ. ಹಾಗೂ ಡೀಸೆಲ್ ಬೆಲೆ ಲೀಟರ್‌ಗೆ 84.03 ರೂ.ಗಳಿಗೆ ತಲುಪಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 87.85 ರೂ. ಆಗಿದ್ದರೆ, ಮುಂಬೈನಲ್ಲಿ 94.36 ರೂ. ಆಗಿದೆ. ಸ್ಥಳೀಯ ತೆರಿಗೆಗೆ ಅನುಗುಣವಾಗಿ ತೈಲ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೆ.

### ಕೊಟ್ಟೂರಿನಲ್ಲಿನ ಹುಣ್ಣಿಮೆ ಮುಂದೂಡಿಕೆ

## ಸಾಮಾಜಿಕ ಜಾಲತಾಣದಲ್ಲಿ ತರಳಬಾಳು ಹುಣ್ಣಿಮೆ



ಸಿರಿಗೆರೆ, ಫೆ.11- ಬಳ್ಳಾರಿ ಜಿಲ್ಲೆ ಕೊಟ್ಟೂರು ಪಟ್ಟಣದಲ್ಲಿ ಇದೇ ಫೆಬ್ರವರಿ ಮಾಹೆಯಲ್ಲಿ ನಡೆಯಬೇಕಾಗಿದ್ದ ತರಳಬಾಳು ಜಗದ್ಗುರು ಬೃಹನ್ಮಠದ ಪ್ರಮುಖ ವಾರ್ಷಿಕ ಆಚರಣೆಯಾದ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಮುಂದೂಡಲಾಗಿದೆ ಎಂದು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಪ್ರಕಟಿಸಿದ್ದಾರೆ.

ದೇಶದಲ್ಲೆಡೆ ಕೋವಿಡ್‌ನ ಪ್ರಭಾವ ಇರುವ ಸಂದರ್ಭದಲ್ಲಿ ಅದರ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಹೊಣೆಗಾರಿಕೆ ಇರುವುದರಿಂದ ಈ ಕ್ರಮ ಅಗತ್ಯವಾಗಿದೆ. 9 ದಿನಗಳ ಕಾಲ ನಡೆಯುವ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ನಿತ್ಯವೂ ಸಾವಿರಾರು ಜನರು ಭಾಗಿಯಾಗುತ್ತಾರೆ. ಕೋವಿಡ್ ಕಾರಣದಿಂದ ಭಕ್ತರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾದರೆ ತಮಗೆ ವೇದನೆಯಾಗುತ್ತದೆ. ಆ ಸಂಕಟವನ್ನು ತಾಳಿಕೊಳ್ಳಲು ತಮಗೆ ಸಾಧ್ಯವಾಗುವುದಿಲ್ಲ. ಗುರುಗಳಾದ ನಮಗೆ ಆರೋಗ್ಯದ ತೊಂದರೆ ಆದಲ್ಲಿ ರಾಜ್ಯದ ಚುಕ್ಕಾಣಿ ಹಿಡಿದಿರುವ ಸರ್ಕಾರ, ಮುಖ್ಯಮಂತ್ರಿಗಳು, ಸಚಿವರು, ಆಡಳಿತ ವ್ಯವಸ್ಥೆ ನಮ್ಮ ಆರೋಗ್ಯದ ಕಡೆ ಗಮನ ನೀಡುತ್ತದೆ. ಆದರೆ ಜನಸಾಮಾನ್ಯರಾದ ಭಕ್ತರಿಗೆ ಆರೋಗ್ಯದಲ್ಲಿ ಏರುಪೇರಾದಲ್ಲಿ ನೋಡಿಕೊಳ್ಳುವುದು ಸುಲಭವಲ್ಲ. ಈ ಹಿನ್ನೆಲೆಯಲ್ಲಿ ಕೊಟ್ಟೂರಿನಲ್ಲಿ ನಡೆಯಬೇಕಾಗಿದ್ದ ತರಳಬಾಳು ಹುಣ್ಣಿಮೆಯನ್ನು ಒಂದು ವರ್ಷ ಮುಂದಕ್ಕೆ ಹಾಕಿದ್ದೇವೆ ಎಂದು ಜಗದ್ಗುರುಗಳು (4ನೇ ಪುಟಕ್ಕೆ)

## ಸೈನ್ಯ ವಾಪಸಾತಿಗೆ ಭಾರತ-ಚೀನಾ ಒಪ್ಪಿಗೆ

### ಫಿಂಗರ್ 8 ಪ್ರದೇಶದಿಂದ ಚೀನಾ ಸೈನ್ಯ ವಾಪಸ್ : ರಾಜನಾಥ್ ಸಿಂಗ್

ನವದೆಹಲಿ, ಫೆ. 11 – ಭಾರತ ಮತ್ತು ಚೀನಾಗಳು ಪೂರ್ವ ಲಡಾಖ್‌ನಲ್ಲಿ ಸೈನ್ಯವನ್ನು ಹಿಂದಕ್ಕೆ ಕರೆಸುವ ಒಮ್ಮತಕ್ಕೆ ಬಂದಿದ್ದು, ಅದರ ಅನ್ವಯ ಚೀನಾ ಸೈನ್ಯ ತನ್ನ ಪಡೆಗಳನ್ನು ಪಂಗಾಂಗ್ ಕೊಳದ ಫಿಂಗರ್ 8 ಪ್ರದೇಶದಿಂದ ಹಿಂದೆ ಪಡೆದುಕೊಳ್ಳಲಿದೆ.

ಸಂಸತ್ತಿಗೆ ಗುರುವಾರ ಈ ವಿಷಯ ತಿಳಿಸಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭಾರತೀಯ ಪಡೆಗಳು ಫಿಂಗರ್ 3 ಪ್ರದೇಶದ ಧನ್ ಸಿಂಗ್ ಥಾಪಾ ಬಳಿಯ ತಮ್ಮ ಶಾಶ್ವತ ನೆಲೆಯಲ್ಲಿ ಇರಲಿವೆ ಎಂದು ಹೇಳಿದ್ದಾರೆ.

ಮುಂದಿನ ನಿಯೋಜನೆಯ ಒಮ್ಮತಕ್ಕೆ ಬರುವವರೆಗೂ ಫಿಂಗರ್ 3 ಹಾಗೂ ಫಿಂಗರ್ 8ರ ನಡುವಿನ ಪ್ರದೇಶದಲ್ಲಿ ಯಾವುದೇ ಗಸ್ತು ಇರುವುದಿಲ್ಲ ಎಂಬುದು ಸಿಂಗ್ ಹೇಳಿಕೆಯ ಸಾರವಾಗಿದೆ ಎಂದು ಹಲವಾರು ರಕ್ಷಣಾ ಪರಿಣಿತರು ಹೇಳಿದ್ದಾರೆ. ಚೀನಾದ ಸೈನ್ಯ ಫಿಂಗರ್ 4 ಹಾಗೂ 8ರ ನಡುವಿನ ಪ್ರದೇಶದಲ್ಲಿ ಹಲವಾರು ಸೈನಿಕ ಬಂಕರ್‌ಗಳನ್ನು ನಿರ್ಮಿಸಿತ್ತು. ಫಿಂಗರ್ 4ರ ಆಚೆಗೆ ಭಾರತೀಯ ಪಡೆಯ ಗಸ್ತಿಗೆ ಅಡ್ಡಿಪಡಿಸಿದ್ದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಲಾಗಿತ್ತು.

ಒಂಭತ್ತು ಸುತ್ತಿನ ಮಾತುಕತೆಯ ನಂತರ ಚೀನಾ ಪಡೆಗಳು ಫಿಂಗರ್ 4 ಪ್ರದೇಶದಿಂದ ಫಿಂಗರ್ 8 ಪ್ರದೇಶಕ್ಕೆ ಹಿಂದೆ ಸರಿಯಬೇಕು (2ನೇ ಪುಟಕ್ಕೆ)


## ಸವಿನೆನಪು



ದಿ|| ಐ.ಪಿ. ವಿಶ್ವಾರಾಧ್ಯ

ನಿಧನ : 12.02.2004

ನೀವು ನಮ್ಮನ್ನಗಲಿ ಇಂದಿಗೆ 17 ವರ್ಷಗಳಾದವು.

ಸದಾ ನಿಮ್ಮ ನೆನಪಿನಲ್ಲಿ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ

## ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಿರಿ



**ರಾಣೇಬೆನ್ನೂರು: ವಿದ್ಯಾರ್ಥಿಗಳಿಗೆ ಶಾಸಕ ಅರುಣಕುಮಾರ ಪೂಜಾರ ಕರೆ**

ರಾಣೇಬೆನ್ನೂರು, ಫೆ.11- ಪರೀಕ್ಷೆಗಳನ್ನು ಆತ್ಮವಿಶ್ವಾಸದೊಂದಿಗೆ ಎದುರಿಸಿದರೆ ಗೆಲುವು ಸಾಧ್ಯ ಎಂದು ಶಾಸಕ ಅರಣಕುಮಾರ ಪೂಜಾರ ಹೇಳಿದರು.

ಜೆಸಿ ಹಾಗೂ ಕಾಕಿ ಜನಸೇವಾ ಟ್ರಸ್ಟ್ ಜಂಟಿಯಾಗಿ ನಡೆಸುತ್ತಿರುವ ಎಸ್ಸೆಸ್ಸೆಲ್ಸಿ ಪರೀಕ್ಷಾ ಪೂರ್ವ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರವು ಇಂತಹ ತರಬೇತಿಗಳನ್ನು ನೀಡುತ್ತಾ ಬಂದಿದ್ದು, ಕಾಕಿ ಟ್ರಸ್ಟ್ ಸಾಮಾಜಿಕ ಕಳಕಳಿಯಿಂದ ಈ ಸೇವಾ ಕಾರ್ಯವನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳುವಂತೆ ಶಾಸಕರು ಕರೆ ನೀಡಿದರು.

ಟ್ರಸ್ಟ್ ಅಧ್ಯಕ್ಷ ಶ್ರೀನಿವಾಸ ಕಾಕಿ, ವೆಂಕಟೇಶ ಕಾಕಿ, ಹನುಮಂತಪ್ಪ ಕಾಕಿ, ಲಕ್ಷ್ಮಣ ಕಣಕಿ, ಶಿವಾನಂದ ಸಾಲಗೇರಿ, ಜೆಸಿ ಪದಾಧಿಕಾರಿಗಳಾದ ಪಿ.ಆರ್. ಪಾಟೀಲ, ಡಾ. ಶಿವಾನಂದ ಹಿತ್ತಲಮನಿ, ಪ್ರಕಾಶ ಗಚ್ಚಿನಮಠ, ಪರಬು ಹಲಗೇರಿ ಇನ್ನಿತರರಿದ್ದರು. ಮೃತ್ಯುಂಜಯ ಅವರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು.

# ರೈತ ವಿರೋಧಿ ಕೃಷಿ ಕಾಯ್ದೆ ಹಿಂಪಡೆಯಲಿ

## ಜಗಳೂರಿನಲ್ಲಿ ಮಾಜಿ ಶಾಸಕ ಎಚ್.ಪಿ.ರಾಜೇಶ್ ಆಗ್ರಹ

ಜಗಳೂರು, ಫೆ.11- ಕೇಂದ್ರ ಸರ್ಕಾರ ರೈತ ವಿರೋಧಿ ಕಾಯ್ದೆಗಳನ್ನು ಹಿಂಪಡೆದು ಹಾಗೂ ತೈಲ ಬೆಲೆ ಏರಿಕೆ ಇಳಿಸಲಿ ಎಂದು ಮಾಜಿ ಶಾಸಕ ಎಚ್.ಪಿ.ರಾಜೇಶ್ ಆಗ್ರಹಿಸಿದರು.

ಪಟ್ಟಣದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇಶದಲ್ಲಿ ಶೇ.65 ಕ್ಕೂ ಅಧಿಕ ಜನಸಂಖ್ಯೆ ಆರ್ಥಿಕ ಅಭಿವೃದ್ದಿಗೆ ವ್ಯವಸಾಯವನ್ನೇ ಅವಲಂಬಿಸಿ ದೇಶದ ಪ್ರಗತಿಗೆ ಅಪಾರ ಕೊಡುಗೆ ನೀಡಿದ್ದಾರೆ. ಇಂತಹ ಲಕ್ಷಾಂತರ ರೈತರು, ಮೂರು ಕಾಯ್ದೆಗಳನ್ನು ಜಾರಿಗೊಳಿಸಿದ ಸರ್ವಾಧಿಕಾರಿ ಕೇಂದ್ರ ಸರ್ಕಾರದ ವಿರುದ್ಧ ಕಳೆದ 75 ದಿನಗಳಿಂದ ದೆಹಲಿ ಗಡಿಗಳಲ್ಲಿ ಚಳುವಳಿ ನಿರತರಾಗಿದ್ದಾರೆ. ಕೊರೆಯುವ ಚಳಿ, ಮಳೆ, ಗಾಳಿಗೆ ಸಿಲುಕಿ 155 ಕ್ಕೂ ಅಧಿಕ ರೈತರು ಮೃತಪಟಿದ್ದಾರೆ, ಅನ್ನದಾತರ ನೋವುಗಳಿಗೆ ಸ್ಪಂದಿಸದೆ ದರ್ಪ ಮೆರೆಯುತ್ತಿರುವುದು ಖಂಡನೀಯ ಎಂದರು.

ಕಳೆದ 73 ವರ್ಷಗಳಿಂದ ಕೇಳರಿಯದ ತೈಲಬೆಲೆ ಇಂದು ಮೋದಿ ನೇತೃತ್ವದ ಕೇಂದ್ರ ಸರ್ಕಾರದಲ್ಲಾಗಿದೆ. ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ 110 ಡಾಲರ್‌ನಿಂದ 50 ಡಾಲರ್‌ಗೆ ಇಳಿಮುಖವಾಗಿದ್ದರೂ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಕಡಿಮೆಯಾಗಿಲ್ಲ. ಇದರಿಂದ ರೈತರು, ಜನಸಾಮಾನ್ಯರು, ಕಾರ್ಮಿಕ ವರ್ಗ ತತ್ತರಿಸಿದೆ ಎಂದರು.




ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಕೇಂದ್ರ ಸರ್ಕಾರ ಮಂತ್ರಿಗಳ ಜೊತೆ 11 ಸುತ್ತಿನ ಮಾತುಕತೆ ನಡೆಸಿದರೂ ರೈತವಿರೊಧಿ ಕಾಯ್ದೆಗಳ ಬಗ್ಗೆ ಚಕಾರ ಎತ್ತಿಲ್ಲ. ಅಲ್ಲದೆ ಪ್ರಧಾನಿ ಮೋದಿ ಅವರ 'ಮನ್ ಕಿ ಬಾತ್' ನಲ್ಲಿ ಕಾಯ್ದೆಗಳು ಸರಿಯಾಗಿವೆ ಎಂಬ ಹೇಳಿಕೆಗೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು. ರೈತ ಮುಖಂಡರ ಸಮ್ಮುಖದಲ್ಲಿ ಸಭೆ ಕರೆದು ಚರ್ಚೆ ನಡೆಸಬೇಕು ಎಂದರು.

ಹೊರಕೆರೆ ಮಾರಮ್ಮನ ದೇವಸ್ಥಾನದಿಂದ ಮೆರವಣಿಗೆ ನಡೆಸಿ, ಮಹಾತ್ಮ ಗಾಂಧಿ ವೃತ್ತದಿಂದ, ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಛೇರಿಗೆ ತೆರಳಿ ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಲಿಖಿತ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕೆಪಿಸಿಸಿ ಬ್ಲಾಕ್ ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ತಾ.ಪಂ ಸದಸ್ಯ ಕುಬೇಂದ್ರಪ್ಪ, ಜಿ.ಪಂ. ಮಾಜಿ ಅಧ್ಯಕ್ಷೆ ನಾಗರತ್ನಮ್ಮ, ಮುಖಂಡರಾದ ಬಿ.ಲೋಕೇಶ್, ತಿಪ್ಪೇಸ್ವಾಮಿ, ರೇವಣ್ಣ, ಯು.ಜಿ.ಶಿವಕುಮಾರ್, ಸಿದ್ದಪ್ಪ, ಚಿತ್ತಪ್ಪ, ವಿಜಯ್ಕೆಂಚೊಳ್, ಶಕೀಲ್ ಅಹಮ್ಮದ್, ರಮೇಶ್, ಓಬಳೇಶ್, ಮಹಿಳಾ ಕಾಂಗ್ರೆಸ್‌ನ ಸಾವಿತ್ರಮ್ಮ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

## ಚನ್ನಗಿರಿಯಲ್ಲಿ ನಾಡಿದ್ದು ಲಯನ್ಸ್ ಪ್ರಾಂತೀಯ ಸಮ್ಮೇಳನ



ಚನ್ನಗಿರಿ,ಫೆ.11- ಜಿಲ್ಲಾ ಲಯನ್ಸ್ 317ಸಿ, ಪ್ರಾಂತ್ಯ 10ರ ಪ್ರಾಂತೀಯ ಸಮ್ಮೇಳನ 'ಕೇಸರಿ ವೈಭವ - 2021' ನಾಡಿದ್ದು ದಿನಾಂಕ 14ರ ಭಾನುವಾರ ಸಂಜೆ 4 ಗಂಟೆಗೆ ಇಲ್ಲಿನ ಬೀರೂರು ರಸ್ತೆಯಲ್ಲಿರುವ ಜವಳಿ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಸಮ್ಮೇಳನ ಸಮಿತಿ ಅಧ್ಯಕ್ಷ ಎಂ.ಎನ್. ಪ್ರಕಾಶ್ ತಿಳಿಸಿದ್ದಾರೆ.

ಲಯನ್ಸ್ ಕ್ಲಬ್ ಚನ್ನಗಿರಿ ಚನ್ನಮ್ಮಾಜಿ ಆತಿಥ್ಯದಲ್ಲಿ ಇದೇ ಪ್ರಪ್ರಥಮ ಬಾರಿಗೆ ಚನ್ನಗಿರಿಯಲ್ಲಿ ಲಯನ್ಸ್ ಸಂಸ್ಥೆಯ ಪ್ರಾಂತೀಯ ಸಮ್ಮೇಳನವು ಏರ್ಪಾಡಾಗಿದ್ದು, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಹೆಚ್.ಎಸ್. ಸಚ್ಚಿದಾನಂದ ಮೂರ್ತಿ ಮತ್ತು ದೂರದರ್ಶನ ದೆಹಲಿ - ಬೆಂಗಳೂರಿನ ಹೆಚ್ಚುವರಿ ವಿಶ್ರಾಂತ ನಿರ್ದೇಶಕ ಡಾ. ಮಹೇಶ್ ಜೋಷಿ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಲಯನ್ಸ್ ಪ್ರಾಂತ್ಯ 10ರ ಪ್ರಾಂತೀಯ ಅಧ್ಯಕ್ಷ ಎನ್.ವಿ. ಹರೀಶ್ ಅವರ ಅಧ್ಯಕ್ಷತೆಯಲ್ಲಿ ಲಯನ್ಸ್ ಪ್ರಾಂತ್ಯ 10ರ ಪ್ರಥಮ ಮಹಿಳೆ ಶ್ರೀಮತಿ ಪೂಜಾ ಹರೀಶ್ ಅವರು ಸಮ್ಮೇಳನವನ್ನು ಉದ್ಘಾಟಿಸುವರು ಎಂದು ಸಮ್ಮೇಳನ ಸಮಿತಿ ಕಾರ್ಯದರ್ಶಿ ಸಿ.ವಿ. ಸುಮತೀಂದ್ರ, ಕೋಶಾಧಿಕಾರಿ ಎನ್. ನಾಗರಾಜ್ ಅವರುಗಳು ವಿವರಿಸಿದ್ದಾರೆ.

ಜಿಲ್ಲಾ ಲಯನ್ಸ್ ಪ್ರಥಮ ಉಪ ರಾಜ್ಯಪಾಲರುಗಳಾದ ವಿಶ್ವನಾಥ ಶೆಟ್ಟಿ, ಕೆ.ಸಿ. ವೀರಭದ್ರ ಅವರುಗಳು ಅತಿಥಿಗಳಾಗಿ ಭಾಗವಹಿಸಲಿದ್ದು, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಎ.ಆರ್. ಉಜ್ಜನಪ್ಪ, ಜಿಲ್ಲಾ ಲಯನ್ಸ್ ಮಾಜಿ ಕಾರ್ಯದರ್ಶಿ ಓ.ಜಿ.ರುದ್ರೇಗೌಡ, ಜಿ.ಎಂ. ನರೇಂದ್ರ, ವಲಯ ಅಧ್ಯಕ್ಷರುಗಳಾದ ಹೆಚ್.ಎಂ. ಸಿದ್ದಪ್ಪ, ವೈ.ಬಿ. ಸತೀಶ್ ಅವರುಗಳು ಉಪಸ್ಥಿತರಿರುವರು.

ದಾವಣಗೆರೆ, ಚನ್ನಗಿರಿ, ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಜಗಳೂರು, ಮಲೇಬೆನ್ನೂರು, ಹೊನ್ನಾಳಿ ಲಯನ್ಸ್ ಕ್ಲಬ್ಬುಗಳು ಲಯನ್ಸ್ ಪ್ರಾಂತ್ಯ 10ರ ವ್ಯಾಪ್ತಿಗೊಳಪಟ್ಟಿದ್ದು, ಈ ಕ್ಲಬ್ಬುಗಳ ಸದಸ್ಯರು ಸಮ್ಮೇಳನದಲ್ಲಿ ಭಾಗವಹಿಸುವಂತೆ ಲಯನ್ಸ್ ಕ್ಲಬ್ ಚನ್ನಗಿರಿ ಚನ್ನಮ್ಮಾಜಿ ಅಧ್ಯಕ್ಷ ಎಂ.ಬಿ. ಶಿವಕುಮಾರ್ ಕೋರಿದ್ದಾರೆ.

## ವಾಲ್ಮೀಕಿ ಜಾತ್ರೆಯಲ್ಲಿ ಗಮನ ಸೆಳೆದ ಸಾಂಸ್ಕೃತಿಕ ಉತ್ಸವ




ಮಲೇಬೆನ್ನೂರು,ಫೆ.11- ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಜರುಗಿದ 3ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ಚಳ್ಳಕೆರೆ ತಿಪ್ಪೇಸ್ವಾಮಿ ವೇದಿಕೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ ಕಲಾ ರಸಿಕರ ಮನ ತಣಿಸಿತು.

ಸಾಂಸ್ಕೃತಿಕ ಉತ್ಸವದಲ್ಲಿ ಕರ್ನಾಟಕ, ಅಸ್ಸಾಂ, ಗುಜರಾತ್, ರಾಜಸ್ಥಾನ್, ಮಧ್ಯಪ್ರದೇಶ, ಒರಿಸ್ಸಾ, ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳ ಅಂತರ ರಾಷ್ಟ್ರೀಯ ಕಲಾವಿದರು ನಡೆಸಿಕೊಟ್ಟ ವಿಭಿನ್ನ ಬುಡಕಟ್ಟು ಶೈಲಿಯ ಸಾಂಪ್ರದಾಯಿಕ ನೃತ್ಯಗಳು ನೋಡುಗರ ಕಣ್ಮನ ಸೆಳೆದವು.

ಜಿ.ಪಂ. ಮಾಜಿ ಅಧ್ಯಕ್ಷರೂ, ಭಾರತೀಯ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷರೂ ಆದ ಡಾ. ವೈ. ರಾಮಪ್ಪ ಉಸ್ತುವಾರಿಯಲ್ಲಿ ಏರ್ಪಾಡಾಗಿದ್ದ ಸಾಂಸ್ಕೃತಿಕ ಉತ್ಸವದ ಪ್ರಾಯೋಜಕತ್ವವನ್ನು ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ಹಾಗೂ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವೂರು ವಹಿಸಿದ್ದವು.

ಕಾರ್ಯಕ್ರಮದ ಸಂಯೋಜನಾಧಿಕಾರಿ ರವೀಂದ್ರ ಕುಮಾರ್, ಜಯಕುಮಾರ್ ಮತ್ತು ಸೆಂಥಿಲ್ ಸೆಲ್ವ ಅವರು ಹಾಜರಿದ್ದು ನಿರ್ದೇಶನ ನೀಡಿದರು. ರಾಷ್ಟ್ರಮಟ್ಟದ ಸಾಂಸ್ಕೃತಿಕ ಉತ್ಸವ ಹಮ್ಮಿಕೊಂಡಿದ್ದರ ಕುರಿತು ವಾಲ್ಮೀಕಿ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ಮುಂದಿನ ಜಾತ್ರೆಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಒಳಗೊಂಡ ಹೊಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಚಿಂತನೆ ಇದೆ ಎಂದು ತಿಳಿಸಿದರು.

ಶಾಸಕ ಎಸ್.ವಿ. ರಾಮಚಂದ್ರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್‌ಪಿ ಹನುಮಂತರಾಯ, ತಹಶೀಲ್ದಾರ್ ರಾಮಚಂದ್ರಪ್ಪ, ಟಿಹೆಚ್ಓ ಡಾ. ಚಂದ್ರಮೋಹನ್, ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಜಾತ್ರಾ ಸಮಿತಿ ಸಂಚಾಲಕ ಹೊದಿಗೆರೆ ರಮೇಶ್, ಟಿ. ಈಶ್ವರ್, ಡಾ. ಎ.ಬಿ. ರಾಮಚಂದ್ರಪ್ಪ, ತ್ಯಾವಣಿಗಿ ಗೋವಿಂದಸ್ವಾಮಿ, ಎಂ. ನಾಗೇಂದ್ರಪ್ಪ, ಕೆಪಿಟಿಸಿಎಲ್ ಎಇಇ ಕೆ.ಎಸ್. ಜಯ್ಯಪ್ಪ, ಹರ್ತಿಕೋಟೆ ವೀರೇಂದ್ರ ಸಿಂಹ, ಜಿಗಳಿ ಆನಂದಪ್ಪ, ಹೂವಿನಮಡು ಚನ್ನಬಸಪ್ಪ, ಪಿ.ಎಸ್. ಹನುಮಂತಪ್ಪ, ಜಿ. ಮಂಜುನಾಥ್ ಪಟೇಲ್, ತಳಸದ ಬಸವರಾಜ್, ಯಕ್ಕನಹಳ್ಳಿ ಬಸವರಾಜಪ್ಪ, ಎಸ್. ರಂಗಪ್ಪ ಗಣ್ಯರು ಸೇರಿದಂತೆ ಸಾವಿರಾರು ಜನರು ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸಿದರು.

ನಂತರ ಹಾಸನ ಜಿಲ್ಲೆಯ ವಾಲ್ಮೀಕಿ ಕಲಾಸಂಘದ ಕಲಾವಿದರು ಅಭಿನಯಿಸಿದ 'ಸಂಪೂರ್ಣ ರಾಮಾಯಣ' ನಾಟಕ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

# ಇಂಧನ ಬೆಲೆ ಏರಿಕೆಗೆ ಕೈ ಖಂಡನೆ

**(1ನೇ ಪುಟದಿಂದ)** ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ರೈತರ ಅಳಲುಗಳಿಗೆ ಸ್ಪಂದಿಸುವುದು ಸರ್ಕಾರಗಳ ನೈತಿಕ ಕರ್ತವ್ಯ ಮತ್ತು ಹೊಣೆಗಾರಿಕೆಯಾಗಿದೆ. ಈಗಿನ ಕೇಂದ್ರ ಸರ್ಕಾರವು ದೃಢ ಸಂಕಲ್ಪದೊಂದಿಗೆ ರೈತ-ವಿರೋಧಿ ಧೋರಣೆಯೊಂದಿಗೆ ರೈತರ ಜೀವ ಮತ್ತು ಜೀವನದೊಂದಿಗೆ ಚೆಲ್ಲಾಟವಾಡುತ್ತಿದೆ ಎಂದು ದೂರಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್. ಬಸವಂತಪ್ಪ, ಕೆಪಿಸಿಸಿ ವೀಕ್ಷಕ ಅಮೃತೇಶ್ ಮತ್ತಿತರರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪ್ರತಿಭಟನೆಯಲ್ಲಿ ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಅಬ್ದುಲ್ ಲತೀಫ್, ಜಿ.ಎಸ್. ಮಂಜುನಾಥ್, ಜಾಕೀರ್, ಸೈಯದ್ ಚಾರ್ಲಿ, ಪಾಮೇನಹಳ್ಳಿ ನಾಗರಾಜ್, ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಎಂ.ಎಸ್. ಕೊಟ್ರಯ್ಯ, ಶಾಮನೂರು ಟಿ. ಬಸವರಾಜ್, ಆರೀಫ್ ಖಾನ್, ಎಸ್. ಮಲ್ಲಿಕಾರ್ಜುನ್, ಕೆ.ಜಿ.ಶಿವಕುಮಾರ್, ನೀಲಗಿರಿಯಪ್ಪ, ಸೋಮ್ಲಾಪುರ ಹನುಮಂತಪ್ಪ, ಅಯೂಬ್ ಪೈಲ್ವಾನ್, ಕಿಸಾನ್ ಘಟಕದ ಬಾತಿ ಶಿವಕುಮಾರ್, ಅಜ್ಜಪ್ಪ ಪವಾರ್, ಎಸ್.ಎಂ. ರುದ್ರೇಶ್, ಅಣಜಿ ಅಂಜಿನಪ್ಪ, ಹೆಚ್. ಜಯಣ್ಣ, ಆನೆಕೊಂಡ ಲಿಂಗರಾಜ್, ಕಲ್ಲೇಶಪ್ಪ, ಎಂ. ಮಂಜುನಾಥ್, ಕೊಡಪಾನ ದಾದಾಪೀರ್, ಸುರಭಿ ಶಿವಮೂರ್ತಿ, ಸಿಮೇಎಣ್ಣೆ ಪರಮೇಶ್, ಅಲೆಕ್ಸಾಂಡರ್ (ಜಾನ್) ಇಮ್ತಿಯಾಜ್, ರಂಗನಾಥ್, ಡೋಲಿ ಚಂದ್ರು, ಅಬ್ದುಲ್ ಜಬ್ಬಾರ್, ದೇವರಹಟ್ಟಿ ಶಮಿ, ಎಸ್. ರವಿ, ನಂಜಾನಾಯ್ಕ, ಹರೀಶ್ ಕೆ.ಎಲ್.ಬಸಾಪುರ, ಮಹಿಳಾ ಕಾಂಗ್ರೆಸ್‌ನ ಅನಿತಾಬಾಯಿ ಮಾಲತೇಶ್, ಸುಷ್ಮಾ ಪಾಟೀಲ್, ಕವಿತಾ ಚಂದ್ರಶೇಖರ್, ಗೀತಾ ಚಂದ್ರಶೇಖರ್, ಎಲ್.ಹೆಚ್.ಸಾಗರ್, ಲಿಯಾಕತ್ ಅಲಿ, ಪ್ರವೀಣ್ ಫಾರ್ಮ, ಶ್ರೀಕಾಂತ್ ಬಗೇರ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಜಗಳೂರಿಗೆ ಇಂದು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು

ಕರ್ನಾಟಕ ಲೋಕಾಯುಕ್ತ ಪೊಲೀಸ್ ನಿರೀಕ್ಷಕ ಆರ್.ಎಲ್. ಲಕ್ಷ್ಮೀಪತಿ ಅವರು ಇಂದು ಜಗಳೂರು ತಾಲ್ಲೂಕು ಪ್ರವಾಸ ಕೈಗೊಳ್ಳಲಿದ್ದು, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸುವರು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪೂರೆ ತಿಳಿಸಿದ್ದಾರೆ.

## ಹೊನ್ನಾಳಿಯಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ಹೊನ್ನಾಳಿ, ಫೆ.11- ಹೊನ್ನಾಳಿ ಪಟ್ಟಣದಲ್ಲಿ ಬೆಸ್ಕಾಂ ವತಿಯಿಂದ ನಾಡಿದ್ದು ದಿನಾಂಕ 13ರ ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನ್ಯಾಯಾಂಗ ನಿಂದನಾ ಕ್ರಮ

**(1ನೇ ಪುಟದಿಂದ)** ಸಲ್ಲಿಸಲಾಗಿತ್ತು.

ಬಹಿಷ್ಕಾರ ಹಾಕಲು ಕಾರಣಗಳೇನೇ ಇದ್ದರೂ ಸಹ, ಅಂತಹ ಕ್ರಮಕ್ಕೆ ಮುಂದಾಗಬಾರದು ಎಂದು ಮುಖ್ಯ ನ್ಯಾಯಮೂರ್ತಿ ಫೆಬ್ರವರಿ 3ರಂದು ಬಹಿರಂಗ ಕರೆ ನೀಡಿದ್ದರು. ಇದಾದ ನಂತರವೂ ವಕೀಲರ ಒಕ್ಕೂಟಗಳು ನ್ಯಾಯಾಂಗದ ಕಲಾಪಗಳಿಂದ ದೂರ ಉಳಿಯಲು ಕರೆ ನೀಡಿವೆ ಎಂಬುದನ್ನು ಹೈಕೋರ್ಟ್ ಪೀಠ ಪರಿಗಣಿಸಿದೆ.

ನ್ಯಾಯಾಂಗದ ಕಲಾಪಗಳಿಗೆ ಬಹಿಷ್ಕಾರ ಹಾಕಲು ಕರೆ ನೀಡುವುದರಿಂದ ಕಕ್ಷಿದಾರರಿಗೆ ಹಾಗೂ ವಕೀಲರಿಗೆ ತೊಂದರೆಯಾಗುತ್ತದೆ ಎಂದು ಸುಪ್ರೀಂ ಕೋರ್ಟ್ ತೀರ್ಪುಗಳಲ್ಲಿ ತಿಳಿಸಲಾಗಿದೆ. ಅಲ್ಲದೇ, ಕೊರೊನಾ ನಂತರ ಈಗಷ್ಟೇ ಸಾಮಾನ್ಯ ಕೋರ್ಟ್ ಕಲಾಪಗಳು ಸಾಧ್ಯವಾಗುತ್ತಿರುವ ಸಮಯದಲ್ಲೇ ಬಹಿಷ್ಕಾರಕ್ಕೆ ಕರೆ ನೀಡಿರುವುದು ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಹೈಕೋರ್ಟ್ ಪೀಠ ಹೇಳಿದೆ.

ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ವಕೀಲರು ಮುಷ್ಕರ ನಡೆಸುವ, ಬಹಿಷ್ಕಾರ ಹಾಕುವ ಇಲ್ಲವೇ ಸಾಂಕೇತಿಕ ಪ್ರತಿಭಟನೆ ನಡೆಸಲೂ ಸಹ ಹಕ್ಕು ಹೊಂದಿಲ್ಲ. ಬಹಿಷ್ಕಾರಕ್ಕೆ ಕರೆ ನೀಡಬಾರದು. ಇಂತಹ ಕ್ರಮಗಳು ನ್ಯಾಯಿಕ ಆಡಳಿತದಲ್ಲಿ ಮದ್ಯ ಪ್ರವೇಶಿಸದಂತೆ ಫೆಬ್ರವರಿ 3ರಂದು ವಕೀಲರ ಒಕ್ಕೂಟಗಳಿಗೆ ಪತ್ರ ಬರೆಯಲಾಗಿತ್ತು ಎಂದೂ ಹೈಕೋರ್ಟ್ ಪೀಠ ತಿಳಿಸಿದೆ.

## ನಗರದಲ್ಲಿ ಇಂದು ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವ

ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ಕುಂದುವಾಡ ರಸ್ತೆಯಲ್ಲಿ ದೇವಿಯ 16 ನೇ ವಾರ್ಷಿಕೋತ್ಸವ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ 12 ನೇ ವಾರ್ಷಿಕೋತ್ಸವ ಕಾರ್ಯಕ್ರಮವವು ಇಂದಿನಿಂದ ಮೂರು ದಿನ ನಡೆಯಲಿದೆ.

ಇಂದು ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕದೊಂದಿಗೆ ಆರಂಭವಾಗಿ, ಬೆಳಿಗ್ಗೆ 8.30 ರಿಂದ 12.30 ರವರೆಗೆ ಚಂಡಿಕಾ ಹೋಮ ನಡೆಯಲಿದೆ. ನಾಳೆ ಶನಿವಾರ ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕವಿದೆ. ಸಂಜೆ 6 ಗಂಟೆಗೆ ಶ್ರೀ ಗುರುವರ್ಯ ಪ್ರಭಾಕರ ಭುವಬೋದಲೆ ಮಹಾರಾಜ್ (ಪಂಡರಾಪುರ) ಇವರ ಸಮ್ಮುಖದಲ್ಲಿ ಪೋತಿ ಸ್ಥಾಪನೆ ಮಾಡುವರು. ರಾತ್ರಿ 7 ರಿಂದ 9 ರವರೆಗೆ ಭಜನೆ, ಕೀರ್ತನೆ ನಡೆಯಲಿದೆ. ರಾತ್ರಿ 9.30 ಕ್ಕೆ ಪ್ರಸಾದ ವಿನಿಯೋಗವಿದೆ.

ನಾಡಿದ್ದು ದಿನಾಂಕ 14ರ ಭಾನುವಾರ ಬೆಳಿಗ್ಗೆ 5.30 ಗಂಟೆಗೆ ಕಾಕಡಾರತಿ, ನಂತರ ಭಜನೆ, 8.30 ಕ್ಕೆ ಉಪಹಾರ, 9 ಗಂಟೆಗೆ ಭಜನೆ, ಮಹಾಮಂಗಳಾರತಿ ಹಾಗೂ 12 ಗಂಟೆಗೆ ಸಂತ ಸಮಾರಾಧನೆಯೊಂದಿಗೆ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗವಿದೆ.

## ರಾಜಕೀಯ ಅಸ್ಪೃಶ್ಯತೆ ಒಪ್ಪುವುದಿಲ್ಲ ಒಮ್ಮತದ ರಾಜಕೀಯಕ್ಕೆ ಬೆಂಬಲ

ನವದೆಹಲಿ, ಫೆ. 11 – ಬಿಜೆಪಿ ರಾಜಕೀಯ ಅಸ್ಪೃಶ್ಯತೆಯಲ್ಲಿ ನಂಬಿಕೆ ಇರಿಸಿಲ್ಲ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಒಮ್ಮತದ ರಾಜಕೀಯವನ್ನು ಬೆಂಬಲಿಸುವುದಾಗಿ ಹೇಳಿದ್ದಾರೆ.

ಬಿಜೆಪಿ ಹಿಂದಿನ ಸ್ವರೂಪವಾದ ಜನಸಂಘದ ಸ್ಥಾಪಕ ಹಾಗೂ ಚಿಂತಕ ದೀನ್‌ದಯಾಳ್ ಉಪಾಧ್ಯಾಯ್ ಅವರ 53ನೇ ಪುಣ್ಯತಿಥಿಯ ಸಂದರ್ಭದಲ್ಲಿ ಬಿಜೆಪಿ ಸಂಸದರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪ್ರಧಾನಿ, ಬಿಜೆಪಿಯು ಸದಾ ರಾಷ್ಟ್ರನೀತಿಯನ್ನು ರಾಜನೀತಿಗಿಂತ ಎತ್ತರದಲ್ಲಿ ಇರಿಸಿದೆ. ರಾಜಕೀಯ ವಿರೋಧಿಗಳಿಗೂ ಗೌರವಿಸುತ್ತದೆ ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ತಮ್ಮ ಸರ್ಕಾರವು ಮಾಜಿ ರಾಷ್ಟ್ರಪತಿ ಹಾಗೂ ಕಾಂಗ್ರೆಸ್ ಹಿರಿಯ ನಾಯಕ ಪ್ರಣಬ್ ಮುಖರ್ಜಿ ಅವರಿಗೆ ಭಾರತ ರತ್ನ ನೀಡಿ ಗೌರವಿಸಿದೆ. ಅಸ್ಸಾಂ ಮಾಜಿ ಮುಖ್ಯಮಂತ್ರಿ ತರುಣ್ ಗೊಗೊಯ್ ಹಾಗೂ ನಾಗಾಲ್ಯಾಂಡ್ ಮಾಜಿ ಮುಖ್ಯಮಂತ್ರಿ ಎಸ್.ಸಿ. ಜಮೀರ್ ಅವರಿಗೂ ಪದ್ಮ ಪ್ರಶಸ್ತಿಗಳನ್ನು ನೀಡಿದೆ ಎಂದು ಪ್ರಧಾನಿ ಹೇಳಿದ್ದಾರೆ. ಈ ಇಬ್ಬರು ಮುಖ್ಯಮಂತ್ರಿಗಳೂ ಕಾಂಗ್ರೆಸ್‌ಗೆ ಸೇರಿದವರಾಗಿದ್ದಾರೆ.

ಸರ್ಕಾರ ಬಹುಮತದಿಂದ ನಡೆಯುತ್ತದೆ. ಆದರೆ, ದೇಶ ಸರ್ವಾನುಮತದಿಂದ ನಡೆಯುತ್ತದೆ ಎಂದು 2014ರಲ್ಲೇ ನಾನು ಸಂಸತ್ತಿನಲ್ಲಿ ತಿಳಿಸಿದ್ದೆ. ನಾವು ಇಲ್ಲಿ ಕೇವಲ ಸರ್ಕಾರ ನಡೆಸಲು ಬಂದಿಲ್ಲ, ದೇಶವನ್ನು ಮುನ್ನಡೆಸಲು ಬಂದಿದ್ದೇವೆ ಎಂದು ಪ್ರಧಾನಿ ತಿಳಿಸಿದ್ದಾರೆ.

## ಹರಿಹರದಲ್ಲಿ ಶ್ರೀ ಪುರಂದರ ದಾಸೋತ್ಸವ



ಹರಿಹರ, ಫೆ.11- ನಗರದ ಶ್ರೀ ರಾಘವೇಂದ್ರ ಸ್ವಾಮಿ ಮಠದ ವತಿಯಿಂದ ಶ್ರೀ ಪುರಂದರ ದಾಸೋತ್ಸವ ಸಮಾರಂಭದ ನಿಮಿತ್ತವಾಗಿ ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಶ್ರೀ ಪುರಂದರ ದಾಸೋತ್ಸವ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು.

ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಸಂಜೆ ದಾಸರ ಭಜನಾ ಕಾರ್ಯಕ್ರಮ ನಡೆಯಿತು. ನಂತರ ಶೋಭಾ ಯಾತ್ರೆಯು ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ರಾಜಬೀದಿಗಳ ಮುಖಾಂತರ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣಕ್ಕೆ ಬಂದು ತಲುಪಿತು. ನಂತರದಲ್ಲಿ ಮಠದ ಆವರಣದಲ್ಲಿ ಬೆಳ್ಳಿ ರಥೋತ್ಸವ, ಮಹಾಮಂಗಳಾರತಿ, ಭಜನೆ, ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭದಲ್ಲಿ ರಾಘವೇಂದ್ರ ಸ್ವಾಮಿ ಮಠದ ಪ್ರಧಾನ ಗುರುಗಳಾದ ಶ್ರೀ ವರಹಾಚಾರ್, ಪವನ್ ಕುಮಾರ್, ಮಾಜಿ ನಗರಸಭೆ ಉಪಾಧ್ಯಕ್ಷೆ ಅಂಬುಜಾ ಪಿ. ರಾಜೋಳ್ಳಿ, ರೂಪಾ ಕಾಟ್ವೆ, ಮಂಜುಳಾ, ದೇವಿರಮ್ಮ, ವಿವಿಧ ಮಹಿಳಾ ಭಜನಾ ಮಂಡಳಿಯ ಸದಸ್ಯರು ಹಾಜರಿದ್ದರು

## ಸೈನ್ಯ ವಾಪಸಾತಿಗೆ ಭಾರತ-ಚೀನಾ ಒಪ್ಪಿಗೆ

**(1ನೇ ಪುಟದಿಂದ)** ಎಂದು ಭಾರತ ತಿಳಿಸಿತ್ತು. ಈ ಪ್ರದೇಶದಲ್ಲಿ ಇರುವ ಬೆಟ್ಟಗಳನ್ನು ಫಿಂಗರ್ ಎಂದು ಗುರುತಿಸಲಾಗುತ್ತದೆ.

ಚೀನಾದ ಸೈನ್ಯ ಫಿಂಗರ್ 8 ಪ್ರದೇಶಕ್ಕೆ ಹಿಂದೆ ಸರಿಯಲಿದೆ ಎಂದು ಘೋಷಿಸಿರುವುದು ಪ್ರಮುಖವಾಗಿದೆ ಎಂದು ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ನ್ಯಾಷನಲ್ ಸೆಕ್ಯೂರಿಟಿ ಸೆಂಟರ್‌ನ ಸಹಾಯಕ ಪ್ರಾಧ್ಯಾಪಕ ಡಾ. ಲಕ್ಷ್ಮಣ್ ಬೆಹರಾ ಹೇಳಿದ್ದಾರೆ.

ಲೋಕಸಭೆ ಹಾಗೂ ರಾಜ್ಯಸಭೆಗಳೆರಡರಲ್ಲಿ ಹೇಳಿಕೆ ನೀಡಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಪಂಗಾಂಗ್ ಕೊಳದ ದಕ್ಷಿಣ ದಂಡೆಯಲ್ಲೂ ಸಹ ಇದೇ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

ಐದು ತಿಂಗಳ ಹಿಂದೆ ಚೀನಾದ ಸೈನ್ಯ ಈ ಪ್ರದೇಶದಲ್ಲಿ ಪ್ರಚೋದನಕಾರಿಯಾಗಿ ವರ್ತಿಸಿತ್ತು. ನಂತರ ಭಾರತೀಯ ಪಡೆಗಳು ಮುಖಪರಿ, ರೆಚಿನ್ ಲಾ ಹಾಗೂ ಮಗರ್‌ನ ವ್ಯೂಹಾತ್ಮಕ ಪ್ರದೇಶಗಳನ್ನು ವಶಕ್ಕೆ ತೆಗೆದುಕೊಂಡಿದ್ದವು. ಪಂಗಾಂಗ್ ಉತ್ತರ ದಂಡೆಯ ಎರಡೂ ಕಡೆಗಳಲ್ಲಿ ತಾತ್ಕಾಲಿಕವಾಗಿ ಸೈನಿಕ ಚಟುವಟಿಕೆಗಳನ್ನು ನಿಲ್ಲಿಸಲು ನಿರ್ಧರಿಸಲಾಗಿದೆ. ಸಾಂಪ್ರದಾಯಿಕ ಪ್ರದೇಶಗಳಲ್ಲಿ ಗಸ್ತು ತಿರುಗುವುದನ್ನೂ ನಿಲ್ಲಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ.

ಎರಡೂ ಕಡೆಯವರು ರಾಯಭಾರಿ ಒಪ್ಪಂದಕ್ಕೆ ಬಂದ ನಂತರವೂ ಗಸ್ತಿಗೆ ಮತ್ತೆ ಅವಕಾಶ ನೀಡಲಾಗುವುದು. ನಿನ್ನೆಯಿಂದಲೇ ಪಂಗಾಂಗ್ ಕೊಳದ ಉತ್ತರ ಹಾಗೂ ದಕ್ಷಿಣ ದಂಡೆಗಳಲ್ಲಿ ಈ ನಿರ್ಧಾರ ಜಾರಿಗೆ ಬಂದಿದೆ ಎಂದು ಸಿಂಗ್ ತಿಳಿಸಿದ್ದಾರೆ.

ಪಂಗಾಂಗ್ ಕಣಿವೆಯಲ್ಲಿ ಸೈನ್ಯಗಳನ್ನು ಹಿಂದೆ ಪಡೆದ ನಂತರ ಉಭಯ ಸೈನ್ಯಗಳ ಹಿರಿಯ ಕಮಾಂಡರ್‌ಗಳ ಹಂತದ ಮಾತುಕತೆ ಇನ್ನು 48 ಗಂಟೆಗಳ ಒಳಗೆ ನಡೆಯಲಿದೆ ಎಂದೂ ಅವರು ಹೇಳಿದ್ದಾರೆ.

## ನಗರದ ಹಲವೆಡೆ ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಎಫ್-9 ಪಿ.ಜೆ. ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ವೃತ್ತ, ಪೊಲೀಸ್ ಕ್ವಾರ್ಟರ್ಸ್, ಚರ್ಚ್ ರಸ್ತೆ, ಈದ್ಗಾ ಕಾಂಪ್ಲೆಕ್ಸ್, ಅರುಣಾ ಚಿತ್ರ ಮಂದಿರ, ವಿನೋಬ ನಗರ, ಸಿ.ಜೆ. ಆಸ್ಪತ್ರೆ, ಬಾಪೂಜಿ ಆಸ್ಪತ್ರೆ, ಎಂ.ಸಿ.ಸಿ. ಎ ಬ್ಲಾಕ್, ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ವೃತ್ತ, ಮಂಡಿಪೇಟೆ, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಎನ್.ಆರ್. ರಸ್ತೆ, ಇಸ್ಲಾಂ ಪೇಟೆ, ಬೆಳ್ಳೂಡಿ ಗಲ್ಲಿ, ಬಿ.ಟಿ. ಗಲ್ಲಿ, ವಿಜಯಲಕ್ಷ್ಮಿ ರಸ್ತೆ, ಎಂ.ಜಿ. ರಸ್ತೆ, ಗೂಡ್‌ಶೆಡ್ ರಸ್ತೆ, ಗಡಿಯಾರ ಕಂಬ, ಆಜಾದ್‌ನಗರ, ಅಕ್ಸಾ ಮಸೀದಿ, ಹೆಗಡೆ ನಗರ, ಮಾಗಾನಹಳ್ಳಿ ರಸ್ತೆ, ಅಮೆಜಾನ್ ಬಾಬಾಜಾನ್ ದರ್ಗಾ, ಜೋಗಲ್ ಬಾಬಾ ಲೇಔಟ್. ಎಸ್.ಎಸ್. ಬಿ. ಬ್ಲಾಕ್, ಬಾಲಾಜಿ ನಗರ, ಬಸವೇಶ್ವರ ನಗರ, ಕುಂದವಾಡ ವಾಟರ್ ಸಪ್ಲೇ.

ಇಂದು ಮಧ್ಯಾಹ್ನ 2 ರಿಂದ ಸಂಜೆ 6 ರವರೆಗೆ ಎಂ.ಸಿ.ಸಿ. ಬಿ. ಬ್ಲಾಕ್, ಮಾಮಸ್ ಜಾಯಿಂಟ್ ರಸ್ತೆ. ಸಿದ್ದವೀರಪ್ಪ ಬಡಾವಣೆ, ಎಸ್.ಎಸ್. ಲೇಔಟ್ ಎ ಮತ್ತು ಬಿ ಬ್ಲಾಕ್, ಎಂ.ಸಿ.ಸಿ. ಬಿ. ಬ್ಲಾಕ್, ಕುವೆಂಪು ನಗರ, ಶಾಮನೂರು ರಸ್ತೆ, ಬಿ.ಐ.ಇ.ಟಿ. ಕಾಲೇಜು, ನಿಜಲಿಂಗಪ್ಪ ಬಡಾವಣೆ. ಮೌನೇಶ್ವರ ಬಡಾವಣೆ, ಎಂ.ಯು.ಎಸ್.ಎಸ್. ಕಾಲೋನಿ, ನಿಟ್ಟುವಳ್ಳಿ, ನಿಟ್ಟುವಳ್ಳಿ ಹೊಸ ಬಡಾವಣೆ, ಲೆನಿನ್ ನಗರ, ಸರಸ್ವತಿ ನಗರ, ಶಕ್ತಿ ನಗರ, ಡಿ.ಸಿ.ಎಂ. ಟೌನ್ ಶಿಪ್, ಕೊಟ್ಟೂರೇಶ್ವರ ಬಡಾವಣೆ, ಕೆ.ಎಸ್.ಆರ್.ಟಿ.ಸಿ., ತಾಲೂಕು ಆಫೀಸ್, ಅಗ್ನಿ ಶಾಮಕ ಠಾಣೆ. ಗಣೇಶ್ ಮಿಲ್, ಭಗತ್ ಸಿಂಗ್ ನಗರ, ಕೆ.ಎಸ್.ಆರ್.ಟಿ.ಸಿ. ಸುತ್ತಮುತ್ತ, ಈರುಳ್ಳಿ ಮಾರುಕಟ್ಟೆ, ತರಕಾರಿ ಮಾರುಕಟ್ಟೆ, ಕೆ.ಟಿ.ಜೆ. ನಗರ, ಡಾಂಗೇ ಪಾರ್ಕ್, ಶಿವಪ್ಪ ವೃತ್ತ, ತ್ರಿಶೂಲ್ ರಸ್ತೆ, ಕೆ.ಬಿ. ಬಡಾವಣೆ, ಲಾಯರ್ ರಸ್ತೆ, ಅಶೋಕ ರಸ್ತೆ, ರೆಹಮಾನ್ ರಸ್ತೆ, ದೇವೇಂದ್ರಪ್ಪ ಮಿಲ್, ಕೊರಚರ ಹಟ್ಟಿ, ಯಲ್ಲಮ್ಮ ಪಾರ್ಕ್, ದೇವರಾಜ್ ಕ್ವಾರ್ಟರ್ಸ್, ಇಂದಿರಾ ನಗರ, ಕಾರ್ಲ್‌ಮಾರ್ಕ್ಸ್ ನಗರ, ಸಿದ್ದರಾಮೇಶ್ವರ ಬಡಾವಣೆ, ಮಂಡಕ್ಕಿ ಬಟ್ಟಿ, ಶಿವಪಾರ್ವತಿ ನಗರ, ಕೋಳಿ ಚನ್ನಪ್ಪ ಮಿಲ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

**ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ**

ಭರಮಸಾಗರದ ಹಿರಿಯ ಪತ್ರಕರ್ತ
ದಿ. ಎಸ್.ಬಿ.ಜಯರಾವ್ ಅವರ ಎರಡನೇ ಸೊಸೆ ಹಾಗೂ
ಕನ್ನಡ ಪ್ರಭ ಪತ್ರಿಕೆಯ ಹಿರಿಯ ಉಪ ಸಂಪಾದಕ
ಬಿ.ಜೆ.ರಾಮಚಂದ್ರ ರಾವ್ ಅವರ ಧರ್ಮಪತ್ನಿ, ಮುಖ್ಯ ಶಿಕ್ಷಕಿ



**ಸಂಧ್ಯಾ ಕೆ.ಆರ್.**

ಇವರು ದಿನಾಂಕ 3-2-2021ರ ಬುಧವಾರ ಬೆಂಗಳೂರಿನಲ್ಲಿ
ಸ್ವರ್ಗಸ್ಥರಾದರೆಂದು ತಿಳಿಸಲು ತೀವ್ರ ವಿಷಾದಿಸುತ್ತೇವೆ.
ತತ್ಸಂಬಂಧಿತವಾಗಿ **ದಿನಾಂಕ 12-2-2021ರ ಶುಕ್ರವಾರ**
**ಧರ್ಮೋದಕ, ದಿನಾಂಕ 14-2-2021 ಭಾನುವಾರ ಸಪಿಂಡೀಕರಣ,**
**ಮಾಸಿಕ** (ಎಲ್ಲರೂ ನಮಸ್ಕಾರ ಮಾಡುವುದು) ಹಾಗೂ 15-02-2021ರ ಸೋಮವಾರ


**ವೈಕುಂಠ ಸಮಾರಾಧನೆಯನ್ನು**

ಭರಮಸಾಗರದಲ್ಲಿ ಆಯೋಜಿಸಲಾಗಿದೆ. 12-02-2021ರ ಶುಕ್ರವಾರ
ಬೆಳಿಗ್ಗೆ 10 ಗಂಟೆಗೆ ಭರಮಸಾಗರದ ದೊಡ್ಡ ಕೆರೆಯ ಪಕ್ಕದಲ್ಲಿರುವ
ಎಚ್. ಪಿ ಗ್ಯಾಸ್ ಏಜೆನ್ಸಿಯವರ ತೋಟದಲ್ಲಿ ಧರ್ಮೋದಕ ಕಾರ್ಯ ನಡೆಯುವುದು.

ಇಂತಿ ದುಃಖ ತಪ್ತರು

**ಜಯಮ್ಮ ಎಸ್.ಬಿ.ಜಯರಾವ್ ಹಾಗೂ ಕುಟುಂಬ ವರ್ಗದವರು.**
ಭರಮಸಾಗರ, ಚಿತ್ರದುರ್ಗ ಜಿಲ್ಲೆ.
**ಮೊ. 97403 69260, 82773 93938, 99648 91029**

**ಹೊಳಗುಂದಿ ಮಂಜುನಾಥ್ ನಿಧನ**



ದಾವಣಗೆರೆ ಪಿ.ಬಿ ರಸ್ತೆ ಸವಣೂರು ಪ್ಲಾಜಾ ಹಿಂಭಾಗದ (# 357/11) ವಾಸಿ, ನಿವೃತ್ತ ವೈಜ್ಞಾನಿಕ ಅಧಿಕಾರಿಗಳಾಗಿದ್ದ ಹೊಳಗುಂದಿ ಮಂಜುನಾಥ್ (62) ಅವರು ದಿನಾಂಕ : 11.02.2021 ರಂದು ಗುರುವಾರ ಮಧ್ಯಾಹ್ನ 12.45ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.02.2021 ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ಓಬಳಾಪುರದ ಹೊನ್ನಮ್ಮ ನಿಧನ**




ಹರಪನಹಳ್ಳಿ ತಾಲ್ಲೂಕು ಓಬಳಾಪುರ ಗ್ರಾಮದ ದಿ॥ ಗೋಣೆಪ್ಪ ಅವರ ಧರ್ಮಪತ್ನಿ ಶ್ರೀಮತಿ ಹೊನ್ನಮ್ಮ (87) ಅವರು ದಿನಾಂಕ 11.02.2021ರ ಗುರುವಾರ ರಾತ್ರಿ 9.30 ಕ್ಕೆ ನಿಧನರಾದರು. 6 ಜನ ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು ಮತ್ತು ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.02.2021ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಓಬಳಾಪುರದಲ್ಲಿ ಅವರ ಸ್ವಂತ ಜಮೀನಿನಲ್ಲಿ ನಡೆಯಲಿದೆ.

# ಹಣಕ್ಕಾಗಿ ವೃದ್ಧ ದಂಪತಿಯ ಮೇಲೆ ಹಲ್ಲೆ: ವೃದ್ಧನ ಸಾವು

ನ್ಯಾಮತಿ, ಫೆ.11- ಹಣ ಸುಲಿಗೆ ಮಾಡಲು ವಯೋವೃದ್ಧ ದಂಪತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ವೃದ್ಧನನ್ನು ಕೊಲೆ ಮಾಡಿದ ನಾಲ್ವರು ಆರೋಪಿಗಳನ್ನು ನ್ಯಾಮತಿ ಪೊಲೀಸರು ಇಂದು ಬಂಧಿಸಿದ್ದಾರೆ.

ನ್ಯಾಮತಿ ತಾಲ್ಲೂಕು ಸಿದ್ದಾಪುರ ಗ್ರಾಮದ ವಿರುಪಾಕ್ಷಪ್ಪ (65) ಮತ್ತು ಪಾರ್ವತಮ್ಮ (62) ಈ ದಂಪತಿ ಮೇಲೆ ಹಲ್ಲೆ ನಡೆದಿದ್ದು, ಹಲ್ಲೆಯಿಂದ ಗಾಯಗೊಂಡಿದ್ದ ವಿರುಪಾಕ್ಷಪ್ಪ ಮೃತಪಟ್ಟಿದ್ದಾರೆ. ನ್ಯಾಮತಿ ತಾಲ್ಲೂಕು ಬಿದರಹಳ್ಳಿ ಗ್ರಾಮದವರಾದ ಕೆಲಸಗಾರ ಟಿ. ಮಂಜಾನಾಯ್ಕ, ಸಿದ್ದೇಶನಾಯ್ಕ, ಎಸ್. ಮಂಜಾನಾಯ್ಕ, ಹೊಸಜೋಗ ಗ್ರಾಮದ ಎಸ್. ನಾಗರಾಜನಾಯ್ಕ ಬಂಧಿತ ಆರೋಪಿಗಳು.

ಈ ದಂಪತಿ ಇಬ್ಬರೂ ಗ್ರಾಮದ ಸವಳಂಗ-ಶಿಕಾರಿಪುರ ರಸ್ತೆ ಬದಿಯಲ್ಲಿ ಟೀ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದು, ಪ್ರತಿ ದಿನ ರಾತ್ರಿ ಅಂಗಡಿಯಲ್ಲೇ ಮಲಗುತ್ತಿದ್ದರು. ಎಂದಿನಂತೆ ಟೀ ಅಂಗಡಿ ಯಲ್ಲಿದ್ದ ವೇಳೆ ಇದೇ 4ರಂದು ಬೆಳಗಿನ ಜಾವ 3.30 ರಿಂದ 4 ಗಂಟೆ ಸಮಯದಲ್ಲಿ ಅಂಗಡಿಗೆ ಟೀ ಸಿಗರೇಟು ಕೇಳಲು ಬಂದ ಬಂಧಿತ ಆರೋಪಿಗಳು ಏಕಾಏಕಿ ಕಬ್ಬಿಣದ ಸುತ್ತಿಗೆ ಮತ್ತು ಕಲ್ಲಿನಿಂದ ಈ ದಂಪತಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಕೊಲೆಗೆ ಪ್ರಯತ್ನಿಸಿದ್ದಾರೆ. ಹಲ್ಲೆಯಿಂದಾಗಿ ಗಂಭೀರವಾಗಿ ಗಾಯಗೊಂಡಿದ್ದ ವಿರುಪಾಕ್ಷಪ್ಪ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ.



### ಕೊಲೆ ಆರೋಪಿಗಳ ಬಂಧನ

ಎಸ್ಪಿ ಹನುಮಂತರಾಯ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು, ನಂತರ ಎಎಸ್ಪಿ ಎಂ. ರಾಜೀವ್, ಚನ್ನಗಿರಿ ಉಪ ವಿಭಾಗದ ಡಿವೈಎಸ್‌ಪಿ ಪ್ರಶಾಂತ್ ಜಿ. ಮುನ್ನೋಳಿ ಮಾರ್ಗದರ್ಶನದಲ್ಲಿ ಆರೋಪಿತರ ಪತ್ತೆಗೆ ಹೊನ್ನಾಳಿ ಸಿಪಿಐ ಟಿ.ವಿ. ದೇವರಾಜ್ ನೇತೃತ್ವದಲ್ಲಿ ಪಿಎಸ್ ಐ ಪಿ.ಎಸ್. ರಮೇಶ್ ಮತ್ತು ಸಿಬ್ಬಂದಿಗಳಾದ ರವಿ ನಾಯಕ, ಕರಿಬಸಪ್ಪ ತಳವಾರ, ಕೆ. ಮಂಜಪ್ಪ, ಹೆಚ್. ರಜಾಕ್, ಸುರೇಶ್, ಉಮೇಶ್, ಸಂಜೀವ ಕೊಟಗಿಮನಿ, ಚನ್ನೇಶ್, ಮಂಜುನಾಥ್, ಕೆ.ಆರ್. ರಾಮಪ್ಪ, ಚಂದ್ರಶೇಖರ, ಪ್ರಶಾಂತ ಮತ್ತು ಎಂ. ಆನಂದ ಅವರನ್ನೊಳಗೊಂಡ ತಂಡವು ಆರೋಪಿಗಳನ್ನು ಬಂಧಿಸಿ, ಸುಲಿಗೆ ಮಾಡಿದ್ದ ಹಣವನ್ನು ವಶಕ್ಕೆ ಪಡೆದಿದ್ದಾರೆ.

# ಸಾಮಾಜಿಕ ಜಾಲತಾಣಗಳ ನಿಯಂತ್ರಣಕ್ಕೆ ಕೇಂದ್ರದ ಕರಡು

## ವಿವಾದಾತ್ಮಕ ಅಂಶಗಳಿಗೆ ಜಾಲತಾಣಗಳನ್ನೂ ಹೊಣೆ ಮಾಡುವ ಸಾಧ್ಯತೆ

ನವದೆಹಲಿ, ಫೆ. 11 – ಎಲ್ಲಾ ಸಾಮಾಜಿಕ ಜಾಲತಾಣಗಳು, ಓವರ್ ದಿ ಟಾಪ್ (ಒ.ಟಿ.ಟಿ.) ವೇದಿಕೆಗಳು ಹಾಗೂ ಸುದ್ದಿಗೆ ಸಂಬಂಧಿಸಿದ ಜಾಲತಾಣಗಳ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ಕರಡು ನೀತಿಯನ್ನು ರೂಪಿಸಿದೆ. ಸ್ವಯಂ ನಿಯಂತ್ರಣದ ಆಧಾರದ ಮೇಲೆ ಈ ವೇದಿಕೆಗಳ ಮೇಲೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ಕರಡು ಹೊಂದಿದೆ.

ಕಾನೂನು ಜಾರಿ ಸಂಸ್ಥೆಗಳು ನೀಡುವ ಯಾವುದೇ ದೂರುಗಳನ್ನು ದಿನದ 24 ಗಂಟೆ ಕಾಲವೂ ಪರಿಶೀಲಿಸುವ ಮುಖ್ಯ ಅನುಪಾಲನಾ ಅಧಿಕಾರಿಯೊಬ್ಬರನ್ನು ಹೊಂದಲು ಕರಡಿನಲ್ಲಿ ಪ್ರಸ್ತಾಪಿಸಲಾಗಿದೆ. ನಿಯಂತ್ರಣ ವ್ಯವಸ್ಥೆಯೊಂದನ್ನು ರೂಪಿಸ ಲಾಗುವುದು ಹಾಗೂ ಉಸ್ತುವಾರಿ ವ್ಯವಸ್ಥೆ ಯೊಂದನ್ನು ಹೊಂದಲಾಗುವುದು ಎಂದು ಮೂಲಗಳು ತಿಳಿಸಿವೆ. ನಿಯಂತ್ರಣಕ್ಕೆ ಒಳಪಡುವ ಸಂಸ್ಥೆಗಳು ಹಾಗೂ ನಿಯಂತ್ರಣ ಸಂಸ್ಥೆಯ ನಡುವೆ ಸಮನ್ವಯತೆಗಾಗಿ ಉಸ್ತುವಾರಿ ಸಮಿತಿಯೊಂದನ್ನು ರಚಿಸಲಾಗುವುದು. ತುರ್ತು ಸಂದರ್ಭದಲ್ಲಿ ಕಾರ್ಯದರ್ಶಿ ಹಂತದ ಅಧಿಕಾರಿಯೊಬ್ಬರು ಕ್ರಮ ತೆಗೆದುಕೊಂಡು, ಆ ಬಗ್ಗೆ ಸಮಿತಿಗೆ 48 ಗಂಟೆಗಳಲ್ಲಿ ವರದಿ ಸಲ್ಲಿಸಲಿದ್ದಾರೆ.

ವಿವಾದಾತ್ಮಕ ಅಂಶಗಳನ್ನು ಪ್ರಕಟಿಸಿದ ಸಂದರ್ಭದಲ್ಲಿ ಪ್ರಸಕ್ತ ಸಾಮಾಜಿಕ ಜಾಲತಾಣಗಳು ಯಾವುದೇ ಹೊಣೆಗಾರಿಕೆ ಹೊಂದಿಲ್ಲ. ಈ ಮುಕ್ತತೆಯನ್ನು ಸಂಪೂರ್ಣ ಕೈ ಬಿಡಲು ಇಲ್ಲವೇ ಗಣನೀಯವಾಗಿ ಕಡಿಮೆ ಮಾಡಲು ಕರಡಿನಲ್ಲಿ ಪ್ರಸ್ತಾಪಿಸಲಾಗಿದೆ.

ಸಾಮಾಜಿಕ ಜಾಲತಾಣ ಬಕೆದಾರರು ನಿಯಮ ಉಲ್ಲಂಘಿಸುವ ಮಾಹಿತಿ ಪ್ರಕಟಿಸಿದಾಗ ಎಚ್ಚರಿಸುವ ಹೊಣೆ ಸಾಮಾಜಿಕ ಜಾಲತಾಣಗಳ ಮೇಲೆ ಇರಲಿದೆ. ನ್ಯಾಯಾಲಯ ಇಲ್ಲವೇ ನಿಯೋಜಿತ ಸಂಸ್ಥೆ ತಿಳಿಸಿದ 36 ಗಂಟೆಗಳಲ್ಲಿ ಅಂತಹ ಮಾಹಿತಿಯನ್ನು ತೆಗೆದು ಹಾಕುವ ಜವಾಬ್ದಾರಿಯೂ ಜಾಲತಾಣಗಳ ಮೇಲಿರಲಿದೆ.

ಟ್ವಿಟ್ಟರ್‌ನಲ್ಲಿ ಇತ್ತೀಚೆಗೆ ಪ್ರಚೋದನಕಾರಿ ಅಂಶಗಳು ಪ್ರಕಟವಾಗಿದ್ದು, ಕೆಲ ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರ ತಿಳಿಸಿದೆ. ಆದರೆ, ಪತ್ರಕರ್ತರು, ಕಾರ್ಯಕರ್ತರು ಹಾಗೂ ರಾಜಕಾರಣಿಗಳ ಖಾತೆಗಳನ್ನು ತಡೆಯುವುದಿಲ್ಲ ಎಂದು ಟ್ವಿಟ್ಟರ್ ತಿಳಿಸಿದೆ. ಈ ಬಗ್ಗೆ ಸರ್ಕಾರ ಆಕ್ಷೇಪಿಸಿದ್ದು, ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದೆ. ಈ ಜಟಾಪಟಿಯ ನಡುವೆ ಕರಡು ನೀತಿಗಳು ಪ್ರಾಮುಖ್ಯತೆ ಪಡೆದುಕೊಂಡಿವೆ.

# ವಸತಿ ಸಾಲ ವಿಳಂಬ ಬೇಡ : ಮುಖ್ಯಮಂತ್ರಿ

**ಪ್ರಧಾನಮಂತ್ರಿ ಆವಾಸ್, ಸ್ವನಿಧಿ ಯೋಜನೆಗಳಿಗೆ ಆದ್ಯತೆ ನೀಡಲು ಸಿಎಂ ಸೂಚನೆ**

ಬೆಂಗಳೂರು, ಫೆ. 11 - ಪ್ರಧಾನ ಮಂತ್ರಿ ಆವಾಸ್ ಯೋಜನೆ ಮತ್ತು ಪ್ರಧಾನಮಂತ್ರಿ ಸ್ವನಿಧಿ ಯೋಜನೆಗಳಡಿ ಬ್ಯಾಂಕರ್‌ಗಳು ವಿಳಂಬ ಧೋರಣೆ ಅನುಸರಿಸದೇ ತ್ವರಿತವಾಗಿ ಸಾಲ ವಿತರಣೆ ಮಾಡಲು ಕ್ರಮ ಕೈಗೊಳ್ಳುವಂತೆ ಮುಖ್ಯ ಮಂತ್ರಿ ಯಡಿಯೂರಪ್ಪ ಸೂಚಿಸಿದ್ದಾರೆ.

ಅವರು ಇಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ಮತ್ತು ಪ್ರಧಾನಮಂತ್ರಿ ಸ್ವ ನಿಧಿ ಯೋಜನೆಗಳ ಪ್ರಗತಿ ಕುರಿತು ಬ್ಯಾಂಕರ್‌ಗಳೊಂದಿಗೆ ಚರ್ಚಿಸಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆ ಮತ್ತು ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಗಳು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬಡವರಿಗಾಗಿ ಜಾರಿಗೊಳಿಸಿರುವ ಮಹತ್ವಾಕಾಂಕ್ಷೆಯ ಯೋಜನೆ ಗಳು. ಇವುಗಳ ಅನುಷ್ಠಾನಕ್ಕೆ ಬ್ಯಾಂಕರ್‌ಗಳು ಆದ್ಯತೆ ನೀಡಬೇಕು ಎಂದು ಅವರು ಸೂಚಿಸಿದರು.

ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಈ ಎರಡೂ ಯೋಜನೆಗಳ ಪ್ರಗತಿ ಕುಂಠಿತವಾಗಿದೆ. ಈ ಯೋಜನೆಗಳಡಿ ಸಾಲ ಮಂಜೂರಾತಿ ವಿಳಂಬವಾಗುತ್ತಿರುವುದು ಗಮನಕ್ಕೆ ಬಂದಿದ್ದು, ಈ ಬಗ್ಗೆ ಆದ್ಯ ಗಮನ ಹರಿಸುವಂತೆ ಬ್ಯಾಂಕರ್‌ಗಳಿಗೆ ಮುಖ್ಯ ಮಂತ್ರಿಗಳು ತಿಳಿಸಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಸಲ್ಲಿಕೆ ಯಾಗಿರುವ ಅರ್ಜಿಗಳನ್ನು 15 ದಿನಗಳೊಳಗೆ ಆಯಾ ಜಿಲ್ಲೆಗಳ ಲೀಡ್ ಬ್ಯಾಂಕ್‌ಗಳಿಗೆ ಸಲ್ಲಿಸಲಾಗುವುದು. ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರು ಅವುಗಳನ್ನು ವಿವಿಧ ಬ್ಯಾಂಕುಗಳಿಗೆ ಕಳುಹಿಸಿ, ಮಂಜೂರಾತಿ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಅವರು ಸೂಚಿಸಿದರು.

ಪ್ರಧಾನಮಂತ್ರಿ ಆವಾಸ್ ಯೋಜನೆಯ ಸಿ.ಎಲ್.ಎಸ್.ಎಸ್ ಯೋಜನೆಯಡಿ ರಾಜ್ಯದಲ್ಲಿ 53,695 ಅರ್ಜಿಗಳಿಗೆ ಮಾತ್ರ ಮಂಜೂರಾತಿ ದೊರೆತಿದ್ದು, ಇತರೆ ರಾಜ್ಯಗಳಿಗೆ ಹೋಲಿಸಿದಾಗ, ನಮ್ಮ ರಾಜ್ಯ ಹಿಂದುಳಿದಿದೆ.

ಅದೇ ರೀತಿ ಪಾಲುದಾರಿಕೆಯಲ್ಲಿ ಕೈಗೆಟಕುವ ವಸತಿ ಯೋಜನೆಯಡಿ ಮಂಜೂರಾಗಿರುವ 3,46,414 ಪ್ರಕರಣಗಳ ಪೈಕಿ 1,16,168 ಪ್ರಕರಣಗಳಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ಕೇವಲ 19,658 ಮನೆಗಳು ಮಾತ್ರ ಪೂರ್ಣಗೊಂಡಿವೆ.

ಈ ಯೋಜನೆಯಡಿ ಬ್ಯಾಂಕಿನಿಂದ ನೀಡುವ ಸಾಲ ಪ್ರಕ್ರಿಯೆ ಪ್ರಾರಂಭವಾಗದಿರುವುದು ಯೋಜನೆಯ ಪ್ರಗತಿಗೆ ಪೂರಕವಾಗಿಲ್ಲ ಎಂದು ಮುಖ್ಯಮಂತ್ರಿಗಳು ಕಳವಳ ವ್ಯಕ್ತಪಡಿಸಿದರು.

ಈ ವಸತಿ ಯೋಜನೆ ನಗರದ ಬಡವರಿಗೆ ಸೂರು ಕಲ್ಪಿಸುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ರಾಜ್ಯದಲ್ಲಿ ಈ ಯೋಜನೆಯನ್ನು ಯಶಸ್ವಿ ಗೊಳಿಸಲು ಎಲ್ಲಾ ಬ್ಯಾಂಕುಗಳು ಹಾಗೂ ಅನುಷ್ಠಾನ ಸಂಸ್ಥೆಗಳು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಬೇಕು ಎಂದು ಸಲಹೆ ನೀಡಿದರು.

ಪ್ರಧಾನಮಂತ್ರಿ ಸ್ವನಿಧಿ ಯೋಜನೆಯು ಜುಲೈ 2020 ರಿಂದ ಜಾರಿಗೆ ಬಂದಿದ್ದು, ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದಿಂದ ಅನುದಾನ ಬಿಡುಗಡೆಯಾಗಲಿದೆ.

ಪಿ.ಎಂ. ಸ್ವನಿಧಿ ಯೋಜನೆಯಡಿ ಬೀದಿ ವ್ಯಾಪಾರಿಗಳಿಗೆ 10 ಸಾವಿರ ರೂ.ಗಳ ದುಡಿಯುವ ಬಂಡವಾಳ ಸೌಲಭ್ಯದೊಂದಿಗೆ ನಿಯಮಿತ ಪಾವತಿಗೆ ಶೇ. 7ರ ಬಡ್ಡಿ ದರದಂತಹ ಪ್ರೋತ್ಸಾಹಕಗಳನ್ನು ಹಾಗೂ ಡಿಜಿಟಲ್ ವಹಿವಾಟಿಗೆ ಪುರಸ್ಕಾರವನ್ನೂ ನೀಡಲಾಗುವುದು. ಈವರೆಗೆ 2,24,368 ಅರ್ಜಿಗಳನ್ನು ಯೋಜನೆಯಡಿ ಸ್ವೀಕರಿಸಲಾಗಿದ್ದು, ಕೇವಲ 66,423 ಅರ್ಜಿಗಳಿಗೆ ಮಂಜೂರಾತಿ ದೊರೆತಿದೆ. ರಾಜ್ಯದ ಬ್ಯಾಂಕುಗಳು ಶೇ 30 ರಷ್ಟು ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡಿವೆ.

ಕೊರೊನಾ ಸಾಂಕ್ರಾಮಿಕದಿಂದ ತತ್ತರಿಸಿರುವ ಬಡ ಜನರಿಗೆ ಈ ಯೋಜನೆ ಪ್ರಯೋಜನಕಾರಿಯಾಗಲಿದ್ದು, ಬಾಕಿ ಇರುವ ಎಲ್ಲ ಅರ್ಜಿಗಳನ್ನು ಬ್ಯಾಂಕುಗಳು ಅತಿ ಶೀಘ್ರವಾಗಿ ಮಂಜೂರಾತಿ ನೀಡಿ ವಿಲೇವಾರಿ ಮಾಡಬೇಕೆಂದು ಸೂಚಿಸಿದರು.

ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ನೀಡುವ ಯೋಜನೆಯಲ್ಲಿ ವಿವಿಧ ನಗರಗಳಲ್ಲಿ ಸಾಲ ಮಂಜೂರಾದರೂ ವಿತರಣೆಯಾಗದಿರುವ ಹಿನ್ನೆಲೆಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಅನುಕೂಲವಾಗುವ ವೇಳಾಪಟ್ಟಿ ನಿಗದಿಪಡಿಸಿ, ಸಾಲ ವಿತರಣೆ ಮಾಡುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

# ಟೋಲ್ ಸಮಸ್ಯೆ ಇತ್ಯರ್ಥ

## ಹೆದ್ದಾರಿ ಪ್ರಾಧಿಕಾರದ ಅಧಿಕಾರಿ ವಿಶ್ವನಾಥ್


ರಾಣೇಬೆನ್ನೂರು

ರಾಣೇಬೆನ್ನೂರು, ಫೆ.11- ಚಳಗೇರಿ ಟೋಲ್‌ನಲ್ಲಿ ಮೂಲ ಸೌಲಭ್ಯಗಳು ಸೇರಿದಂತೆ ರೈತರ ಎಲ್ಲಾ ಬೇಡಿಕೆಗಳನ್ನು ತಿಂಗಳೊಳಗಾಗಿ ಈಡೇರಿಸಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿ ವಿಶ್ವನಾಥ್ ಹೇಳಿದರು.

ಇಲ್ಲಿನ ತಹಶೀಲ್ದಾರ್ ಕಛೇರಿ ಸಭಾಂಗಣದಲ್ಲಿ ನಡೆದ ರೈತ ಸಂಘ, ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಟೋಲ್‌ನವರ ಅವೈಜ್ಞಾನಿಕ ಸರ್ವೀಸ್ ರಸ್ತೆ, ಅಂಡರ್ ಬ್ರಿಡ್ಜ್, ಗ್ರಿಲ್ ವಾಲ್ ಸೇರಿದಂತೆ ಸಣ್ಣ, ಸಣ್ಣ ಸೇತುವೆಗಳ ನಿರ್ಮಾಣ ಮುಂತಾದ ಕಾರಣಗಳಿಂದ ನೂರಾರು ಪ್ರಯಾಣಿಕರು ಪ್ರಾಣ ಕಳೆದುಕೊಂಡರು. ಸರ್ಕಾರ ಹಾಗೂ ವಾಹನ ಮಾಲೀಕರಿಗೆ ಗುತ್ತಿಗೆದಾರರು ವಂಚಿಸುತ್ತಲೇ ಬಂದಿದ್ದಾರೆ.

ಈ ಬಗ್ಗೆ ಸೂಕ್ತ ಕ್ರಮ ಜರುಗಿಸದಿದ್ದರೆ ಮುಂದಿನ ದಿನಗಳಲ್ಲಿ ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಲಾಗುವುದು ಎಂದು ರೈತ ಸಂಘದ ರವೀಂದ್ರಗೌಡ ಪಾಟೀಲ ಹಾಗೂ ಈರಣ್ಣ ಹಲಗೇರಿ ಒತ್ತಾಯಿಸಿದರು.

ಈ ಎಲ್ಲಾ ಸಮಸ್ಯೆಗಳ ಪರಿಹಾರದ ಜವಾಬ್ದಾರಿಯನ್ನು ತಹಶೀಲ್ದಾರ್ ಶಂಕರ ವಹಿಸಿಕೊಂಡು ಶೀಘ್ರವೇ ಕ್ರಮ ಕೈಗೊಳ್ಳಲು ಗುತ್ತಿಗೆದಾರರಿಗೆ ಸೂಚಿಸಿದರು.

ಟೋಲ್ ಪ್ಲಾಜಾದ ರಘು ಚೌಧರಿ, ವ್ಯವಸ್ಥಾಪಕ ವಸಂತಕುಮಾರ್, ಸಿಪಿಐ ಶ್ರೀಶೈಲ ಚೌಗಲಾ, ರೈತ ಮುಖಂಡರುಗಳಾದ ಸುರೇಶಪ್ಪ ಗರಡಿಮನಿ, ಹರಿಹರಗೌಡ ಪಾಟೀಲ್, ಡಿಳ್ಳೆಪ್ಪ ಸತ್ಯಪ್ಪನವರ, ಬಸವರಾಜ ಕೊಂಗಿ, ಶಂಭು ಪಾಟೀಲ ಸಭೆಯಲ್ಲಿ ಭಾಗವಹಿಸಿದ್ದರು.

# ವಿದ್ಯಾರ್ಥಿ ವೇತನ ಬಿಡುಗಡೆಗೆ ಆಗ್ರಹ

ದಾವಣಗೆರೆ, ಫೆ.11- ಕಳೆದ ಒಂದು ವರ್ಷದಿಂದ ನಿಲ್ಲಿಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಬಿಎಸ್‌ಪಿ ರಾಜ್ಯ ಸಂಯೋಜಕರೂ, ಕರ್ನಾಟಕ ಉಸ್ತುವಾರಿಯೂ ಆದ ಮಾದಸಂದ್ರ ಮುನಿಯಪ್ಪ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವಿಲ್ಲದೆ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ನ್ಯಾ. ನಾಗಮೋಹನ್ ದಾಸ್ ವರದಿಯನ್ನು ತಿಂಗಳೊಳಗೆ ಜಾರಿಗೆ ತರಬೇಕು. ರಾಜ್ಯದಲ್ಲಿ ಎಸ್ಸಿ, ಎಸ್ಟಿ ಜನಸಂಖ್ಯೆಗೆ ಅನುಗುಣವಾಗಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ಜಾರಿಗೊಳಿಸಲು ಒತ್ತಾಯಿಸಿದರು. ಈಗಿರುವ ಪರಿಶಿಷ್ಟ ಜಾತಿಗೆ ಶೇ. 15 ರಿಂದ 17ಕ್ಕೆ ಪ. ವರ್ಗಗಳನ್ನು ಶೇ. 3 ರಿಂದ ಶೇ. 7 ಕ್ಕೆ ಹೆಚ್ಚಳ ಮಾಡಬೇಕು. ರೈತರಿಗೆ ಮಾರಕವಾಗಿರುವ 3 ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿದರು.

ಗೋಹತ್ಯೆ ನಿಷೇಧ ಕಾಯ್ದೆಯನ್ನು ಕೂಡಲೇ ಹಿಂಪಡೆಯಬೇಕು. ಬೇಡ ಜಂಗಮ ಹೆಸರಿನಲ್ಲಿ ಸುಳ್ಳು ಪ್ರಮಾಣ ಪತ್ರ ಪಡೆಯುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಅಶೋಕ ಚಕ್ರವರ್ತಿ, ಡಿ. ಹನುಮಂತಪ್ಪ, ವೆಂಕಟೇಶಬಾಬು, ಮಹಮದ್ ಕಲೀಂ, ಧನರಾಜು ಉಪಸ್ಥಿತರಿದ್ದರು.

# ನಗರದ ಪಂಚ ದೇವಸ್ಥಾನದ ವಾರ್ಷಿಕೋತ್ಸವ ಇಂದಿನಿಂದ

ಪಿ.ಬಿ. ರಸ್ತೆಯಲ್ಲಿರುವ ಪಂಚ ದೇವಸ್ಥಾನಗಳ ವಾರ್ಷಿಕೋತ್ಸವವು ಇಂದು ಬೆಳಿಗ್ಗೆ 9.30 ಕ್ಕೆ ಚಂಡಿಹೋಮ, ನಾಳೆ ಶನಿವಾರ ಬೆಳಿಗ್ಗೆ 9 ಗಂಟೆಗೆ ಲಕ್ಷ್ಮಿ ನರಸಿಂಹಸ್ವಾಮಿ ಹಾಗೂ ಶ್ರೀ ಶನೇಶ್ವರಸ್ವಾಮಿ ಸಹಿತ ನವಗ್ರಹ ಹೋಮ ಹಾಗೂ ತೀರ್ಥ, ಪ್ರಸಾದ ವ್ಯವಸ್ಥೆ ಇದೆ.

# ಸ್ವನಿಧಿಗೆ ಸತಾಯಿಸುವ ಬ್ಯಾಂಕ್ ಅಧಿಕಾರಿಗಳಿಗೆ ಸಿಎಂ ತರಾಟೆ

ಬೆಂಗಳೂರು, ಫೆ. 11- ಪ್ರಧಾನಮಂತ್ರಿಗಳ ಸ್ವನಿಧಿ ಯೋಜನೆಯಡಿ ಸಾರ್ವಜನಿಕರಿಗೆ ಸರಿಯಾಗಿ ಸಾಲ ಸೌಲಭ್ಯ ನೀಡದೆ ಸತಾಯಿಸುವ ಬ್ಯಾಂಕ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ಚಳಿ ಬಿಡಿಸಿದರು. ವಿಧಾನಸೌಧದಲ್ಲಿ ಸ್ವನಿಧಿ ಮತ್ತು ಪ್ರಧಾನ ಮಂತ್ರಿಗಳ ಆವಾಸ್ ಯೋಜನೆ, ಬೆಂಗಳೂರು ವಸತಿ ಯೋಜನೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಸಿಎಂ ಸಾರ್ವಜನಿಕರಿಗೆ ಸಾಲ ವಿತರಣೆ ಮಾಡಲು ವಿಳಂಬ ಧೋರಣೆ ಅನುಸರಿಸುತ್ತಿರುವ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಕೆಂಡಕಾರಿದರು.

ಕೆಲವು ಬ್ಯಾಂಕ್ ಅಧಿಕಾರಿಗಳು ಸಾರ್ವಜನಿಕರಿಗೆ ಸಾಲ ಸೌಲಭ್ಯ ನೀಡಲು ದಾಖಲಾತಿಗಳನ್ನು ಕೇಳುತ್ತಿರುವುದು ಗಮನಕ್ಕೆ ಬಂದಿದೆ. ಎಲ್ಲಾ ದಾಖಲೆಗಳು ಸರಿಯಾಗಿದ್ದರೂ ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿದ್ದಾರೆ ಎಂಬ ಆರೋಪವಿದೆ. ನಿಮ್ಮ ಈ ವರ್ತನೆಯನ್ನು ಸಹಿಸಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ವೈಯಕ್ತಿಕವಾಗಿ ನಮಗೆ ಸಾವಿರಾರು ದೂರುಗಳು ಬಂದಿವೆ. ಫಲಾನುಭವಿಗಳು ಸಾಲ ಪಡೆಯಲು ಅರ್ಜಿ ಹಾಕಿದರೆ ದಾಖಲೆ ಸರಿಯಿಲ್ಲ. ಅದು ಸರಿಯಿಲ್ಲ. ಇದು ಸರಿಯಿಲ್ಲ ಎಂದು ಸಬೂಬು ಹೇಳುತ್ತೀರಿ. ತಾಂತ್ರಿಕ ಕಾರಣ ಮುಂದಿಟ್ಟು ವಿಳಂಬ ಮಾಡಲಾಗುತ್ತಿದೆ. ಸಾಲ ವಿತರಣೆ ಮಾಡುವುದರಲ್ಲೂ ಕರ್ನಾಟಕ 5ನೇ ಸ್ಥಾನದಲ್ಲಿದೆ. ಇದರಿಂದ ದೇಶಕ್ಕೆ ಯಾವ ಸಂದೇಶ ಹೋಗುತ್ತದೆ ಎಂದು ತರಾಟೆಗೆ ತೆಗೆದುಕೊಂಡರು.

ನೀವು ಸರಿಯಾಗಿ ಸಾಲ ನೀಡೇ ಇಲ್ಲ ಎಂಬುದು ಅಂಕಿ-ಅಂಶಗಳಿಂದಲೇ ತಿಳಿಯುತ್ತದೆ. ಫಲಾನುಭವಿಗಳಿಗೆ ಸಮರ್ಪಕವಾಗಿ ಸಾಲ ಸಿಗಬೇಕೆಂಬುದು ಪ್ರಧಾನಮಂತ್ರಿಯವರ ಉದ್ದೇಶವಾಗಿದೆ. ನಾವು ಹಿಂದೆ ಬಿದ್ದರೆ ಹೇಗೆ ಯೋಜನೆಯ ಉದ್ದೇಶ ಈಡೇರುತ್ತದೆ? ಎಂದು ಪ್ರಶ್ನಿಸಿದರು. ನನಗೆ ಇಲ್ಲ ಸಲ್ಲದ ಕಾರಣಗಳನ್ನು ಹೇಳಬೇಡಿ.

ಈ ತಿಂಗಳ ಅಂತ್ಯಕ್ಕೆ ಎಲ್ಲವೂ ಸರಿ ಹೋಗಬೇಕು. ಕೆಲವೇ ದಿನಗಳಲ್ಲಿ ಕರ್ನಾಟಕ ಸಾಲ ವಿತರಿಸುವ ರಾಜ್ಯಗಳಲ್ಲಿ ಮೊದಲ ಸ್ಥಾನಕ್ಕೆ ಬರಬೇಕು. ಅದಕ್ಕೆ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ಕೈಗೊಳ್ಳಿ ಎಂದು ಸೂಚನೆ ಕೊಟ್ಟರು.

# 17ನೇ ವಾರ್ಡಿನ ಪಿ.ಜೆ. ಬಡಾವಣೆಯಲ್ಲಿ ಕಾಮಗಾರಿ ಪರಿಶೀಲಿಸಿದ ಮೇಯರ್ ಅಜಯ್



ದಾವಣಗೆರೆ, ಫೆ.11- ಮಹಾನಗರ ವ್ಯಾಪ್ತಿಯ 17ನೇ ವಾರ್ಡಿನ ಪಿ.ಜೆ. ಬಡಾವಣೆಯ ಪಿಸಾಳೆ ಕಾಂಪೌಂಡ್‌ನಲ್ಲಿ ಯು.ಜಿ.ಡಿ ಕಾಮಗಾರಿ ಪೂರ್ಣಗೊಂಡಿದ್ದು, ಮಹಾಪೌರ ಬಿ.ಜಿ.ಅಜಯ್ ಕುಮಾರ್ ಅವರು ಇಂದು ಕಾಮಗಾರಿ ಪರಿಶೀಲಿಸಿದರು.

ಮಳೆಗಾಲದಲ್ಲಿ ಸ್ಥಳೀಯರಿಗೆ ತೊಂದರೆಯಾಗಬಾರದೆಂದು ಮಳೆ ನೀರು ಕಾಲುವೆ ಕಾಮಗಾರಿ, ರಾಜಕಾಲುವೆ ಮತ್ತು ಬಾಕ್ಸ್ ಚರಂಡಿ ಮೇಲ್ಭಾಗದಲ್ಲಿ ಅಳವಡಿಸಿರುವ ಸ್ಲ್ಯಾಬ್‌ಗಳನ್ನು ಪರಿಶೀಲಿಸಿ, ಕಾಮಗಾರಿಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.


ಪಿಸಾಳೆ ಕಾಂಪೌಂಡ್‌ನ ಒಂದು ಮತ್ತು ಎರಡನೇ ಕ್ರಾಸ್‌ನಲ್ಲಿ ನೀರಿನ ಸಮಸ್ಯೆ ಬಗ್ಗೆ ಸ್ಥಳೀಯರು ಮನವಿ ಮಾಡಿದ ಹಿನ್ನೆಲೆಯಲ್ಲಿ ಕೂಡಲೇ ಸ್ಥಳವನ್ನು ಗುರುತಿಸಿ ಆ ಜಾಗದಲ್ಲಿ ಕೊಳವೆ ಬಾವಿ ಕೊರೆಯಲು ಅಧಿಕಾರಿಗಳು ಸೂಚನೆಗಳನ್ನು ನೀಡಿದರು.

# ಹೊನ್ನಾಳಿಯಲ್ಲಿ 18 ರಂದು ಉದ್ಯೋಗ ಮೇಳ

ದಾವಣಗೆರೆ, ಫೆ.11 - ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಹೊನ್ನಾಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 18 ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಹೊನ್ನಾಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಇದೇ ದಿನಾಂಕ 18 ರಂದು ದಾಖಲಾತಿಗಳೊಂದಿಗೆ ಹೊನ್ನಾಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ವಿವರಕ್ಕೆ ದೂರವಾಣಿ ಸಂಖ್ಯೆ 08192-259446, 6361550016, 97436 36369 7406323294 ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಕೆ.ಎನ್.ಗಿರೀಶ್ ತಿಳಿಸಿದ್ದಾರೆ.

# ಸೇವಾಲಾಲ್ ಜಯಂತ್ಯೋತ್ಸವ; ಸಿದ್ಧತೆ ಪರಿಶೀಲನೆ



ನ್ಯಾಮತಿ, ಫೆ.11- ಸಂತ ಸೇವಾಲಾಲರ 282 ನೇ ಜಯಂತ್ಯೋತ್ಸವ ಕಾರ್ಯಕ್ರಮ ನಡೆಯುವ ಸೂರಗೊಂಡನಕೊಪ್ಪಕ್ಕೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರುಗಳು ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ನಿನ್ನೆ ಭೇಟಿ ನೀಡಿ ಪರಿಶೀಲಿಸಿದರು.

ವೇದಿಕೆ ಸೇರಿದಂತೆ ಕಾರ್ಯಕ್ರಮದ ರೂಪು ರೇಷೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಅವರು ಮೂರು ದಿನಗಳ ಜಯಂತ್ಯೋತ್ಸವಕ್ಕೆ ರಾಜ್ಯ, ಹೊರರಾಜ್ಯಗಳಿಂದ ಲಕ್ಷಾಂತರ ಭಕ್ತರು ಮಾಲಾಧಾರಿಗಳಾಗಿ ಬರಲಿದ್ದು, ಯಾವುದೇ ಲೋಪವಾಗದಂತೆ ಎಲ್ಲರೂ ಒಟ್ಟಾಗಿ ಕೆಲಸ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಉಪಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಲಕ್ಷ್ಮಣ ಸವದಿ, ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು, ವಿರೋಧ ಪಕ್ಷದ ನಾಯಕರಾದ ಸಿದ್ಧರಾಮಯ್ಯ ಸೇರಿದಂತೆ ಇತರೆ ಗಣ್ಯರು ಸಂತ ಸೇವಾಲಾಲರ ಜಯಂತ್ಯೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸೂರಗೊಂಡನಕೊಪ್ಪಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಲಿದ್ದು, ಪ್ರಸಾದಕ್ಕೆ ಕೌಂಟರ್ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಬರುವ ಭಕ್ತರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಬೇಕು ಎಂದರು.

ಜಿಲ್ಲಾಧಿಕಾರಿ ಮಹಂತೇಶ್ ಬೀಳಗಿ ಮಾತನಾಡಿ, ಸಂತ ಸೇವಾಲಾಲರ ಜನ್ಮಭೂಮಿ ಸೂರಗೊಂಡನಕೊಪ್ಪದಲ್ಲಿ ಶಾಶ್ವತ ವೇದಿಕೆ ನಿರ್ಮಾಣವಾಗಿದ್ದು ಅನುಕೂಲವಾಗಿದೆ. ಬರುವ ಭಕ್ತರಿಗೆ ತೊಂದರೆಯಾಗದ ರೀತಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ. ಈಗಾಗಲೇ ಒಂದು ಹೆಲಿಪ್ಯಾಡ್ ನಿರ್ಮಾಣ ಮಾಡಲಾಗಿದ್ದು, ಅವಶ್ಯಕತೆ ಬಿದ್ದರೆ ಮತ್ತೊಂದು ಹೆಲಿಪ್ಯಾಡ್ ನಿರ್ಮಾಣ ಮಾಡಲು ಜಿಲ್ಲಾಡಳಿತ ಸಿದ್ಧವಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ರುದ್ರಪ್ಪ ಲಮಾಣಿ, ಜಿಲ್ಲಾ ಪಂಚಾಯ್ತಿ ಸದಸ್ಯರಾದ ಉಮಾ ರಮೇಶ್, ಸುರೇಂದ್ರ ನಾಯ್ಕ, ತಾಂಡಾಭಿವೃದ್ದಿ ನಿಗಮದ ನಿರ್ದೇಶಕ ಮಾರುತಿ ನಾಯ್ಕ, ತಾಲ್ಲೂಕು ಪಂಚಾಯ್ತಿ ಸದಸ್ಯ ರವಿಕುಮಾರ್ ಜಿಲ್ಲಾಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪದ್ಮಾ ಬಸಂತಪ್ಪ, ಸಮಾಜ ಕಲ್ಯಾಣ ಇಲಾಖೆ ಡಿ.ಡಿ. ರೇಷ್ಮಾಬಾನು, ಬಂಜಾರ್ ಸಮಾಜದ ತಾಲ್ಲೂಕು ಅಧ್ಯಕ್ಷ ಜುಂಜಾನಾಯ್ಕ ಸೇರಿದಂತೆ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ರಾಷ್ಟ್ರೀಯ ಹೆದ್ದಾರಿಯವರ ವತಿಯಿಂದ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕೆಲಸ ಇರುವುದರಿಂದ, ಬಾಡಾ ಕ್ರಾಸ್, ಆವರಗೆರೆ, ಮಹಾಲಕ್ಷ್ಮಿ ಲೇಔಟ್, ಉತ್ತಮ್‌ಚಂದ್ ಲೇಔಟ್, ಜಿ.ಎಮ್. ಇಂಡಸ್ಟ್ರೀಸ್, ಅಪೂರ್ವ ರೆಸಾರ್ಟ್, ಜೈನ್ ಕಾಲೇಜ್, ಆಂಜನೇಯ ಕಾಟನ್ ಮಿಲ್, ಆವರಗೆರೆ ಇಂಡಸ್ಟ್ರೀಸ್, ಹೊನ್ನೂರು, ಮಲಶೆಟ್ಟಿಹಳ್ಳಿ, ಕರಿಲಕ್ಕೇನಹಳ್ಳಿ ಮತ್ತು ಚಟ್ಟೋಬನಹಳ್ಳಿ ಗ್ರಾಮಗಳಲ್ಲಿ ಇಂದು ಮಧ್ಯಾಹ್ನ 12 ರಿಂದ ಸಂಜೆ 7 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


**ಆಧಾರ ಖುಲಾಸೆ ಪತ್ರ ಕಳೆದಿದೆ**

ಅನಿಲ್ ಕುಮಾರ್ ಬಿನ್ ಕ್ಯಾರಕಟ್ಟೆ ಈರಪ್ಪ, ಉಜ್ಜಪ್ಪ ವಡೇರಹಳ್ಳಿ ಆದ ನಾನು ವಿನಂತಿಸುವುದೇನೆಂದರೆ, ನನ್ನ ತಂದೆಯವರಾದ ಈರಪ್ಪ ಬಿನ್ ಈರಪ್ಪ ಅವರು ಎಸ್.ಆರ್ ನಂ. 969/2017-18 ಸಿಡಿ ನಂ. 49 ದಿನಾಂಕ 23.06.2017ರಂದು ಉಜ್ಜಪ್ಪ ವಡೇರಹಳ್ಳಿ ಗ್ರಾಮದ ಖಾತೆ ನಂ. 145 (ಹಳೇ ಆಸ್ತಿ ನಂ. 43ಪಿ) 20x40 ಅಳತೆಯ ವಾಸದ ಮನೆ ಆಧಾರ ಖುಲಾಸೆ ಪತ್ರವನ್ನು ಉಪ ನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಿಸಿರುತ್ತಾರೆ. ಇದು ದಿನಾಂಕ 3.2.2021ರಂದು ಮಧ್ಯಾಹ್ನ 1.30ರ ಸಮಯದಲ್ಲಿ ಬಿಳಿಚೋಡು ಬಸ್ ನಿಲ್ದಾಣದಲ್ಲಿ ಕಳೆದು ಹೋಗಿರುತ್ತದೆ. ಸಿಕ್ಕವರು ದಯಮಾಡಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.

**ಸುನಿಲ್ ಕಟಗಿ,** ಡೋರ್ ನಂ. 1675/76, ರಂಗನಾಥ ಬಡಾವಣೆ, ವಿದ್ಯಾನಗರ, ದಾವಣಗೆರೆ.

**ಮೊ. 91641-12352**

**ಶ್ರೀ ದುರ್ಗಾ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ಸ್ ಸೈನ್ಸ್**

3rd cross ಸಿದ್ದಿವೀರಪ್ಪ ಬಡಾವಣೆ, ದಾವಣಗೆರೆ-577004

(ಕರ್ನಾಟಕ ಸರ್ಕಾರ ಮತ್ತು ಪ್ಯಾರಾಮೆಡಿಕಲ್ ಬೋರ್ಡ್‌ನಿಂದ ಮಾನ್ಯತೆ ಪಡೆದಿದೆ)

**2020-21 ನೇ ಸಾಲಿನ ಪ್ಯಾರಾಮೆಡಿಕಲ್ ಪ್ರವೇಶಕ್ಕೆ 15.02.2021 ಕೊನೆಯ ದಿನಾಂಕ**

| ಕ್ರ.ಸಂ | ಕೋರ್ಸ್‌ಗಳು | ವಿದ್ಯಾರ್ಹತೆ | ಅವಧಿ |
|---|---|---|---|
| 01 | ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನೀಷಿಯನ್ (DMLT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |
| 02 | ಡಿಪ್ಲೋಮಾ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ (DMIT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |
| 03 | ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ & ಅನೆಸ್ತೇಶೀಯಾ ಟೆಕ್ನಾಲಜಿ (DOT & AT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |

**ಉದ್ಯೋಗಾವಕಾಶಗಳು :-**

- ಪ್ರಾಥಮಿಕ ಆರೋಗ್ಯ ಕೇಂದ್ರಗಳು
- ಖಾಸಗಿ ಆಸ್ಪತ್ರೆಗಳಲ್ಲಿ
- ತಾಲ್ಲೂಕು ಆರೋಗ್ಯ ಕೇಂದ್ರಗಳು
- ಮೆಡಿಕಲ್ ಕಾಲೇಜ್‌ಗಳಲ್ಲಿ
- ಜಿಲ್ಲಾ ಆಸ್ಪತ್ರೆ
- ಸರ್ಕಾರದ ಸಂಸ್ಥೆ (ಎನ್.ಜಿ.ಓ) ಗಳಲ್ಲಿ
- ನಗರಸಭೆ ಹಾಗೂ ಮಹಾನಗರ ಪಾಲಿಕೆಗಳಲ್ಲಿ
- ದೇಶ-ವಿದೇಶಗಳಲ್ಲಿ

ಮಾಹಿತಿಗಾಗಿ :- 98444 84763 , 98445 82726 82175 12907, 86600 44219


# ಮಲೇಬೆನ್ನೂರಿನ ಆರ್‌ಸಿಬಿ ತಂಡ ಪ್ರಥಮ



**ಜಿಗಳಿಯ ಮಿತ್ರ ಕ್ರಿಕೆಟರ್ಸ್‌ಗೆ ದ್ವಿತೀಯ ಬಹುಮಾನ**

ಮಲೇಬೆನ್ನೂರು, ಫೆ.11- ವಿನಾಯಕ ನಗರ (ಜಿಗಳಿ ಕ್ಯಾಂಪ್) ಕ್ಯಾಂಪ್ ಸಮೀಪ ಇರುವ ಬಯಲು ಪ್ರದೇಶದಲ್ಲಿ ಜಿಗಳಿಯ ಮಿತ್ರ ಕ್ರಿಕೆಟರ್ಸ್ ವತಿಯಿಂದ 3ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಹಮ್ಮಿಕೊಂಡಿದ್ದ ಗ್ರಾಮಾಂತರ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯ ಸಮಾರೋಪ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ಗುರುವಾರ ರಾತ್ರಿ ನಡೆಯಿತು.

ಪ್ರಥಮ ಬಹುಮಾನ ಪಡೆದ ಮಲೇಬೆನ್ನೂರಿನ ಆರ್‌ಸಿಬಿ ತಂಡಕ್ಕೆ 22 ಸಾವಿರ ರೂ. ನಗದು ಮತ್ತು ಆಕರ್ಷಕ ಟ್ರೋಫಿಯನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಅವರು ನೀಡಿ, ಅಭಿನಂದಿಸಿದರು.

ದ್ವಿತೀಯ ಬಹುಮಾನ ಪಡೆದ ಜಿಗಳಿಯ ಮಿತ್ರ ಕ್ರಿಕೆಟರ್ಸ್‌ತಂಡಕ್ಕೆ 11 ಸಾವಿರ ರೂ. ನಗದು ಹಾಗೂ ಆಕರ್ಷಕ ಟ್ರೋಫಿಯನ್ನು ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಅವರು ನೀಡಿ, ಅಭಿನಂದಿಸಿದರು.

ಟೂರ್ನಿಯಲ್ಲಿ ಒಟ್ಟು 20 ತಂಡಗಳು ಭಾಗವಹಿಸಿದ್ದವು. ಬಿಜೆಪಿ ಮುಖಂಡ ಬಿಳಸನೂರು ಚಂದ್ರಪ್ಪ, 'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್, ಜಿಗಳಿ ಗ್ರಾ.ಪಂ. ಸದಸ್ಯರಾದ ಕೆ.ಜಿ.ಬಸವರಾಜ್, ವೈ.ಆರ್. ಚೇತನ್‌ಕುಮಾರ್, ಉಪನ್ಯಾಸಕ ಕೆ.ಎನ್. ಮಂಜುನಾಥ್, ಶಾಮಿಯಾನ ಮಾಲೀಕ ಬೆಣ್ಣೆಹಳ್ಳಿ ಸತೀಶ್, ದೊಡ್ಡಘಟ್ಟದ ಮಂಜಣ್ಣ, ಮಿತ್ರ ಕ್ರಿಕೆಟರ್ಸ್‌ನ ಕೆ.ಡಿ.ಬಸವರಾಜ್ (ತಮ್ಮಿ), ಭಾನುವಳ್ಳಿ ಶಿವು, ಬೇವಿನಹಳ್ಳಿ ಗದಿಗೇಶ್, ಕೀರ್ತಿ (ಪಾರ್ಥ), ಜಿ.ಎಸ್. ವಿಜಯಕುಮಾರ್, ಪಿ.ಬಿ.ಶರತ್ ಮತ್ತಿತರರು ಬಹುಮಾನ ವಿತರಣೆಯಲ್ಲಿ ಭಾಗವಹಿಸಿದ್ದರು.


**ಶಿವ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ**

ಬಸವೇಶ್ವರ ಬಡಾವಣೆ, ಮಲೇಬೆನ್ನೂರು-577 530. ಹರಿಹರ ತಾಲ್ಲೂಕು

**ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ**

ಈ ಮೂಲಕ ಯಾವತ್ತೂ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಸೊಸೈಟಿಯಲ್ಲಿ ಸಾಲ ಪಡೆದು, ಮರುಪಾವತಿ ಮಾಡದೇ ಸುಸ್ತಿಯಾಗಿರುವ ಈ ಕೆಳಕಂಡ ಸುಸ್ತಿದಾರರ ವಿರುದ್ಧ ಅವಾರ್ಡ್ ಪಡೆದು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ನ್ಯಾಯಾಲಯದಲ್ಲಿ ಅಮಲ್ಜಾರಿ ಹುಕ್ಕುಂ ಪಡೆದು ಷೆಡ್ಯೂಲ್ ಸೊತ್ತನ್ನು ಬಹಿರಂಗ ಹರಾಜು ಮಾಡಲಾಗುತ್ತಿದೆ. ಇಚ್ಛೆಯುಳ್ಳವರು ಹರಾಜಿನಲ್ಲಿ ಭಾಗವಹಿಸಿ ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸೊತ್ತನ್ನು ಪಡೆಯಬಹುದು.

| ಕ್ರ.ಸಂ. | ತೀರ್ಪು ಸಾಲಗಾರರು ಹೆಸರು ಮತ್ತು ವಿಳಾಸ | ಬಾಕಿಯಾಗಿರುವ ಸಾಲದ ಅಸಲು, ಬಡ್ಡಿ ಮತ್ತು ಇತರೆ ಖರ್ಚು | ಹರಾಜಿಗೆ ಒಳಪಡಿಸಿರುವ ಸೊತ್ತುಗಳ ವಿವರ | ಹರಾಜು ನಡೆಯುವ ಸ್ಥಳ ದಿನ ಮತ್ತು ವೇಳೆ |
|---|---|---|---|---|
| 01. | ಶ್ರೀ ಶಂಕ್ರಪ್ಪ ಬೆಣ್ಣೆಹಳ್ಳಿ ಬಿನ್ ಸಿದ್ದಪ್ಪ ಬೆಣ್ಣೆಹಳ್ಳಿ. ಹರಳಹಳ್ಳಿ ರಸ್ತೆ, ನೆಹರು ನಗರ, ಮಲೇಬೆನ್ನೂರು. ಇ.ಪಿ. ನಂ. 21/2020-21 | ಅಸಲು ಮತ್ತು ಈ ತಹಲ್‌ವರೆಗೆ ಬಡ್ಡಿ ಮತ್ತು ಇತರೆ ಖರ್ಚು ರೂ. 9,96,240+ | ಮಲೇಬೆನ್ನೂರು ಗ್ರಾಮದಲ್ಲಿರುವ ಖಾತೆ ನಂ. 417, ಖಾನೆಷುಮಾರಿ ಯಾನೆ ಆಸ್ತಿ ನಂ. 603 ಪಿ ಖಾಲಿ ಜಾಗದ ಅಳತೆ ಪೂರ್ವ-ಪಶ್ಚಿಮ (34 1/2) ಅಡಿ, ಉತ್ತರ-ದಕ್ಷಿಣ 55 ಅಡಿ, ಅಂದಾಜು ವಿಸ್ತೀರ್ಣ-1897.5 ಅಡಿಗಳು | ಹರಾಜಿಗೆ ಒಳಪಡುವ ಸ್ಥಿರಾಸ್ತಿಯ ಮುಂಭಾಗದಲ್ಲಿ ದಿನಾಂಕ : 25.02.2021ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ |

ಸೂಚನೆಗಳು : 1) ಹರಾಜಿನಲ್ಲಿ ಬಿಡ್ ಸವಾಲ್ ಮಾಡತಕ್ಕವರು ಹರಾಜಿಗೆ ಮುಂಚೆ ರೂ. 25,000/- ನಗದು ಹಣವನ್ನು ಮಾರಾಟಾಧಿಕಾರಿಗಳವರ ಕಡೆ ಪಾವತಿ ಮಾಡತಕ್ಕದ್ದು. ಸೊಸೈಟಿಯವರು ಭಾಗವಹಿಸಿದಲ್ಲಿ ಸದರಿ ಡಿಪಾಜಿಟ್ ಪಾವತಿ ಮಾಡಬೇಕಾಗಿಲ್ಲ. (2) ಅತ್ಯಧಿಕ ಸವಾಲ್ ಮಾಡಿ ಸೊತ್ತುಗಳ್ನು ಕೊಳ್ಳುವವರು ಮಾರಾಟಾಧಿಕಾರಿಗಳು ಹರಾಜನ್ನು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇ. 15 ರಷ್ಟು ಹಣವನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರಿಗೆ ಹಾಗೂ ನೋಂದಣಿಗೆ ತಗಲುವ ವೆಚ್ಚವನ್ನು ಹರಾಜು ಆದ 45 ದಿವಸದೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಡಿಪಾಜಿಟ್ ಮೊತ್ತವನ್ನು ಸೊಸೈಟಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 3) ಮಾರಾಟಾಧಿಕಾರಿಗಳು ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ಇಲ್ಲವೇ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ. 4) ಈ ಸ್ಥಿರಾಸ್ತಿಯು ಹೇಗಿದೆಯೋ ಹಾಗೇ ಹರಾಜು ಮಾಡಲಾಗುವುದು. 5) ಹರಾಜಿನಲ್ಲಿ ಭಾಗವಹಿಸುವವರು ತಮ್ಮ ಗುರುತಿನ ಚೀಟಿ ಹಾಗೂ ವಿಳಾಸದ ದೃಢೀಕರಣ ಪತ್ರ ಒದಗಿಸತಕ್ಕದ್ದು. 6) ಹೆಚ್ಚಿನ ಮಾಹಿತಿಗೆ ಮಾರಾಟಾಧಿಕಾರಿಗಳನ್ನು ಅಥವಾ ಸಂಘದ ಕಾರ್ಯದರ್ಶಿಯವರನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಡಾ. ಬಿ. ಚಂದ್ರಶೇಖರ್, ಅಧ್ಯಕ್ಷರು — ಸಹಿ/- ಜಿ.ಎಂ. ನಳಿನ, ಪ್ರಭಾರ ಕಾರ್ಯದರ್ಶಿ — ಸಹಿ/- ಶ್ರೀ ಸುರೇಂದ್ರ ಜಿ.ಎಸ್., ಮಾರಾಟಾಧಿಕಾರಿಗಳು

ಹೆಚ್ಚಿನ ಮಾಹಿತಿಗಾಗಿ : ಫೋ. : 94499 84818, 83105 14530

## ಜಗಳೂರಿನ ಪಟ್ಟಣ ಪಂಚಾಯ್ತಿ ಬಜೆಟ್ ಪೂರ್ವಭಾವಿ ಸಭೆ



ಜಗಳೂರು, ಫೆ.11- ಸ್ಥಳೀಯ ಪಟ್ಟಣ ಪಂಚಾಯ್ತಿ ಸಭಾಂಗಣದಲ್ಲಿ 2021-22 ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆಯು ಅಧ್ಯಕ್ಷ ಆರ್. ತಿಪ್ಪೇಸ್ವಾಮಿ ಅಧ್ಯಕ್ಷತೆಯಲ್ಲಿ ಜರುಗಿತು.

ಪಟ್ಟಣ ಪಂಚಾಯ್ತಿಯ ಈ ಸಾಲಿನ ಆಯ-ವ್ಯಯ ತಯಾರಿಸಲು ಸಾರ್ವಜನಿಕರು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸಲಹೆ ನೀಡುವಂತೆ ತಿಪ್ಪೇಸ್ವಾಮಿ ಮನವಿ ಮಾಡಿಕೊಂಡರು.

ಪೂರ್ವಭಾವಿ ಸಭೆಯಲ್ಲಿ ಸ್ವೀಕರಿಸಿದ ಲಿಖಿತ ಹಾಗೂ ಮೌಖಿಕ ಸಲಹೆಗಳಿಂದ ಸಂಪನ್ಮೂಲ ಕ್ರೋಢೀಕರಣಕ್ಕೆ ಪಟ್ಟಣದ ವಾರ್ಡ್‌ಗಳಲ್ಲಿ ಬೀದಿದೀಪ, ರಸ್ತೆ, ಚರಂಡಿ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳು ಹಾಗೂ ಇನ್ನಿತರೆ ಸಮಸ್ಯೆಗಳನ್ನು ಪರಿಹರಿಸಲು ಪೂರಕವಾಗಿರುವ ಸೂಕ್ತ ಬಜೆಟ್ ಮಂಡನೆಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಹಿರಿಯ ನಾಗರಿಕರ ಸಂಘದ ತಾಲ್ಲೂಕು ಅಧ್ಯಕ್ಷ ಸಿ. ತಿಪ್ಪೇಸ್ವಾಮಿ ಮಾತನಾಡಿ, ಪಟ್ಟಣದಲ್ಲಿ ಪಾರ್ಕ್‌ಗಳ ಅಭಿವೃದ್ಧಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ನಿವೇಶನ, ಮೂಲ ಸೌಕರ್ಯಗಳಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪ.ಪಂ. ಉಪಾಧ್ಯಕ್ಷೆ ಲಲಿತ ಶಿವಣ್ಣ, ಸದಸ್ಯರಾದ ಪಾಪಲಿಂಗಪ್ಪ, ಲುಕ್ಮಾನ್‌ಖಾನ್, ಮಂಜಮ್ಮ, ದೇವರಾಜ್, ನವೀನ್ ಕುಮಾರ್, ಪ.ಪಂ. ಮುಖ್ಯಾಧಿಕಾರಿ ರಾಜು.ಡಿ. ಬಣಕಾರ್, ಕಂದಾಯ ನಿರೀಕ್ಷಕ ಸಂತೋಷ್ ಇನ್ನಿತರರಿದ್ದರು.

## ಹೊಳೆಸಿರಿಗೆರೆ ಗ್ರಾ.ಪಂ. ಅಧ್ಯಕ್ಷರಾಗಿ ಕಾವ್ಯ, ಉಪಾಧ್ಯಕ್ಷರಾಗಿ ಚಂದ್ರಕಲಾ



ಮಲೇಬೆನ್ನೂರು, ಫೆ.11- ಹೊಳೆಸಿರಿಗೆರೆ ಗ್ರಾಮ ಪಂಚಾಯ್ತಿ ನೂತನ ಅಧ್ಯಕ್ಷರಾಗಿ ಕಾವ್ಯ ಮಂಜುನಾಥ್ ಮತ್ತು ಉಪಾಧ್ಯಕ್ಷರಾಗಿ ಚಂದ್ರಕಲಾ ಜಯ್ಯಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನ ಎಸ್ಸಿ ಮಹಿಳೆ ಮತ್ತು ಉಪಾಧ್ಯಕ್ಷ ಸ್ಥಾನ ಬಿಸಿಎಂ ಬಿ ಮಹಿಳೆಗೆ ಮೀಸಲಾಗಿತ್ತು. ಪಿಡಬ್ಲ್ಯೂಡಿ ಎಇ ರವಿಕಿರಣ್ ಚುನಾವಣಾಧಿಕಾರಿಯಾಗಿದ್ದು, ಪಿಡಿಒ ಜಯಕುಮಾರ್ ಹಾಜರಿದ್ದರು.

ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಹಿರಿಯ ಮುಖಂಡ ಎನ್.ಜಿ. ನಾಗನಗೌಡ್ರು, ಎಂ.ಜಿ. ಪರಮೇಶ್ವರಗೌಡ, ಎಂ. ರಾಮನಗೌಡ, ಕುಂದೂರು ಕುಮಾರ್ ಇನ್ನಿತರರು ಅಭಿನಂದಿಸಿದರು.

## ಚಳ್ಳಕೆರೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ



ಚಳ್ಳಕೆರೆ, ಫೆ.11- ಚಿತ್ರದುರ್ಗ ಮುಖ್ಯ ರಸ್ತೆಯಲ್ಲಿ ಸಾರಿಗೆ ಇಲಾಖೆ ಮತ್ತು ಪೊಲೀಸ್ ಇಲಾಖೆ ವತಿಯಿಂದ 32 ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಚಳ್ಳಕೆರೆ ಪೊಲೀಸ್ ಇನ್‌ಸ್ಪೆಕ್ಟರ್ ಜೆ.ಎಸ್. ತಿಪ್ಪೇಸ್ವಾಮಿ, ಸಾರಿಗೆ ಇಲಾಖೆ ಅಧಿಕಾರಿ ಕರುಣಾಕರ ಮಾತನಾಡಿದರು.

# ಗಡಿ ಗ್ರಾಮಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಆಗ್ರಹ

## ಹರಪನಹಳ್ಳಿಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ಪ್ರತಿಭಟನೆ

ಹರಪನಹಳ್ಳಿ, ಫೆ.11 - ತಾಲ್ಲೂಕಿನ ಗಡಿ ಭಾಗದ ಹಳ್ಳಿಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ವತಿಯಿಂದ ಸಾರಿಗೆ ಸಂಸ್ಥೆಯ ಹರಪನಹಳ್ಳಿ ಘಟಕದ ಘಟಕ ವ್ಯವಸ್ಥಾಪಕ ವಿನಾಯಕ ಅವರಿಗೆ ಮನವಿ ಸಲ್ಲಿಸಿದರು.



ಈ ವೇಳೆ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆಯ ಮುಖಂಡ ಕೆರೆ ಗುಡಿಹಳ್ಳಿ ಹಾಲೇಶ್ ಮಾತನಾಡಿ, ತಾಲ್ಲೂಕಿನ ಗಡಿಭಾಗದ ಹಳ್ಳಿಗಳಾದ ರಾಮಘಟ್ಟ, ರಾಮ ಘಟ್ಟದ ತಾಂಡಾ, ಮಾದಿಹಳ್ಳಿ, ಗಡಿಗುಡಾಳು, ಬೂದಿಹಾಳು, ಹೊಸಕೋಟೆ, ಚಿಕ್ಕಬಳ್ಳಿ, ಕೆರೆ ಗುಡಿಹಳ್ಳಿ, ಚಟ್ನಿಹಳ್ಳಿ, ಅಣಜಿಗೇರಿ, ಗ್ರಾಮ ಗಳಿಂದ ದಿನನಿತ್ಯ ನೂರಾರು ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ರೈತರು ಕಾರ್ಮಿಕರು ಮಹಿಳೆಯರು ಅಂಗವಿಕಲರು ದೈನಂದಿನ ಕೆಲಸಕ್ಕಾಗಿ ಹರಪನಹಳ್ಳಿಗೆ ಬರುತ್ತಾರೆ. ಆದರೆ ಈ ಹಳ್ಳಿಗಳಿಗೆ ಯಾವುದೇ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದೆ ಕಂಗಾಲಾಗಿ ಕಷ್ಟಪಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆಯ ಮುಖಂಡ ಬಳಿಗಾನೂರು ಕೊಟ್ರೇಶ್ ಮಾತನಾಡಿ, ಈ ಹಿಂದೆ ಬೆಳಿಗ್ಗೆ ಎಂಟಕ್ಕೆ ಉಚ್ಚಂಗಿದುರ್ಗವನ್ನು ಬಿಟ್ಟು ಮಾದಿಹಳ್ಳಿ, ಗಡಿ ಗುಡಾಳ್ ಬೂದಿಹಾಳು, ಹೊಸಕೋಟೆ, ಚಿಕ್ಕಬಳ್ಳಿ, ಕೆರೆಗುಡಿಹಳ್ಳಿ, ಮಾರ್ಗವಾಗಿ ಅರಸೀಕೆರೆಗೆ ಬಂದು ಹರಪನಹಳ್ಳಿಗೆ ತಲುಪುವ ಸಾರಿಗೆ ಸೌಕರ್ಯವಿತ್ತು. ಮಹಾಮಾರಿ ಕೋವಿಡ್ 19 ಪರಿಣಾಮವಾಗಿ ಸಾರಿಗೆ ಸೌಕರ್ಯ ಬಂದ್ ಆಗಿತ್ತು. ನಂತರದ ದಿನಗಳಲ್ಲಿ ಶಾಲಾ - ಕಾಲೇಜುಗಳು ಪ್ರಾರಂಭವಾಗಿ ಮತ್ತು ದಿನನಿತ್ಯದ ಜನರ ಕೆಲಸ ಪ್ರಾರಂಭವಾಗಿವೆ. ಕೆಲಸಗಳಿಗೆ ಹರಪನಹಳ್ಳಿ ಪಟ್ಟಣಕ್ಕೆ ಬರಲು ಸಾರಿಗೆ ಸೌಕರ್ಯವಿಲ್ಲದೆ ಜನರು ಮತ್ತು ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ ಎಂದು ಹೇಳಿದರು.

ಹರಪನಹಳ್ಳಿ ಘಟಕದ ಘಟಕ ವ್ಯವಸ್ಥಾಪಕರು ಉಚ್ಚಂಗಿದುರ್ಗವನ್ನು ಬಿಟ್ಟು ಮಾದಿಹಳ್ಳಿ, ಗಡಿಗುಡಾಳ್, ಬೂದಿಹಾಳು, ಹೊಸಕೋಟೆ, ಚಿಕ್ಕಬಳ್ಳಿ, ಕೆರೆಗುಡಿಹಳ್ಳಿ, ಮಾರ್ಗವಾಗಿ ಅರಸೀಕೆರೆಗೆ ಬಂದು ಹರಪನಹಳ್ಳಿಗೆ ತಲುಪುವ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಪ್ರತಿಭಟನಾಕಾರರಿಗೆ ಹೇಳಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ ಮುಖಂಡರುಗಳಾದ ಚಂದ್ರನಾಯಕ್, ಅರುಣಕುಮಾರ್, ಪ್ರದೀಪ್ ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಹಿಂದ ಹೋರಾಟಕ್ಕೆ ಸಿದ್ದು ಸಿದ್ಧತೆ

(1ನೇ ಪುಟದಿಂದ) ಮಂದಿಯನ್ನು ಸೇರಿಸಿ, ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ರಾಜಕೀಯವಾಗಿ ಟಾಂಗ್ ನೀಡಲು ಬಳಸಿಕೊಳ್ಳುತ್ತಿದ್ದಾರೆ.

ಈ ಯಾತ್ರೆಯ ಪೂರ್ಣ ಹೊಣೆಗಾರಿಕೆಯನ್ನು ಮಾಜಿ ಆಪ್ತಮಿತ್ರ ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರ ಹೆಗಲಿಗೆ ಹಾಕಿದ್ದಾರೆ. ಮಹದೇವಪ್ಪ ಸಾರ್ವಜನಿಕವಾಗಿ ದೂರ ಉಳಿದರೂ, ಕೆಲವು ಸಂಘಟನೆಗಳ ಜೊತೆ ಈಗಲು ಒಡನಾಟ ಇಟ್ಟುಕೊಂಡಿದ್ದಾರೆ. ಆ ಸಂಘಟನೆಯ ಅಡಿಯಲ್ಲೇ ಈ ಸಮಾವೇಶಗಳು ನಡೆಯಲಿವೆ.

ಆರ್‌ಎಸ್‌ಎಸ್ ಕುರುಬ ಸಮುದಾಯವನ್ನು ವಿಭಜಿಸಲು ಹೊರಟು ತಮ್ಮನ್ನು ರಾಜಕೀಯವಾಗಿ ಮುಗಿಸಲು ಮುಂದಾಗುತ್ತಿದೆ ಎಂಬ ಭಾವನೆ ಹೊಂದಿರುವ ಸಿದ್ದರಾಮಯ್ಯ, ಮತ್ತೆ ಹಿಂದುಳಿದ ವರ್ಗಗಳನ್ನು ಒಂದುಗೂಡಿಸಿ, ಈಗಲೂ ಅದರ ನಾಯಕ ನಾನೇ ಎಂದು ಬಿಂಬಿಸುವ ಉದ್ದೇಶವಾಗಿದೆ. ಈ ಬಾರಿಯ ಯಾತ್ರೆಗೆ ಅಲ್ಪಸಂಖ್ಯಾತರನ್ನು ದೂರವಿಡಲಾಗಿದೆ. ಆ ಮತಗಳು ಎಂದಿಗೂ ಬಿಜೆಪಿ ಹತ್ತಿರ ಸುಳಿಯವು. ಹೀಗಾಗಿ ಹಿಂದುಳಿದ ಮತಗಳನ್ನು ಅದರಲ್ಲೂ ತಮ್ಮ ಸಮಾಜದ ಮತಗಳನ್ನು ಗಟ್ಟಿ ಮಾಡಿಕೊಳ್ಳುವುದು ಸಿದ್ದರಾಮಯ್ಯನವರ ಚಿಂತನೆ.

ಸಿದ್ದರಾಮಯ್ಯನವರಿಗೂ, ಮಹದೇವಪ್ಪ ನವರಿಗೂ ಇತ್ತೀಚಿನ ದಿನಗಳಲ್ಲಿ ಸಂಬಂಧ ಹಳಸಿಹೊಗಿತ್ತು. ಆದರೆ ಹಿಂದುಳಿದ ವರ್ಗಗಳನ್ನು ಒಂದುಗೂಡಿಸುವ ಉದ್ದೇಶದಿಂದ ಸಿದ್ದರಾಮಯ್ಯ ನಿನ್ನೆ ರಾತ್ರಿ ಸ್ನೇಹಿತನ ಮನೆಗೆ ತೆರಳಿ ಈ ಸಂಬಂಧ ಸುದೀರ್ಘ ಚರ್ಚೆ ಮಾಡಿದ್ದಾರೆ.

ಸಭೆಯ ನಂತರ ಮಹದೇವಪ್ಪ, ಫೇಸ್‌ಬುಕ್‌ನಲ್ಲಿ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾದಾಗ ಹೋರಾಟ ಸೃಷ್ಟಿಯಾಗುತ್ತದೆ. ಅಂತಹ ಚಳುವಳಿಗಳಿಗೆ ನಾವು ಬೆಂಬಲ ನೀಡುತ್ತೇವೆ ಎಂದು ಸಮಾವೇಶದ ಬಗ್ಗೆ ಪರೋಕ್ಷ ಮಾಹಿತಿ ನೀಡಿದ್ದಾರೆ.

ಅಹಿಂದ ವೇದಿಕೆಯನ್ನು ನಾವೇ ಸೃಷ್ಟಿ ಮಾಡುವುದಿಲ್ಲ ಎಂದಿರುವ ಅವರು, ನಾನು ಮತ್ತು ಸಿದ್ದರಾಮಯ್ಯ 1989 ರಿಂದಲೂ ಆತ್ಮೀಯರು. ನಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯ ಕೇವಲ ಅಂತೆಕಂತೆ ಅಷ್ಟೇ. ಪ್ರಜಾಪ್ರಭುತ್ವಕ್ಕೆ ಅಪಾಯದ ಸಮಯ ಬಂದಾಗಲೆಲ್ಲ ನಾವು ಹೋರಾಟ ಮಾಡಿದ್ದೇವೆ. ಇದೀಗ ಅಂತಹ ಸಮಯ ಸೃಷ್ಟಿಯಾಗುತ್ತಿದೆ. ಅಂತಹ ಚಳುವಳಿಗಳಿಗೆ ನಾವು ಬೆಂಬಲ ನೀಡುತ್ತೇವೆ. ಆದರೆ ಅಹಿಂದ ವೇದಿಕೆಯನ್ನು ನಾವೇ ಸೃಷ್ಟಿ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇದೀಗ ದೇಶದಲ್ಲಿ ಸಂವಿಧಾನಿಕ ವಾತಾವರಣವೇ ಕೆಡುತ್ತಿರುವುದರಿಂದ ಜನಪರವಾದ ಧ್ವನಿಗಳೇ ರಾಜಕೀಯ ವಲಯದಲ್ಲಿ ಕ್ಷೀಣಿಸುತ್ತಿವೆ. ನಾನು ಮತ್ತು ಸಿದ್ದರಾಮಯ್ಯನವರು ಹೋರಾಟಗಳನ್ನು ಸಂಘಟಿಸುವ ಮತ್ತು ಸಾಮಾಜಿಕ ನ್ಯಾಯದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಶ್ರಮಿಸಲು ನಿರ್ಧರಿಸಿದ್ದೇವೆ ಎಂದು ಬರೆದುಕೊಂಡಿದ್ದಾರೆ.

ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಹಿಂದುಳಿದ ವರ್ಗಗಳ ಬೃಹತ್ ಸಮಾವೇಶ ನಡೆಯಲಿದ್ದು, ಈ ಎಲ್ಲ ಸಮಾವೇಶಗಳ ಮೂಲಕ ಸಿದ್ಧರಾಮಯ್ಯ ತಮ್ಮ ಶಕ್ತಿ ಪ್ರದರ್ಶನ ಮಾಡಲಿದ್ದಾರೆ. ರಾಜ್ಯ ಕುರುಬರ ಸಂಘ ಮತ್ತು ಹಿಂದುಳಿದ ಜಾತಿಗಳ ಒಕ್ಕೂಟ ಆಯೋಜಿಸಿರುವ ಈ ಸರಣಿ ಸಮಾವೇಶಗಳ ಪೈಕಿ ಮೊದಲು ಮೈಸೂರು ಇಲ್ಲವೇ ಗುಲ್ಬರ್ಗದಲ್ಲಿ ನಡೆಯಲಿದೆ.

ಕುರುಬರು ಸೇರಿದಂತೆ ಹಿಂದುಳಿದ ವರ್ಗಗಳ ಎಲ್ಲ ಒಳಪಂಗಡಗಳು ಈ ಸಮಾವೇಶದಲ್ಲಿ ಭಾಗವಹಿಸಿದರೆ ಸಿದ್ಧರಾಮಯ್ಯ ಅವರ ಹಣೆಗಂಟಿರುವ ಹಿಂದುಳಿದ ವರ್ಗಗಳ ಚಾಂಪಿಯನ್ ಎಂಬ ಪಟ್ಟಿ ಹಾಗೆಯೇ ಮುಂದುವರೆಯಲಿದೆ ಎಂಬುದು ಈ ಸಮಾವೇಶಗಳ ಹಿಂದಿರುವ ಲೆಕ್ಕಾಚಾರ.

ಕುರುಬ ಸಮುದಾಯವನ್ನು ಎಸ್.ಟಿ. ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿ ನಡೆಯುತ್ತಿರುವ ಹೋರಾಟದ ಹಿನ್ನೆಲೆಯಲ್ಲಿ ಕಳೆದ ಭಾನುವಾರ ಸಮಾವೇಶ ನಡೆದಿತ್ತು. ಮತ್ತು ಈ ಸಮಾವೇಶದಲ್ಲಿ ಭಾಗವಹಿಸಿದ ಪ್ರಮುಖರು 'ನಮ್ಮ ಬೇಡಿಕೆ ಈಡೇರಿದರೆ ಅರವತ್ತು ಲಕ್ಷ ಕುರುಬರು ಬಿಜೆಪಿಯ ಜತೆ ನಿಲ್ಲುತ್ತೇವೆ ಎಂದಿದ್ದು' ಸಿದ್ಧರಾಮಯ್ಯ ಅವರನ್ನು ಬಡಿದೆಬ್ಬಿಸಿದೆ.

ಇದರ ಬೆನ್ನಲ್ಲೇ ಕುರುಬರ ಸಂಘ ಹಾಗೂ ಹಿಂದುಳಿದ ಜಾತಿಗಳ ಒಕ್ಕೂಟ ಇದೀಗ ರಂಗಪ್ರವೇಶ ಮಾಡಿದ್ದು, ಇದಕ್ಕೆ ಪೂರಕವಾಗಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಸಮಾವೇಶಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

ಸಮಾವೇಶಗಳಿಗೆ ಅಗತ್ಯವಾದ ತಯಾರಿಯನ್ನು ಆರಂಭಿಸಲು ಸೂಚನೆ ನೀಡಲಾಗಿದ್ದು ಸಮಾವೇಶಗಳ ಮೂಲಕ ಸಿದ್ದರಾಮಯ್ಯ ಅವರಿಗಂಟಿರುವ ಹಿಂದುಳಿದ ವರ್ಗಗಳ ಚಾಂಪಿಯನ್ ಎಂಬ ಹಣೆಪಟ್ಟಿ ಉಳಿದುಕೊಳ್ಳಲಿದೆ ಎಂದು ಲೆಕ್ಕ ಹಾಕಲಾಗಿದೆ.

ಸಮಾವೇಶಗಳಲ್ಲಿ ಸಿದ್ಧರಾಮಯ್ಯ ಅವರೊಂದಿಗೆ ಹಿಂದುಳಿದ ವರ್ಗಗಳ ಒಳಪಂಗಡಗಳ ಹಲ ನಾಯಕರೂ ಭಾಗವಹಿಸಲಿದ್ದು, ಆ ಮೂಲಕ ಬಿಜೆಪಿಯ ರಣತಂತ್ರಕ್ಕೆ ಉತ್ತರ ನೀಡುವುದು ಆಯೋಜಕರ ಉದ್ದೇಶ ಎಂದು ಮೂಲಗಳು ಹೇಳಿವೆ.

## ಯಶೋಧ ಮಾಲತೇಶಪ್ಪ ಅವರಿಗೆ ಪದ್ಮಶಾಲಿ ಸಮಾಜದಿಂದ ಸನ್ಮಾನ



**ಹೊನ್ನಾಳಿ**

ಹೊನ್ನಾಳಿ, ಫೆ.11- ತಾಲ್ಲೂಕಿನ ಮುಕ್ತೇನಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಪದ್ಮಶಾಲಿ ಸಮಾಜದ ಯಶೋಧ ಮಾಲತೇಶಪ್ಪ ಸೋಮಂತಪ್ಪನವರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಯಶೋಧ ಅವರು ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಅತ್ಯಧಿಕ ಮತಗಳನ್ನು ಪಡೆದು ಜಯ ಗಳಿಸಿ ದಾಖಲೆ ಸೃಷ್ಟಿಸಿದ್ದಾರೆ. ಸಮಾಜದ ಅಧ್ಯಕ್ಷರು, ಉಪಾಧ್ಯಕ್ಷರು ಸಮಾಜದ ಬಂಧುಗಳು ಯಶೋಧ ಅವರನ್ನು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಹನುಮಂತಪ್ಪ ಮುಕ್ತೇನಹಳ್ಳಿ, ನೀಲಪ್ಪ ಕುಮಾರಪ್ಪನವರ, ಪ್ರಕಾಶ ಅಗಡಿ, ಯಲ್ಲಪ್ಪ ಗುತ್ತಲ, ಮಾಲತೇಶ ಸೋಮಂತಪ್ಪನವರ, ಯೋಗೀಶ್ವರ ದಬ್ಬೇಶಿ, ಕೊಟ್ರೇಶ್ ಸೋಮಂತಪ್ಪನವರ, ಬಸವರಾಜ್ ಸಂಗಾನವರ, ಗೋವಿಂದಪ್ಪ, ಮನೋಜಕುಮಾರ್, ರುದ್ರಮ್ಮ ಇನ್ನಿತರರು ಹಾಜರಿದ್ದರು.

## ನಗರದಲ್ಲಿ ಇಂದು ಜಿಲ್ಲೆಯ ಪತ್ತಿನ ಸಹಕಾರ ಸಂಘಗಳ ತರಬೇತಿ ಶಿಬಿರ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಸಹಕಾರ ಇಲಾಖೆ, ಜಿಲ್ಲಾ ಸಹಕಾರ ಯೂನಿಯನ್ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಇಂದು ಬೆಳಿಗ್ಗೆ 11 ಗಂಟೆಗೆ ಜನತಾ ಬಜಾರ್ ಸಭಾಂಗಣದಲ್ಲಿ ವಿಶೇಷ ತರಬೇತಿ ಶಿಬಿರ ನಡೆಯಲಿದೆ.

ಸಿರಿಗೆರೆ ರಾಜಣ್ಣ ಶಿಬಿರವನ್ನು ಉದ್ಘಾಟಿಸಲಿದ್ದು, ಎನ್.ಎ. ಮುರುಗೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಆರ್.ಜಿ. ಶ್ರೀನಿವಾಸ ಮೂರ್ತಿ, ಬಿ.ಜಯಪ್ರಕಾಶ್, ಕೆ. ಮಹೇಶ್ವರಪ್ಪ, ಎಂ. ದಕ್ಷಿಣಮೂರ್ತಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಸಂಪನ್ಮೂಲ ವ್ಯಕ್ತಿಗಳಾಗಿ ಅಪೆಕ್ಸ್ ಬ್ಯಾಂಕ್‌ನ ಐಟಿ ವ್ಯವಸ್ಥಾಪಕ ನಿರ್ವಾಹಕ ಎಸ್.ಜಿ. ಕುಲಕರ್ಣಿ, ಸಹಕಾರ ಅಭಿವೃದ್ಧಿ ಅಧಿಕಾರಿ ಜಿ.ಎಸ್. ಸುರೇಂದ್ರ ಭಾಗವಹಿಸಲಿದ್ದಾರೆ.

## ನಮ್ಮ ನಡೆ ಬೆಳಕಿನ ಕಡೆ

ಕತ್ತಲೆಯು ಕಳೆಯಲಿ,
ಮನದಿ ಬೆಳಕು ಮೂಡಲಿ,
ತಾರತಮ್ಯ ಅಳಿಯಲಿ,
ಮಾನವೀಯತೆ ಬೆಳಗಲಿ,
ಮೌಢ್ಯತೆಯು ಅಡಗಲಿ,
ಅರಿವಿನೆಡೆಗೆ ನಡೆಯಲಿ
ದ್ವೇಷವನ್ನು ಮರೆಯಲಿ,
ಪ್ರೇಮವನ್ನು ಹಂಚಲಿ,
ಕಲ್ಮಶಗಳು ಕಳೆಯಲಿ,
ಕಾರುಣ್ಯವು ಬೆಳಗಲಿ,
ಕಷ್ಟಗಳು ಕಳೆಯಲಿ,
ಉಲ್ಲಾಸವು ಉದಯಿಸಲಿ,
ಆತ್ಮಜ್ಯೋತಿ ಬೆಳಗಲಿ,
ಸುಜ್ಞಾನವು ಪ್ರಜ್ವಲಿಸಲಿ,
ದೀಪದಿಂದ ದೀಪ ಬೆಳಗಲಿ,
ಎಲ್ಲರೊಂದೇ ಆಗಲಿ
ಆನಂದದ ಬೆಳಕಾಗಲಿ
ಸುತ್ತಮುತ್ತ ಪಸರಿಸಲಿ
ಸರ್ವರಲ್ಲಿಯೂ ಆವರಿಸಲಿ...

ನೋಯಿಸಿದವರ ಮನೆಯ,
ಕತ್ತಲೆಯನು ಓಡಿಸುವ,
ಬೆಳಕಿನ ಔದಾರ್ಯ ಕೊಡು,

ಗುಡಿಯಲ್ಲೂ ಗುಡಿಸಲಲ್ಲಿ,
ಒಂದೇ ಸಮ ಬೆಳಗುವ
ದೀಪದ ಸಮತೆಯ ಕೊಡು.....

- ಜಿ. ಎ.ಜಗದೀಶ್,
ಪೊಲೀಸ್ ಅಧೀಕ್ಷಕರು (ನಿ)

## ದಿನದ ಚುಟುಕು

ವಿಚಾರಧಾರೆಗಳು ಅಗಣಿತ
ಸಮೀಕರಣದಲಿ ಸಮ್ಮಿಳಿತ
ಚಿಂತನ ಮಂಥನದಲ್ಲಿ ನವನೀತ
ಫಲವದು ಹರಳುಗಟ್ಟಿದ ಘೃತ.

- ವೀಕೆಎಂ.

## ಜಾಲತಾಣದಲ್ಲಿ ಹುಣ್ಣಿಮೆ

(1ನೇ ಪುಟದಿಂದ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸರಳ ಹುಣ್ಣಿಮೆ, ಜಾಲತಾಣದಲ್ಲಿ ಪ್ರಸಾರ :** ತರಳಬಾಳು ಹುಣ್ಣಿಮೆ ಮಹೋತ್ಸವ ರದ್ದಾದಾಗೆಲ್ಲ ಸರಳವಾಗಿ ಒಂದು ದಿನದ ಆಚರಣೆಯಾಗಿ ಸಿರಿಗೆರೆಯ ಮಠದ ಆವರಣದಲ್ಲಿ ಹುಣ್ಣಿಮೆ ನಡೆಯುತ್ತಿತ್ತು. ಆದರೆ, ಈ ಬಾರಿ ಆ ಯೋಚನೆಯನ್ನೂ ಸಹ ಕೈಬಿಡಲಾಗಿದ್ದು, ಹುಣ್ಣಿಮೆ ಸಂದೇಶವು ಭಕ್ತರಿಗೆ ತಲುಪುವಂತೆ 9 ದಿನಗಳ ಕಾಲ ನಿತ್ಯವೂ ಸಂದೇಶವನ್ನು ಸಾಮಾಜಿಕ ಜಾಲತಾಣದ ಮೂಲಕ ಪ್ರಸಾರ ಮಾಡುವಂತೆ ಏರ್ಪಾಟು ಮಾಡಲಾಗಿದೆ. ಜಗತ್ತಿನೆಲ್ಲೆಡೆಯಿಂದ ಭಕ್ತರು ತಮ್ಮ ಮೊಬೈಲ್ ಫೋನ್ ಮೂಲಕವೂ ಸಹ ತರಳಬಾಳು ಹುಣ್ಣಿಮೆ ಮಹೋತ್ಸವದ ಸಂದೇಶಗಳನ್ನು ವೀಕ್ಷಿಸಬಹುದು ಎಂದು ಸ್ವಾಮೀಜಿ ಹೇಳಿದರು.


**ಸೈಟ್ ಮತ್ತು ಮನೆ ಕಾಂಪ್ಲೆಕ್ಸ್ ಹೊಲ ಮತ್ತು ತೋಟಗಳು**
ಮಾರಾಟಕ್ಕೆ ಕೊಡುವುದಕ್ಕೆ, ತೆಗೆದುಕೊಳ್ಳುವದಕ್ಕೆ ವಿಚಾರಿಸಿ.
ಐಗೂರು ವಿಜಯ್‌ಕುಮಾರ್
99457 02495
ಸುರೇಶ್: 95911 60520

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2%) ಅರ್ಧ ಪರ್ಸೆಂಟ್ ಕಮೀಷನ್‌ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ (ಏಜೆಂಟ್)
ಮೊ.98440-63409

**ಸೈಟ್‌ಗಳು ಮಾರಾಟಕ್ಕಿವೆ**
ಬಾಟ್ಲಿ ಬಿಲ್ಡಿಂಗ್ ಹಿಂಭಾಗ 30x50 ಉತ್ತರ ಎಸ್.ಎಸ್. ಬಡಾವಣೆಯಲ್ಲಿ, ಬೂಸ್ನೂರು ಸ್ಕೂಲ್ ಹಿಂಭಾಗ 30x40 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ.
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x50, 30x50 East ಅಕ್ಕ-ಪಕ್ಕ, 30x40, 30x40 East ಅಕ್ಕ-ಪಕ್ಕ 30x50 west
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110, 93410 14130

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ 18 ರಿಂದ 30 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಮೂಲ ಪತ್ರ ಕಳೆದಿದೆ**
ಶ್ರೀಮತಿ ರಜಿಯಾಬಿ ಯಾನೆ ರಜಿಯಾ ಬೇಗಂ ಬಾಷನಗರ, ದಾವಣಗೆರೆ ಸಿಟಿ, ಶ್ರೀಮತಿ ಶಾಹಿದಾ ಬೇಗಂ ತಂದೆ ಮಖಿನ್‌ದಾರ್ ಜಂಟಿ ಹೆಸರಿನಲ್ಲಿರುವ ಶಾಮನೂರು ಸರ್ವೆ ನಂ.57ರಲ್ಲಿ ಸೈಟ್ ನಂ.70ರ ಸ್ವತ್ತಿನ ಮೂಲ ಪತ್ರ ದಿನಾಂಕ 22.11.2020ರಂದು ಆರ್.ಟಿ.ಓ. ಸರ್ಕಲ್ ಕಡೆಯಿಂದ ನಮ್ಮ ಮನೆಯ ಕಡೆ ಹೋಗುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
94491 03775

**ಬಾಡಿಗೆಗೆ ಇದೆ**
ಪಿ.ಜೆ.ಬಡಾವಣೆ 8ನೇ ಮುಖ್ಯ ರಸ್ತೆ, 8ನೇ ಕ್ರಾಸ್ ಡಾ. ಸಿದ್ದೇಶ್ ಬಿಲ್ಡಿಂಗ್‌ನಲ್ಲಿ 3 ಸಾವಿರ ಚದುರಡಿ ಮೊದಲನೇ ಮಹಡಿ ಆಫೀಸ್, ಕ್ಲಿನಿಕ್, ಫಾರ್ಮ, ಬ್ಯಾಂಕುಗಳಿಗೆ ಬಾಡಿಗೆಗೆ ಇದೆ. ವಿಚಾರಿಸಿ.
ಮೊ. 94480-28103

**ಬಾಡಿಗೆಗೆ / ಲೀಜ್‌ಗೆ**
ಶ್ರೀ ಸಿದ್ದೇಶ್ವರ ರೈಸ್ ಮಿಲ್, ಆರನೇ ಕಲ್ಲು ಹದಡಿ ರಸ್ತೆಯಲ್ಲಿ ಗೋಡೌನ್‌ಗಳು ಬಾಡಿಗೆಗೆ ಅಥವಾ ಲೀಸ್‌ಗೆ 4200sqft + 4300 sqft = 8500 sqft
ವಿಚಾರಿಸಿ: V.C. ಶಿವಮೂರ್ತಿ
86604 30869

**ರೂಂ ಬಾಡಿಗೆಗೆ ಇದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ (ಹೊಸ ಕೋರ್ಟ್ ಹಿಂಭಾಗ) 5ನೇ ಕ್ರಾಸ್‌ನಲ್ಲಿ ಎಲ್ಲ ಸೌಕರ್ಯವುಳ್ಳ ರೂಂ ಬಾಡಿಗೆಗೆ ಇದೆ. ಸಂಪರ್ಕಿಸಿ
97310 63330

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 8 ರಿಂದ ಸಂಜೆ 6ರ ವರೆಗೆ. ಮನೆ ವಿಳಾಸ ಹೈಟೆಕ್ ಹಾಸ್ಪಿಟಲ್ ಹತ್ತಿರ ಆಸಕ್ತಿ ಇರುವ ಹೆಣ್ಣು ಮಕ್ಕಳು ಈ ನಂಬರಿಗೆ ಸಂಪರ್ಕಿಸಿ
83102 57998

**ಸೈಟ್‌ಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ, ಲೀಸಿಗೆ ಇವೆ**
ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ, 40x60 ಪಶ್ಚಿಮ, 30x36 ಪಶ್ಚಿಮ ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
ಕುವೆಂಪು ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ 40x60 North 3 ಬೆಡ್‌ರೂಂ ಮನೆ, 40x60 west 2 ಬೆಡ್‌ರೂಂ ಮನೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110, 93410 14130

**ವಧು-ವರರ ಮಾಹಿತಿ ಕೇಂದ್ರ**
ನಮ್ಮಲ್ಲಿ ಎಲ್ಲಾ ಜಾತಿಯ ವಧು-ವರರಿಗಾಗಿ ಸಂಪರ್ಕಿಸಿ
ಶಶಿ ದಿನಪತ್ರಿಕೆ ಏಜೆನ್ಸಿ
ಶಾಂತಿ ಪಾರ್ಕ್ ಪಕ್ಕ, ಅಶೋಕ ರಸ್ತೆ, ದಾವಣಗೆರೆ.
88614-38237
93808-33743

**ಮನೆ ಬಾಡಿಗೆಗೆ ಇದೆ**
ಬನಶಂಕರಿ ಬಡಾವಣೆ ಹಿಂಭಾಗ ಗ್ರೌಂಡ್ ಫ್ಲೋರ್ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ.
96322 88041
98804 40541

**ಕೆಲಸಕ್ಕೆ ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯ ಇ- ಲರ್ನಿಂಗ್ ಆಪ್‌ಗೆ ಕೆಲಸ ಮಾಡಲು ಯುವಕ-ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 20 ಸಾವಿರಗಳು ನೀಡಲಾಗುವುದು. ಸ್ಥಳ : ಮೌನೇಶ್ವರ ಬಡಾವಣೆ ನಿಟ್ಟುವಳ್ಳಿ, ದಾವಣಗೆರೆ. ಸಮಯ: ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ
9538538311, 79755 18856

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ 30x30, 30x50, 50x75, 40x60, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್
ಮೊ.97315 12365

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಪೇಂಟ್ಸ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
99800 53167

**ಸೈಟ್ ಮಾರುವುದಕ್ಕೆ ಹಾಗೂ ಕೊಳ್ಳುವುದಕ್ಕೆ, ಮನೆ ಶಿಫ್ಟಿಂಗ್ ಮಾಡಲಾಗುತ್ತದೆ.**
ಸಂಪರ್ಕಿಸಿ
86181 82332

**Only Business Loan**
ವ್ಯವಹಾರ ಸಾಲ ಸೌಲಭ್ಯಗಳಿಗಾಗಿ ಸಂಪರ್ಕಿಸಿ ಅಧಿಕೃತ ಬ್ಯಾಂಕಿನಿಂದ ಸಾಲ ಸೌಲಭ್ಯ (Secured Loan) #172/1, 1st Floor, sri Ganesh Plaza, opp Chetan Hotel, P.J. Extn, Davanagere.
97383 82070
88848 96020

**ಮನೆ ಬಾಡಿಗೆಗೆ ಇದೆ**
1BHK, 1st Floor ಶಕ್ತಿ ನಗರ, 2ನೇ ಹಂತ, ದಾವಣಗೆರೆ.
90088 38988
96325 35339

**ಬಿಲ್ಡಿಂಗ್ ಮೆಟೀರಿಯಲ್ ಸಪ್ಲೈಯರ್**
ಹೊಳೆ ಮರಳು, (ರೆಡಿಮೇಡ್ ಶೆಡ್) M Sand, 20mm ಜಲ್ಲಿ ಬ್ರಿಕ್ಸ್ (ಇಟ್ಟಿಗೆ) ಸಿಮೆಂಟ್ ಮತ್ತು C.C ಮೋಲ್ಡ್ & JCB ಗ್ರಾವೆಲ್ಸ್ ದೊರೆಯುತ್ತದೆ.
95387 71714
77607 71714

**ಹಾಲ್ ಬಾಡಿಗೆಗೆ ಇದೆ**
ದಾವಣಗೆರೆ ಬಿನ್ನಿ ಕಂಪನಿ ರೋಡ್ ಎಸ್.ಬಿ.ಐ ಹಿಂಭಾಗದಲ್ಲಿ ಮೊದಲನೇ ಮಹಡಿಯಲ್ಲಿ ಸಿಂಡಿಕೇಟ್ ಬ್ಯಾಂಕ್ ಮೇಲೆ 1000 sqft ಹಾಲ್ ಬಾಡಿಗೆಗೆ ಇದೆ. ವಾಣಿಜ್ಯ ಉಪಯೋಗಕ್ಕೆ ಅನುಕೂಲವಿದೆ. ಆಸಕ್ತರು ಸಂಪರ್ಕಿಸಿ
72596 54219
99808 79728

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಮನೆ ಮನೆಗೆ ಹೋಗಿ ಪಾಂಪ್ಲೆಟ್ಸ್ ಹಂಚಲು ಯುವಕರು ಬೇಕಾಗಿದ್ದಾರೆ. ವೇತನ ರೂ 3000/- ತಿಂಗಳಿಗೆ.
79752 01572
96636 93007

**ಸೈಟ್ ಬೇಕಾಗಿದೆ**
ಜೆ.ಹೆಚ್ ಪಟೇಲ್ ಬಡಾವಣೆ ಅಥವಾ ನಿಟುವಳ್ಳಿ ವಿಭಾಗದಲ್ಲಿ ಫೈನಲ್ ಅಪ್ರೂವಲ್ ಆಗಿರುವ 20x30 ಅಥವಾ 20x40 ಸೈಟ್ ಬೇಕಾಗಿರುತ್ತದೆ. ಕೊಡಲಿಚ್ಛಿಸುವವರು ಈ ನಂಬರ್‌ಗೆ ಸಂಪರ್ಕಿಸಿ
63600 06894
98445 80038

**ಮನೆ ಮಾರಾಟಕ್ಕಿದೆ**
ಪಶ್ಚಿಮ ದಿಕ್ಕಿನ 30x50 ಸೈಟಿನಲ್ಲಿ 2 ಬೆಡ್ ರೂಂನ ಎಲ್ಲಾ ಆಧುನಿಕ ವ್ಯವಸ್ಥೆ ಇರುವ ಹೊಸ ಮನೆ ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕಿದೆ.
ವಿಚಾರಿಸಿ :
98448-82366

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಮನೆ ಬಾಡಿಗೆಗೆ ಲಭ್ಯವಿದೆ**
ಸೋಲಾರ್ ಹಾಗೂ ಕಾರ್ಪೊರೇಷನ್ / ಬೋರ್‌ವೆಲ್ ನೀರಿನ ಸೌಲಭ್ಯವಿರುವ 2 ಬೆಡ್‌ರೂಂ ಮನೆ ನೂತನವಾಗಿ ಕಟ್ಟಿಸಿರುವ ಬಿಲ್ಡಿಂಗ್‌ನಲ್ಲಿ ಸ್ವಾಮಿ ವಿವೇಕಾನಂದ ಬಡಾವಣೆ, 7ನೇ ಮೇನ್, ನಂ. 1868/13 ನಲ್ಲಿ ಬಾಡಿಗೆಗೆ ಲಭ್ಯವಿರುತ್ತದೆ. ಸಂಪರ್ಕಿಸಿ :
8861462603

**ಬೇಕಾಗಿದ್ದಾರೆ**
ಮನೆಗೇ ಬಂದು ಟ್ಯೂಷನ್ ಮಾಡಲು ಟೀಚರ್ ಬೇಕಾಗಿದ್ದಾರೆ. 2 ಮತ್ತು 6 ನೇ ತರಗತಿಯ ಇಂಗ್ಲಿಷ್ ಮೀಡಿಯಂ ಮಕ್ಕಳಿಗೆ. ವಿಳಾಸ ಆಂಜನೇಯ ಬಡಾವಣೆ. ಆಸಕ್ತರು ಸಂಪರ್ಕಿಸಿ:
72596 60786

**ಸೆಲ್ಲರ್ ಬಾಡಿಗೆಗೆ ಇದೆ**
ಟ್ರೈನಿಂಗ್ ಸೆಂಟರ್, ಗೋಡೌನ್, ಮೆಸ್, ಸೂಪರ್ ಮಾರ್ಕೆಟ್ Etc ಗೆ ಯೋಗ್ಯವಾದ 1200sqft ಸೆಲ್ಲರ್ ಬಾಡಿಗೆಗೆ ಇದೆ. 6th cross, BIET College Road, Near Davan college, MCC 'B' Block, Davanagere.
99725 35329

**ಪೊಲೀಸ್ ತರಬೇತಿ**
ಪೊಲೀಸ್ ಇಲಾಖೆಗೆ ಭರ್ತಿಯಾಗುವವರಿಗೆ ಮತ್ತು ಫೇಲ್ ಆದ ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗುವುದು.
ಸಂಪರ್ಕಿಸಿ: ಶಶಿ ದಿನಪತ್ರಿಕೆ ಏಜೆನ್ಸಿ
ಶಾಂತಿ ಪಾರ್ಕ್ ಪಕ್ಕ, ಅಶೋಕ ರಸ್ತೆ, ದಾವಣಗೆರೆ.
98452-79197

**ಅಂಗಡಿ ಲೀಜ್/ಬಾಡಿಗೆಗೆ**
ಹಾಸಬಾವಿ ಸರ್ಕಲ್ ಹತ್ತಿರ ಅಂಗಡಿ ಲೀಜ್/ಬಾಡಿಗೆಗೆ ಇದೆ
ಅಳತೆ :15x30. ವಿಚಾರಿಸಿ
89041 29928

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**JOBS**
MCS ACADEMY
Training & Placement Cell
98444 92888

**FAILED & REGULAR COACHING**
for SSLC & IInd PUC
PCMB, Commerce, Arts
SINCHANA ACADEMY
Near SBI ATM, Ram & co Circle, Davangere.
85532 78258 90195 80600

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 1) Cashier 2) sales Girls/Boys
ಸಂಪರ್ಕಿಸಿ
63631 97523

**WANTED**
1) Lab Technician DLT Passed.
2) Staff Nurses.
3) Ayah.
4) X-ray Technician.
Contact : 98440-65638

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು/ ಹುಡುಗಿಯರು (ವಯಸ್ಸು 18-30) ಬೇಕಾಗಿದ್ದಾರೆ. ಸಂಬಳ : 10,000/- ಸಮಯ : 09.30-8.00
95381 87385
08192 261003
99161 43003

**ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ**
ಪ್ರತಿ ಅಂಗಡಿಗಳಿಗೆ ಭೇಟಿಯಾಗಿ ಸೇಲ್ಸ್ ಮಾಡುವ 1 ಅಥವಾ 2 ವರ್ಷ ಅನುಭವ ಇರುವಂತಹ ಸೇಲ್ಸ್‌ಮ್ಯಾನ್‌ಗಳು ಬೇಕಾಗಿದ್ದಾರೆ. ಆಸಕ್ತರು ವಿಚಾರಿಸುವ ಸಮಯ 10 ರಿಂದ 5 ಘಂಟೆವರೆಗೆ ಮಾತ್ರ
99865 38099

**ಬೇಕಾಗಿದ್ದಾರೆ**
ಮನೆಯಲ್ಲಿ ಗಾರ್ಡನ್ ಕೆಲಸ ಮಾಡಲು ಗಂಡಸರು ಬೇಕಾಗಿದ್ದಾರೆ. ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ, ದಾವಣಗೆರೆ-5.
94810 38402, 99162 36521

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9.00 ರಿಂದ ಸಂಜೆ 8:00 ರವರೆಗೆ
ಸಂಪರ್ಕಿಸಿ:
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರಸ್ತೆ, ಟೈರ್ ಅಂಗಡಿಗಳ ಹತ್ತಿರ, ದಾವಣಗೆರೆ.

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮವರಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಬೇಕಾಗಿದ್ದಾರೆ**
ಬೇತೂರು ಮತ್ತು ನಿಟ್ಟೂರಿನಲ್ಲಿ ಹಾಗೂ ದಾವಣಗೆರೆ ಸುತ್ತಮುತ್ತಲು ಸೆಕ್ಯೂರಿಟಿ ಹಾಗೂ ರಿಸೆಪ್ಷನಿಸ್ಟ್, ರೂಮ್ ಬಾಯ್ಸ್ ಬೇಕಾಗಿದ್ದಾರೆ. ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ. ಕೂಡಲೇ ಸಂಪರ್ಕಿಸಿರಿ :
9880648207, 7411307071

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಭೂಮಿಕಾ ಮ್ಯಾಟ್ರಿಮೋನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davangere.
77603 16576
90080 55813

**SBI-CSP**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account open) with ATM old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ # 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005
93436 22166

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

# 2ಎ ಮೀಸಲಾತಿ ದುರ್ಬಳಕೆ ತಡೆಗೆ ಅಹಿಂದ ಒಕ್ಕೂಟ ಒತ್ತಾಯ

ದಾವಣಗೆರೆ, ಫೆ.11- ಜಿಲ್ಲೆಯ ಕೆಲವು ಗ್ರಾಮ ಪಂಚಾಯ್ತಿಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಲು ಲಿಂಗಾಯತ ಒಳಪಂಗಡಗಳ ಹೆಸರಿನಲ್ಲಿ ಕುರುಬರಿಗೆ ಸಿಗಬೇಕಾದ 2ಎ ಮೀಸಲಾತಿಯನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದ್ದು, ಜಿಲ್ಲಾಡಳಿತ ಇದನ್ನು ತಡೆಯುವಂತೆ ಅಹಿಂದ ಒಕ್ಕೂಟದ ಜಿಲ್ಲಾಧ್ಯಕ್ಷ ಕೆಂಗೋ ಹನುಮಂತಪ್ಪ ಸುದ್ದಿಗೋಷ್ಠಿಯ ಮೂಲಕ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಈಗಾಗಲೇ ಚನ್ನಗಿರಿ ತಾಲ್ಲೂಕಿನ ದೊಡ್ಡಮಲ್ಲಾಪುರ ಗ್ರಾ.ಪಂ ನಲ್ಲಿ 2ಎ ಮೀಸಲಾತಿ ದುರ್ಬಳಕೆ ಪಡೆದು ಅಧಿಕಾರಕ್ಕೆ ಬಂದಿರುವುದು ತಿಳಿದುಬಂದಿದೆ. ಕೂಡಲೇ ಅಂತಹ ಪಂಚಾಯ್ತಿ ಮೀಸಲಾತಿ ಹಿಂಪಡೆಯಬೇಕು ಮತ್ತು ಇದಕ್ಕೆ ಕುಮ್ಮಕ್ಕು ನೀಡಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಆಗ್ರಹಿಸಿದರು.

ಲಿಂಗಾಯತ ಕುಂಬಾರ, ಲಿಂಗಾಯತ ಗಾಣಿಗ, ಲಿಂಗಾಯತ ಹಡಪದ ಹೆಸರಿನಲ್ಲಿ 2ಎ ಮೀಸಲಾತಿ ಪಡೆದು ಕುರುಬರನ್ನು ಅಧಿಕಾರದಿಂದ ದೂರ ಇಡುವ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿದರು.

2ಎ ಮೀಸಲಾತಿ ದುರುಪಯೋಗವಾಗದಂತೆ ತಡೆಯಲು ರಾಜ್ಯಾದ್ಯಂತ ಎಲ್ಲಾ ಪಂಚಾಯ್ತಿಗಳಿಗೂ ಸುತ್ತೋಲೆ ಹೊರಡಿಸುವಂತೆ ಮುಖ್ಯಮಂತ್ರಿ ಯಡಿಯೂರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಸಚಿವ ಶ್ರೀರಾಮುಲು ಅವರಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದರು.

ಮಾಹಿತಿ ಹಕ್ಕಿನಡಿ ಸುಳ್ಳು ಪ್ರಮಾಣ ಪತ್ರ ನೀಡಿರುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ದಾಖಲೆ ಪಡೆದು ಉನ್ನತಾಧಿಕಾರಿಗಳಿಗೆ ದೂರು ಸಲ್ಲಿಸಲಾಗುವುದು ಎಂದರು.

ಲಿಂಗಾಯತ ಸಮುದಾಯದ ಕೆಲ ಉಪ ಪಂಗಡಗಳು 2ಎ ಮೀಸಲಾತಿ ದುರುಪಯೋಗಕ್ಕೆ ಮುಂದಾಗಿದ್ದು, ಹೀಗೆಯೇ ಮುಂದುವರೆದರೆ ಸುಳ್ಳು ಮೀಸಲಾತಿ ಪ್ರಮಾಣಪತ್ರ ನೀಡಿರುವ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಬಳ್ಳಾರಿ ಷಣ್ಮುಖಪ್ಪ, ಜೆ.ಕೆ. ಕೊಟ್ರಬಸಪ್ಪ, ಬಿ.ಹೆಚ್. ಪರಶುರಾಮಪ್ಪ, ಪಿ. ರಾಜಕುಮಾರ್, ಹೆಚ್.ಬಿ. ಗೋಣೆಪ್ಪ, ಲಿಂಗರಾಜ್, ಹಾಲೇಕಲ್ ಎಸ್.ಟಿ. ಅರವಿಂದ್, ಹೆಚ್.ಎಂ. ಜಯಣ್ಣ, ಚೌಡಪ್ಪ, ಜಯಣ್ಣ, ಷಣ್ಮುಖ ಆಚಾರ್, ಉಮೇಶ್, ಮುದಹದಡಿ ದಿಳ್ಳೆಪ್ಪ, ಶ್ರೀನಿವಾಸ್, ಇಟ್ಟಿಗುಡಿ ಮಂಜುನಾಥ್, ದ್ಯಾಮಣ್ಣ, ಮೌನೇಶ್ವರಾಚಾರ್, ಮಹಾರುದ್ರಚಾರ್ ಉಪಸ್ಥಿತರಿದ್ದರು.

# ಬಿಳಿ ಬೋರ್ಡ್ ವಾಹನಗಳ ಬಾಡಿಗೆ ತಡೆಗೆ ಮನವಿ

ದಾವಣಗೆರೆ, ಫೆ.11- ಸಾರಿಗೆ ನಿಯಮಾನುಸಾರ ಹಳದಿ ನಂಬರ್ ಪ್ಲೇಟ್‌ನ ವಾಹನಗಳನ್ನು ಹೊರತುಪಡಿಸಿ, ಉಳಿದ ವಾಹನಗಳಿಗೆ ಬಾಡಿಗೆ ಮಾಡಲು ಅವಕಾಶ ಮಾಡಿಕೊಡದಂತೆ ಪ್ರಾದೇಶಿಕ ಸಾರಿಗೆ ಇಲಾಖೆಗೆ ನಮ್ಮ ಚಾಲಕರ ಟ್ರೇಡ್ ಯೂನಿಯನ್ ಜಿಲ್ಲಾ ಘಟಕದ ನೇತೃತ್ವದಲ್ಲಿ ಹಳದಿ ನಂಬರ್ ಪ್ಲೇಟ್‌ನ ಚಾಲಕರು ಮತ್ತು ಮಾಲೀಕರು ಒತ್ತಾಯಿಸಿದ್ದಾರೆ.



ನಗರದ ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿಯಲ್ಲಿ ಆರ್‌ಟಿಓ ಅಧಿಕಾರಿ ಶ್ರೀಧರ್ ಆರ್. ಮಲ್ನಾಡ್ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಸಂಘಟನೆ ಜಿಲ್ಲಾಧ್ಯಕ್ಷ ಎಸ್. ಗಣೇಶ್, ಜಿಲ್ಲೆಯಲ್ಲಿ ಬಿಳಿ ಬಣ್ಣದ ನಂಬರ್ ಪ್ಲೇಟ್‌ನ ವಾಹನಗಳ ಹಾವಳಿ ಮಿತಿ ಮೀರುತ್ತಿದ್ದು, ಕಾನೂನು ಬಾಹಿರವಾಗಿ ಬಾಡಿಗೆ ಓಡಿಸಲಾಗುತ್ತಿದೆ. ಹಳದಿ ಬೋರ್ಡ್‌ನ ಚಾಲಕರು, ಮಾಲೀಕರು ಇದರಿಂದ ತೀವ್ರ ಸಂಕಷ್ಟ ಎದುರಿಸುವಂತಾಗಿದೆ. ನಮ್ಮ ಜಿಲ್ಲೆಯಲ್ಲಿ ಯಾವುದೇ ಕಾರಣಕ್ಕೂ ಬಿಳಿ ಬಣ್ಣದ ನಂಬರ್ ಪ್ಲೇಟ್ ವಾಹನಗಳಿಗೆ ಬಾಡಿಗೆ ಮಾಡಲು ಅವಕಾಶ ಮಾಡಿಕೊಡಬಾರದು ಎಂದು ಆಗ್ರಹಿಸಿದರು.

ಬಿಳಿ ಬಣ್ಣದ ವಾಹನಗಳು ಯಾವುದೇ ರೀತಿಯಲ್ಲೂ ಸಾರಿಗೆ ನಿಯಮಗಳನ್ನು ಪಾಲನೆ ಮಾಡದೇ, ಕಾನೂನು ಬಾಹಿರವಾಗಿ ಬಾಡಿಗೆಗೆ ಮಾಡುತ್ತಿವೆ. ಬಿಳಿ ಬಣ್ಣದ ವಾಹನಗಳು ಹೀಗೆ ರಾಜಾರೋಷವಾಗಿ ಬಾಡಿಗೆ ಸಂಚರಿಸುತ್ತಿರುವುದರಿಂದ ನಿಯಮಾನುಸಾರ ಪರ್ಮಿಟ್ ಪಡೆದು ತೆರಿಗೆ ಪಾವತಿಸಿ, ಬಾಡಿಗೆ ಮಾಡುವ ನಮ್ಮಂತಹವರಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು.

ಜಿಲ್ಲಾಡಳಿತ, ಪ್ರಾದೇಶಿಕ ಸಾರಿಗೆ ಇಲಾಖೆಗೆ ಬಿಳಿ ಬಣ್ಣದ ನಂಬರ್ ಪ್ಲೇಟ್‌ನ ವಾಹನಗಳ ಹಾವಳಿ ತಡೆಯಲಾಗದಿದ್ದರೆ ಜಿಲ್ಲೆಯ ಎಲ್ಲಾ ಹಳದಿ ಬಣ್ಣದ ನಂಬರ್ ಪ್ಲೇಟ್ ವಾಹನಗಳನ್ನೂ ಬಿಳಿ ಬಣ್ಣದ ನಂಬರ್ ಪ್ಲೇಟ್ ಆಗಿ ಮಾಡಿಕೊಡಬೇಕು. ನಾವೂ ಸಹ ಈಗ ಬಿಳಿ ನಂಬರ್ ಪ್ಲೇಟ್ ವಾಹನಗಳಂತೆಯೇ ಬಾಡಿಗೆ ಮಾಡಿಕೊಂಡಿರುತ್ತೇವೆ. ಬಿಳಿ ನಂಬರ್ ಪ್ಲೇಟ್ ಹಾವಳಿ ತಡೆಯಿರಿ ಅಥವಾ ನಮ್ಮ ವಾಹನಗಳಿಗೂ ಬಿಳಿ ಬಣ್ಣದ ನಂಬರ್ ಪ್ಲೇಟ್‌ಗೆ ಅವಕಾಶ ಮಾಡಿಕೊಡಿ. ಸ್ವಂತ ಬಳಕೆಯ ವೈಟ್ ಬೋರ್ಡ್ ವಾಹನ ಬಾಡಿಗೆ ಮಾಡುತ್ತಿದ್ದರೆ ಅಂತಹ ವಾಹನಗಳನ್ನು ಆರ್‌ಟಿಓದಿಂದ ಜಪ್ತು ಮಾಡಿ, ಕಾನೂನು ಕ್ರಮ ಜರುಗಿಸಬೇಕು ಎಂದು ಕೋರಿದರು.

> ವೈಟ್ ಬೋರ್ಡ್ ಟ್ಯಾಕ್ಸಿಯಲ್ಲಿ ಬಾಡಿಗೆ ಹೋಗಿ ಆಕಸ್ಮಾತ್ ಅಪಘಾತ ಸಂಭವಿಸಿ ಯಾರಾದರೂ ಸಾವನ್ನಪ್ಪಿದರೆ, ತೀವ್ರ ಗಾಯಗೊಂಡರೆ ವಿಮೆ ಸಿಗುವುದಿಲ್ಲ. ವೈಟ್ ಬೋರ್ಡ್ ಟ್ಯಾಕ್ಸಿಗಳಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ತಪ್ಪಿ ಹೋಗುತ್ತಿದೆ. ಮಿತಿ ಮೀರಿದ ಟ್ರಾಫಿಕ್ ನಿಯಮ ಉಲ್ಲಂಘನೆಯಾಗುತ್ತಿದೆ. ಕಾನೂನು ಪ್ರಕಾರ ತೆರಿಗೆ ಕಟ್ಟಿ ಜೀವನ ನಡೆಸುವವರ ಅನ್ನ ಕಸಿಯಲಾಗುತ್ತಿದೆ. ಇದನ್ನು ತಡೆಯಬೇಕು.
>
> **-ಎಸ್. ಗಣೇಶ್**, ಜಿಲ್ಲಾಧ್ಯಕ್ಷರು, ಚಾಲಕರ ಟ್ರೇಡ್ ಯೂನಿಯನ್

ಈ ಸಂದರ್ಭದಲ್ಲಿ ಸಂದೀಪ್ ಬೆಳವನೂರು, ಗಣೇಶ, ಧನಂಜಯ (ಬದ್ರಿ), ಸಂದೀಪ್ ಗೌಡ, ಶಿವು, ಯೋಗೀಶ್, ಮಹೇಶ್, ಉಮೇಶ್, ಬಸವರಾಜ ಸೇರಿದಂತೆ ಇತರರಿದ್ದರು.

# ನಾಡಿದ್ದು 'ಶಿಕ್ಷಣ ಯೋಗಿ' ಅಭಿನಂದನಾ ಗ್ರಂಥ ಲೋಕಾರ್ಪಣೆ



**ಡಯಟ್ ಪ್ರಾಚಾರ್ಯ ಹೆಚ್.ಕೆ. ಲಿಂಗರಾಜ್ ಮತ್ತು ಶ್ರೀಮತಿ ಟಿ.ಜಿ. ಲೀಲಾವತಿ ದಂಪತಿಗೆ ಅಭಿನಂದನಾ ಕಾರ್ಯಕ್ರಮ**

ದಾವಣಗೆರೆ, ಫೆ. 10 - ಜಿಲ್ಲೆಯ ಡಯಟ್ ಪ್ರಾಚಾರ್ಯ ಹೆಚ್.ಕೆ. ಲಿಂಗರಾಜು ಅವರ ಜೀವಮಾನ ಸಾಧನೆ ಕುರಿತಾದ 'ಶಿಕ್ಷಣ ಯೋಗಿ' ಅಭಿನಂದನಾ ಗ್ರಂಥವು ಇದೇ ದಿನಾಂಕ 14ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಸೌಹಾರ್ದ ಪ್ರಕಾಶನದ ಪ್ರಕಾಶಕರಾದ ಶ್ರೀಮತಿ ಎ.ಸಿ. ಶಶಿಕಲಾ ಶಂಕರಮೂರ್ತಿ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕಾಕನೂರಿನ ಮಲ್ಲಪ್ಪರ ದಿ|| ಬಸವಂತಪ್ಪ, ದಿ|| ಚಂದ್ರಪ್ಪ ಬಸವಂತಪ್ಪ ಹಾಗೂ ನನ್ನ ಪತಿ ದಿ|| ಎ.ಬಿ. ಶಂಕರಮೂರ್ತಿ ಅವರ ಪುಣ್ಯಸ್ಮರಣಾರ್ಥ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ಅವರು ಹೇಳಿದರು.

ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಎಸ್.ಬಿ. ರಂಗನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಕಾರ್ಯಕ್ರಮವನ್ನು ಉದ್ಘಾಟಿಸುವರು. ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ಡಾ. ಹೆಚ್.ವಿ. ವಾಮದೇವಪ್ಪ ಅಭಿನಂದನಾ ಗ್ರಂಥ ಕುರಿತು ಮಾತನಾಡಲಿದ್ದಾರೆ. ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ 'ಶಿಕ್ಷಣ ಯೋಗಿ' ಗ್ರಂಥವನ್ನು ಲೋಕಾರ್ಪಣೆ ಮಾಡಲಿದ್ದಾರೆ.

ಇದೇ ಸಂದರ್ಭದಲ್ಲಿ ಹೆಚ್.ಕೆ. ಲಿಂಗರಾಜ್ ಹಾಗೂ ಶ್ರೀಮತಿ ಟಿ.ಜಿ. ಲೀಲಾವತಿ ದಂಪತಿಗೆ ಅಭಿನಂದನೆ ಸಲ್ಲಿಸಲಾಗುವುದು.

ಮಾಜಿ ಸಚಿವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿ, ಕಸಾಪ ತಾಲ್ಲೂಕು ಅಧ್ಯಕ್ಷ ಬಿ. ವಾಮದೇವಪ್ಪ, ಸಿದ್ದಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥರಾದ ಜಸ್ಟಿನ್ ಡಿಸೋಜ, 'ಜನತಾವಾಣಿ' ಸಂಸ್ಥಾಪಕರಾದ ದಿ|| ಹೆಚ್.ಎನ್. ಷಡಾಕ್ಷರಪ್ಪ ಅವರ ಪತ್ನಿ ಶ್ರೀಮತಿ ಜಯಶೀಲ ಷಡಾಕ್ಷರಪ್ಪ, ಹಿರಿಯೂರಿನ ನಿವೃತ್ತ ಶಿಕ್ಷಕ ಹೆಚ್.ಜಿ. ರಾಮೋಜಪ್ಪ, ರೈತ ಮುಖಂಡ ಎ.ಎಸ್. ಪಾಲಾಕ್ಷಪ್ಪ, ನೀಲಕಂಠಪ್ಪ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಹಿರಿಯ ಪತ್ರಕರ್ತರುಗಳಾದ ಬಿ.ಎನ್. ಮಲ್ಲೇಶ್, ಜಿ.ಎಂ.ಆರ್. ಆರಾಧ್ಯ, ಇ.ಎಂ. ಮಂಜುನಾಥ, ಹೆಚ್. ವೆಂಕಟೇಶ್ ಅವರುಗಳಿಗೆ 'ಮಾಧ್ಯಮ ಶ್ರೇಷ್ಠ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಪತ್ರಿಕಾಗೋಷ್ಠಿಯಲ್ಲು ಕಸಾಪ ತಾಲ್ಲೂಕು ಅಧ್ಯಕ್ಷ ಬಿ. ವಾಮದೇವಪ್ಪ, ಪದಾಧಿಕಾರಿಗಳಾದ ಗಣೇಶ ಶೆಣೈ, ಎಸ್.ಎಂ. ಮಲ್ಲಮ್ಮ ಮತ್ತಿತರರಿದ್ದರು.

# ಶಾಸ್ತ್ರೀಯ ನೃತ್ಯ, ಸಂಗೀತಗಳು ಭಾರತೀಯ ಪರಂಪರೆಯ ಜೀವನಾಡಿಗಳು

**ಪುರಂದರ, ತ್ಯಾಗರಾಜರ ಸ್ಮರಣೋತ್ಸವದಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ**

ದಾವಣಗೆರೆ, ಫೆ.11- ಶಾಸ್ತ್ರೀಯ ಸಂಗೀತ, ನೃತ್ಯಗಳು ಭಾರತೀಯ ಪರಂಪ ರೆಯ ಜೀವನಾಡಿಗಳಂತಿದ್ದು, ಸರ್ವಾಂತ ರ್ಯಾಮಿಯಾದ ಭಗವಂತನ ದರ್ಶನಕ್ಕೆ ಇವು ಸಾಧನಗಳು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.



ನಗರದ ಆರ್.ಹೆಚ್.ಗೀತಾ ಮಂದಿರದಲ್ಲಿ ನಾಟ್ಯ ಭಾರತಿ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಕಲಾ ಕೇಂದ್ರದ ವತಿಯಿಂದ ಏರ್ಪಾಡಾಗಿದ್ದ 'ದಾಸ ಶ್ರೇಷ್ಠ ಪುರಂದರ ದಾಸರ, ತ್ಯಾಗರಾಜರ ಹಾಗೂ ವಾಗ್ಗೇಯಕಾರರ ಸ್ಮರಣೋತ್ಸವದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ನವವಿಧ ಭಕ್ತಿಗಳಲ್ಲಿ ಸಂಗೀತಕ್ಕೂ ಮಹತ್ವದ ಸ್ಥಾನವಿದ್ದು ಸಂಗೀತ ಶಿಕ್ಷಣ ಪಡೆಯುತ್ತಿರುವ ಮಕ್ಕಳು ಪ್ರತಿಭೆಯಾಗಿ ಹೊರಹೊಮ್ಮಿ ಪ್ರಕಾಶಿಸಬೇಕು, ಇದಕ್ಕಾಗಿ ಮೊಬೈಲ್ ಸಂಸ್ಕೃತಿಯಿಂದ ದೂರವಿರಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಹೆಚ್. ಬಿ.ಮಂಜುನಾಥ್ ಮಾತ ನಾಡಿ, ಕರ್ನಾಟಕದ ಸಾಹಿತ್ಯ ಪರಂಪರೆಯಲ್ಲಿ ದಾಸರ ಮತ್ತು ಶರಣರ ಸಾಹಿತ್ಯವು ಭಕ್ತಿ ರಸಕ್ಕಷ್ಟೇ ಸೀಮಿತವಾಗದೇ ಸಮಾಜ ಸುಧಾರಣೆಗೆ ಸಮರ್ಥ ಸಾಧನಗಳೂ ಆಗಿದ್ದು, ಸಾರ್ವಕಾಲಿಕ ಮೌಲ್ಯವುಳ್ಳದ್ದಾಗಿವೆ. ಪುರಂದರದಾಸರ ಅನೇಕ ಕೀರ್ತನೆಗಳು ಅಥವಾ ಕೃತಿಗಳು ಸಮಾಜದ ಅಂಕು-ಡೊಂಕುಗಳನ್ನು ನಿರ್ಭಿಡೆಯಿಂದ ಟೀಕಿಸಿ ಅದಕ್ಕೆ ಪರಿಹಾರ ಗಳನ್ನೂ ಹೇಳಿವೆ. ಸಂಗೀತಾಭ್ಯಾಸಿಗಳು ಕೃತಿಗಳ ಭಾವಾರ್ಥಗಳನ್ನು ತಿಳಿದು ಹಾಡಬೇಕು ಎಂದರಲ್ಲದೇ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೂ, ಸಾರ್ವಜನಿಕ ರಂಗದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೂ ದಾಸರ ಹಾಗೂ ಶರಣರ ಕೃತಿಗಳನ್ನು ಅರ್ಥ ಮಾಡಿಸಿದಲ್ಲಿ ಭ್ರಷ್ಟಾಚಾರ, ಅನೈತಿಕತೆಯನ್ನು ಕಡಿಮೆಗೊಳಿಸಬಹುದಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಸಂಗೀತಜ್ಞ ಪ್ರಹ್ಲಾದರಾವ್ ಮಾಗಳ, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು ಮಾತುಗಳನ್ನಾಡಿದರು. ನಾಟ್ಯ ಭಾರತಿಯ ಶ್ರೀಮತಿ ರಜನಿ ರಘು ನಾಥ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀಕಾಂತ್ ಕುಲಕರ್ಣಿ, ನೃತ್ಯ ಶಿಕ್ಷಕ ಶ್ರೀನಿಧಿ ಕುಲಕರ್ಣಿ, ರಾಜಶೇಖರ್ ಕಾರ್ಯಕ್ರಮ ನಿರ್ವಹಿಸಿದರು. ಕಲಾವಿದ ನಾಗೇಶ್ ಭಟ್, ರಾಕೇಶ್, ಶ್ರೀಮತಿ ಜಯಾ ಮತ್ತಿತರರು ಸಹಕರಿಸಿದರು.

ನಾಟ್ಯ ಭಾರತಿಯ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ ಸಂಗೀತ, ನೃತ್ಯಗಳಿಗೆ ಕ್ರಿಸ್ತಾನಂದ, ಭರತೇಶ್ ಖಿಮಿತ್ಕರ್ ವಾದ್ಯ ಸಹಕಾರ ನೀಡಿದರು. ಶ್ರೀಮತಿ ವಸಂತಾ ಅವರು ವರ್ಣರಂಜಿತ ರಂಗೋಲಿಯಲ್ಲಿ ರಚಿಸಿದ ಪುರಂದರ ದಾಸರ ಬೃಹತ್ ರಂಗೋಲಿ ಚಿತ್ರ ಅತ್ಯಾಕರ್ಷಕವಾಗಿತ್ತು.

# ನಗರದ ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

ಪಿ.ಜೆ. ಬಡಾವಣೆಯ 5,6,7, 8 ಮತ್ತು 9ನೇ ಮುಖ್ಯ ರಸ್ತೆಗಳು ಹಾಗೂ ಎಂ.ಸಿ.ಸಿ. ಎ.ಬ್ಲಾಕ್, ವಿನೋಬನಗರ 1, 2 ಮತ್ತು 3ನೇ ಮುಖ್ಯ ರಸ್ತೆ ಹಾಗೂ 1ನೇ ಮುಖ್ಯ ರಸ್ತೆಯಿಂದ 17ನೇ ಕ್ರಾಸ್‌ವರೆಗೆ, ಮುದ್ದಳ್ಳಿ ತೋಟ, ಸೂಪರ್ ಮಾರ್ಕೆಟ್‌ನ ಸುತ್ತ ಮುತ್ತ ಪ್ರದೇಶಗಳು.

ಪಿ.ಜೆ. ಬಡಾವಣೆ 1, 2, 3, 4ನೇ ಮೇನ್, ರಾಂ ಅಂಡ್ ಕೋ ಸರ್ಕಲ್, ವಿಶ್ವಾಸ್ ಅಪಾರ್ಟ್‌ಮೆಂಟ್ಸ್, ಪೊಲೀಸ್ ಕ್ವಾಟ್ರಸ್, ಅರುಣಾಟಾಕೀಸ್, ಪಶು ಸಂಗೋಪನಾ ಆಸ್ಪತ್ರೆ, ಎ.ವಿ.ಕೆ. ಕಾಲೇಜು ರಸ್ತೆ, ಸರ್ ಎಂ.ವಿಶ್ವೇಶ್ವರಯ್ಯ ಪಾರ್ಕ್ ಸುಚೇತನಾ ಆಸ್ಪತ್ರೆ, ದೃಷ್ಟಿ ಆಸ್ಪತ್ರೆ, ,ಲತಾ ನರ್ಸಿಂಗ್ ಹೋಂ, ಹೊಸ ಪೊಲೀಸ್ ಕ್ವಾಟ್ರಸ್, ರೈತರ ಬೀದಿ.

ಎಸ್.ಎಸ್. ಬಡಾವಣೆ, ಬಿ ಬ್ಲಾಕ್, ಶಾಂತಿ ನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ , ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾ ವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದು ವಾಡ ಕೆರೆ, ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಕೆಆರ್ ರಸ್ತೆ, ಗಡಿ ಯಾರ ಕಂಬ, ಬಿಟಿ ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್‌ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮೀ ರಸ್ತೆಯ ಸ್ವಲ್ಪಭಾಗ, ವಸಂತಟಾಕೀಸ್ ಸ್ವಲ್ಪಭಾಗಗಳಲ್ಲಿ ಇಂದು ಬೆಳಿಗ್ಗೆ10 ರಿಂದ ಮಧ್ಯಾಹ್ನ 2 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಬೆಳವನೂರು ಗ್ರಾ. ಪಂ. ಅಧ್ಯಕ್ಷರಾಗಿ ಮಹಾಂತೇಶ್





ದಾವಣ ಗೆರೆ, ಫೆ.11 - ತಾಲ್ಲೂಕಿನ ಬೆಳವನೂರು ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಜೆ.ಹೆಚ್. ಮಹಾಂತೇಶ್ ಮತ್ತು ಉಪಾಧ್ಯಕ್ಷರಾಗಿ ಕೆ. ಶ್ರುತಿ ಇವರು ಆಯ್ಕೆಯಾಗಿದ್ದಾರೆ.


ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಬಿ. ಪುಟ್ಟಸ್ವಾಮಿ ಚುನಾವಣಾಧಿಕಾರಿಯಾಗಿ ಪಾಲ್ಗೊಂಡಿದ್ದರು ಎಂದು ಗ್ರಾಪಂನ ಪಿಡಿಓ ತಿಳಿಸಿದ್ದಾರೆ.

# ನಗರದ ಎಂ.ಎಂ ಕಾಲೇಜಿನಲ್ಲಿ ಇಂದು

ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪೌರ ಶಿಕ್ಷಣ ಶಿಬಿರವು ಇಂದು - ನಾಳೆ ನಡೆಯಲಿದೆ.

ಇಂದು ಮಧ್ಯಾಹ್ನ 2.30 ಕ್ಕೆ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಡಾ. ಕೆ.ಟಿ. ನಾಗರಾಜನಾಯ್ಕ ವಹಿಸುವರು. ಡಾ. ಹೆಚ್. ಮಲ್ಲಿಕಾರ್ಜುನಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಿ 'ಶಿಕ್ಷಕರಲ್ಲಿ ಶಿಸ್ತು ಮತ್ತು ಸಮಯ ಪ್ರಜ್ಞೆ' ವಿಷಯ ಕುರಿತು ಮಾತನಾಡುವರು.

# 14ರಿಂದ ಸಿದ್ಧಾರೂಢರ ರಥೋತ್ಸವ



ರಾಣೇಬೆನ್ನೂರು, ಫೆ.11- ಸ್ಥಳೀಯ ಶ್ರೀ ಸಿದ್ಧಾರೂಢ ಮಠದಲ್ಲಿ 21 ನೇ ವೇದಾಂತ ಪರಿಷತ್ ಹಾಗೂ 7 ನೇ ವರ್ಷದ ಶ್ರೀ ಸಿದ್ಧಾರೂಢರ ರಥೋ ತ್ಸವವು ಇದೇ ದಿನಾಂಕ 14 ರಿಂದ 16 ರವರೆಗೆ ನಡೆಯಲಿದೆ ಎಂದು ಮಠದ ಪೀಠಾಧಿಪತಿ ಶ್ರೀ ಮಲ್ಲಯ್ಯಜ್ಜ ತಿಳಿಸಿದ್ದಾರೆ.

# ಮಿಶ್ರ ಬೆಳೆಗೆ ಕೃಷಿ ಇಲಾಖೆ ಆದ್ಯತೆ

**(1ನೇ ಪುಟದಿಂದ)** ಪ್ರಧಾನ ಬೆಳೆಯಾಗಿ ಬೆಳೆಯುತ್ತಿರುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತಿದೆ. ಅಲ್ಲದೆ ಹೊಸ ಕೀಟ, ರೋಗಬಾಧೆ ಬೆಳೆಯಲ್ಲಿ ಕಾಣಿಸಿಕೊಳ್ಳುತ್ತಿದೆ. ಅಂತರ ಬೆಳೆಯಾಗಿ ತೊಗರಿ ಬೆಳೆಯುವುದರಿಂದ ಆರ್ಥಿಕವಾಗಿ ಸದೃಢರಾಗಬಹುದು ಎಂದರು.

ಸ್ಥಾಯಿ ಸಮಿತಿ ಅಧ್ಯಕ್ಷ ಲೋಕೇಶ್ವರ್, ಈ ಬಗ್ಗೆ ಇಲಾಖೆಯಿಂದ ರೈತರಲ್ಲಿ ಅರಿವು ಮೂಡಿಸಿ ಎಂದರು. ಇಲಾಖೆಯಿಂದ ಗ್ರಾಮಗಳಲ್ಲಿ ಮಿಶ್ರ ಬೆಳೆ ಬಗ್ಗೆ ಜಾಗೃತಿ ಮೂಡಿಸಲು ಗುರಿ ನಿಗದಿಪಡಿಸಿಕೊಳ್ಳು ವಂತೆ ಜಿ.ಪಂ. ಸಿಇಒ ಪದ್ಮಾ ಬಸವಂತಪ್ಪ ಸಲಹೆ ನೀಡಿದರು. ಜಿ.ಪಂ. ಅಧ್ಯಕ್ಷೆ ಶಾಂತಕುಮಾರಿ ಸಿರಿಧಾನ್ಯ ಬೆಳೆಗೂ ರೈತರಿಗೆ ಶಿಫಾರಸು ಮಾಡುವಂತೆ ಸೂಚಿಸಿದರು.

ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಲಕ್ಷ್ಮೀಕಾಂತ್ ಮಾತನಾಡಿ, ಕೋವಿಡ್ ಕಾರಣದಿಂದ ಹಣ್ಣು, ತರಕಾರಿ ಬೆಳೆಯಲ್ಲಿ ನಷ್ಟ ಅನುಭವಿಸಿದ ರೈತರಿಗೆ 4.25 ಕೋಟಿ ರೂ. ಪರಿಹಾರ ಧನ ವಿತರಣೆ ಮಾಡಲಾಗಿದೆ. ಇನ್ನೂ ಸುಮಾರು 2.60 ಕೋಟಿ ರೂ. ಪರಿಹಾರ ಬಿಡುಗಡೆಯಾಗಬೇಕಿದೆ ಎಂದರು.

ಸಿಇಒ ಪದ್ಮಾ ಬಸವಂತಪ್ಪ ಮಾತನಾಡಿ, ಆಸಕ್ತ ರೈತ ಮಹಿಳೆಯರ ಗುಂಪುಗಳನ್ನು ರಚಿಸಿ, ಅವರಿಗೆ ಅಣಬೆ ಬೇಸಾಯ, ಜೇನುಕೃಷಿ, ತಾರಸಿ ಕೈತೋಟದಂತಹ ಚಟುವಟಿಕೆಗಳ ತರಬೇತಿ ನೀಡಲು ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಜಿ.ಪಂ. ಅಧ್ಯಕ್ಷೆ ಶಾಂತಕುಮಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಬಿ. ಫಕೀರಪ್ಪ, ಉಪ ಕಾರ್ಯದರ್ಶಿ ಆನಂದ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ಎಸ್ಸೆಸ್ಸೆಲ್ಸಿ ಶೇ.82 ಹಾಜರಾತಿ: ಡಿಡಿಪಿಐ

ಹತ್ತನೇ ತರಗತಿಗೆ ಶೇ.82ರಷ್ಟು ಮಕ್ಕಳು ಹಾಜರಾಗುತ್ತಿದ್ದಾರೆ. 6ನೇ ತರಗತಿಗೆ ಶೇ.7, 7ನೇ ತರಗತಿ ಶೇ.37, 8ನೇ ತರಗತಿ ಶೇ.67 ಹಾಗೂ 9ನೇ ತರಗತಿಗೆ ಶೇ.73ರಷ್ಟು ಹಾಜರಾತಿ ಇರುವುದಾಗಿ ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ ತಿಳಿಸಿದರು.

ಇದೇ ಜೂನ್ 14 ರಿಂದ 25ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ವೇಳಾಪಟ್ಟಿ ಸಿದ್ಧವಾಗಿದ್ದು, ಉತ್ತಮ ಫಲಿತಾಂಶಕ್ಕೆ ಶ್ರಮ ವಹಿಸಲಾಗುತ್ತಿದೆ ಎಂದರು. ಮುಖ್ಯೋಪಾಧ್ಯಾಯರಿಗೆ ತರಬೇತಿ ನೀಡಲಾಗಿದೆ. ತಾಲ್ಲೂಕು ವಾರು ಮಿಂಚಿನ ಸಂಚಾರ ಮಾಡಲಾಗುತ್ತಿದೆ ಎಂದರು.

ಅಧ್ಯಕ್ಷೆ ಶಾಂತಕುಮಾರಿ ಮಾತನಾಡಿ, ಪರೀಕ್ಷಾ ಫಲಿತಾಂಶ ಉತ್ತಮ ಪಡಿಸಲು ಕ್ರಮ ಕೈಗೊಳ್ಳಿ. ಫಲಿತಾಂಶ ಕುಸಿತ ಕಾಣದಂತೆ ಎಚ್ಚರಿಕೆ ವಹಿಸಿ ಎಂದು ಹೇಳಿದರು.

## ಕೋವಿಡ್ ಟೆಸ್ಟ್ ಕಡ್ಡಾಯವಲ್ಲ

ಶಾಲಾ-ಕಾಲೇಜುಗಳಲ್ಲಿ ಮಕ್ಕಳ ದಾಖಲಾತಿಗೆ ಕೋವಿಡ್ ಟೆಸ್ಟ್ ಕಡ್ಡಾಯವಲ್ಲ ಎಂದು ಡಿಹೆಚ್‌ಒ ಡಾ. ನಾಗರಾಜ್ ಹೇಳಿದರು. ಈ ಹಿಂದೆ ಶಾಲಾ ಮಕ್ಕಳು, ಶಿಕ್ಷಕರಿಗೆ ಕೋವಿಡ್ ತಪಾಸಣೆ ನಡೆಸುವುದು ಕಡ್ಡಾಯವೆಂದು ಸರ್ಕಾರ ತಿಳಿಸಿತ್ತು. ಆದರೆ ಆಯುಕ್ತರು ಈ ಬಗ್ಗೆ ನೂತನ ಸುತ್ತೋಲೆ ಹೊರಡಿಸಿದ್ದು, ಆದರೆ ಇತ್ತೀಚೆಗೆ ಪರೀಕ್ಷೆ ಕಡ್ಡಾಯವಲ್ಲ, ಕೋವಿಡ್ ಲಕ್ಷಣ ಇರುವವರಿಗೆ ಮಾತ್ರ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸುವಂತೆ ಸರ್ಕಾರ ನಿರ್ದೇಶನ ನೀಡಿದೆ ಎಂದು ಹೇಳಿದರು.

ಚಿಗಟೇರಿ ಜಿಲ್ಲಾಸ್ಪತ್ರೆ ಅಧೀಕ್ಷಕರು ಮಾತನಾಡುತ್ತಾ, ಜನವರಿ 1ನೇ ತಾರೀಖಿನಿಂದ ಆಸ್ಪತ್ರೆಯಲ್ಲಿ ಕೋವಿಡ್ ಹೊರತಾದ ಎಲ್ಲಾ ರೀತಿಯ ಚಿಕಿತ್ಸೆಗಳನ್ನೂ ನೀಡಲಾಗುತ್ತಿದೆ ಎಂದರು.

## 3699 ಅನರ್ಹ ಪಡಿತರ ಚೀಟಿ ವಶ

**(1ನೇ ಪುಟದಿಂದ) ನಿರ್ದೇಶಕ ಸೈಯದ್ ಖಲೀಮುಲ್ಲಾ ಸಭೆಗೆ ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ವಿವಿಧ ರೀತಿಯ 4,14,057 ಪಡಿತರ ಚೀಟಿ ಹೊಂದಿದ ಫಲಾನುಭವಿಗಳಿವೆ. ದಿನಕ್ಕೆ ಐದು ಪಡಿತರ ಅಂಗಡಿಗಳಿಗೆ ಭೇಟಿ ನೀಡಿ, ಕನಿಷ್ಠ ಹತ್ತು ಅನರ್ಹ ಪಡಿತರ ಚೀಟಿಗಳನ್ನು ಗುರುತಿಸುವಂತೆ ಆಹಾರ ನಿರೀಕ್ಷಕರಿಗೆ ಸೂಚಿಸಲಾಗಿದೆ ಎಂದು ಹೇಳಿದರು.**

**ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಲೋಕೇಶ್ವರ್, ನೂರಾರು ಕೋಟಿ ಆಸ್ತಿ ಇರುವವರು ಕೂಡ ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಏನೂ ಮಾಡಲಾಗುತ್ತಿಲ್ಲ ಎಂದರು.**

**ಜಿಲ್ಲೆಯಲ್ಲಿ ಬಹುತೇಕ ಹೋಟೆಲ್‌ಗಳು ಪಡಿತರ ಅಕ್ಕಿ ಆಧಾರದಿಂದಲೇ ನಡೆಯುತ್ತಿವೆ, ಬಿಪಿಎಲ್ ಕಾರ್ಡ್ ಕೊಡು ವಾಗ ಕುಟುಂಬದ ಆರ್ಥಿಕ ಸ್ಥಿತಿಗತಿಯನ್ನು ಸಮರ್ಪಕವಾಗಿ ಪರಿಶೀಲಿಸಿಯೇ ನೀಡಬೇಕು ಎಂದು ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ವೀರಶೇಖರಪ್ಪ ಆಗ್ರಹಿಸಿದರು.**

# ಜಿಲ್ಲೂರು ಗ್ರಾ.ಪಂ. ಅಧ್ಯಕ್ಷರಾಗಿ ಹೆಚ್.ಕೆ. ಹಾಲಪ್ಪ, ಉಪಾಧ್ಯಕ್ಷೆ ಲಕ್ಷ್ಮಿದೇವಿ



ನ್ಯಾಮತಿ, ಫೆ.11- ತಾಲ್ಲೂಕಿನ ಜಿಲ್ಲೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಹೆಚ್.ಕೆ. ಹಾಲಪ್ಪ ಹಾಗೂ ಉಪಾಧ್ಯಕ್ಷರಾಗಿ ಲಕ್ಷ್ಮಿ ದೇವಿ ಅವಿರೋಧವಾಗಿ ಆಯ್ಕೆಯಾಗಿದ್ದು, ಶಾಸಕ ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ಮುಖಂಡ ಡಿ. ರಾಜಪ್ಪ ಹಾಗೂ ಪಂಚಾಯಿತಿ ಸದಸ್ಯರು ಅಭಿನಂದಿಸಿದ್ದಾರೆ.

# ಭಾನುವಳ್ಳಿ ಗ್ರಾ.ಪಂ. ಅಧ್ಯಕ್ಷರಾಗಿ ನೇತ್ರಾವತಿ, ಉಪಾಧ್ಯಕ್ಷರಾಗಿ ಚಂದ್ರಪ್ಪ



ಮಲೇಬೆನ್ನೂರು, ಫೆ.11- ಭಾನುವಳ್ಳಿ ಗ್ರಾಮ ಪಂಚಾಯ್ತಿ ನೂತನ ಅಧ್ಯಕ್ಷರಾಗಿ ನೇತ್ರಾವತಿ ಕೊಟ್ರೇಶ್ ಮತ್ತು ಉಪಾಧ್ಯಕ್ಷರಾಗಿ ಕೋಣನತಲೆ ಚಂದ್ರಪ್ಪ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ನೇತ್ರಾವತಿ ಕೊಟ್ರೇಶ್ 12 ಮತಗಳನ್ನು ಪಡೆದು ಆಯ್ಕೆಯಾದರೆ, ಮಂಜುಳಾ ವೀರೇಶ್ ಅವರು ಕೇವಲ 1 ಮತದ ಅಂತರದಿಂದ ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಚಂದ್ರಪ್ಪ ಅವರು ಸಹ 12 ಮತಗಳಿಂದ ಆಯ್ಕೆಯಾದರೆ, ವೆಂಕಟೇಶ್ ರೆಡ್ಡಿ 11 ಮತಗಳನ್ನು ಪಡೆದು ಪರಾಭವಗೊಂಡರು.

ಅಧ್ಯಕ್ಷ ಸ್ಥಾನ ಬಿಸಿಎಂ ಬಿ ಮಹಿಳೆಗೆ ಮತ್ತು ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಎಪಿಎಂಸಿ ಕಾರ್ಯದರ್ಶಿ ವಿದ್ಯಾಶ್ರೀ ಚುನಾವಣಾಧಿಕಾರಿಯಾಗಿದ್ದು, ಪಿಡಿಓ ನಾಗರಾಜ್ ಸಾರಥಿ ಹಾಜರಿದ್ದರು.

# ಹೊನ್ನೂರು ಗ್ರಾ.ಪಂ. ಅಧ್ಯಕ್ಷರಾಗಿ ಹನುಮಂತಪ್ಪ, ಉಪಾಧ್ಯಕ್ಷೆ ಪ್ರಭಾವತಿ

ದಾವಣಗೆರೆ, ಫೆ.11- ಹೊನ್ನೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಎಂ. ಹನುಮಂತಪ್ಪ ಮತ್ತು ಉಪಾಧ್ಯಕ್ಷರಾಗಿ ಪ್ರಭಾವತಿ ಬದ್ಯಾನಾಯ್ಕ ಆಯ್ಕೆಯಾಗಿದ್ದಾರೆ.


DAVANGERE LIONS TRUST (R.)

**LIONS ENGLISH MEDIUM HIGH SCHOOL**

Devaraj Urs Badavane, 'A' Block, Davangere-6. Ph. : 08192-232123

27 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದ ಲಯನ್ಸ್ ಸೇವಾ ಸಂಸ್ಥೆಯಲ್ಲಿ

**ಶಿಕ್ಷಕರು ಬೇಕಾಗಿದ್ದಾರೆ**

**TEACHERS REQUIRED**

| | |
|---|---|
| High School CBZ | B.Sc., B.Ed., (English Medium) |
| High School Social Study | B.A. B.Ed. (English Medium) |

NOTE : Fluency in Subject and English is must.

Please Contact for More Details: 94481 19815

Last Date : 15-02-2021

R.G. Srinivasamurthy, Chariman — Belludi Shivakumar, Secretary — Y.B. Sathish, Tresurer



**ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

# 683/2, 8ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577 002.

ದಿನಾಂಕ 09-02-2021 ದೂರವಾಣಿ : 08192-259693

**ಸ್ಥಿರ ಸ್ವತ್ತಿನ ಬಹಿರಂಗ ಹರಾಜು ಪ್ರಕಟಣೆ**

ಈ ಮೂಲಕ ಯಾವತ್ತೂ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಸೊಸೈಟಿಯಲ್ಲಿ ಸಾಲವನ್ನು ಪಡೆದು ಮರುಪಾವತಿ ಮಾಡದೇ ಸುಸ್ತಿಯಾಗಿರುವ ಈ ಕೆಳಕಂಡ ಸುಸ್ತಿದಾರರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿಯಲ್ಲಿ ಡಿಕ್ರಿ ಅವಾರ್ಡಿನ ಆದೇಶದ ಪ್ರಕಾರ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ನ್ಯಾಯಾಲಯದಲ್ಲಿ ಅಮಲ್ಜಾರಿ ಹುಕುಂ ಪಡೆದು ಷೆಡ್ಯೂಲ್ ಸ್ವತ್ತನ್ನು ಬಹಿರಂಗ ಹರಾಜು ಮಾಡಲಾಗುತ್ತಿದೆ. ಇಚ್ಚೆಯುಳ್ಳವರು ಹರಾಜಿನಲ್ಲಿ ಭಾಗವಹಿಸಿ ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸ್ವತ್ತನ್ನು ಪಡೆಯಬಹುದು.

| ಕ್ರ. ಸಂ. | ತೀರ್ಪು ಸಾಲಗಾರರ ಹೆಸರು ಮತ್ತು ವಿಳಾಸ | ಬಾಕಿಯಾಗಿರುವ ಸಾಲದ ಅಸಲು ಬಡ್ಡಿ ಮತ್ತು ಇತರೆ ಖರ್ಚು | ಹರಾಜಿಗೆ ಒಳಪಡಿಸಿರುವ ಸ್ವತ್ತಿನ ವಿವರ | ಹರಾಜು ನಡೆಯುವ ಸ್ಥಳ ಮತ್ತು ವೇಳೆ |
|---|---|---|---|---|
| 01. | ಶ್ರೀ ಚಂದ್ರಯ್ಯ ಡಿ. ಬಿನ್ ರೇವಣಸಿದ್ದಯ್ಯ, ಮನೆ ಸಂ. 855/56, 1ನೇ ಹಂತ, 2ನೇ ಕ್ರಾಸ್, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ ಇಪಿ ಸಂಖ್ಯೆ : 37/2018-19 | ಅಸಲು ರೂ. 15,75,948=00 + ಈ ತಹಲ್‌ವರೆಗೆ ಬಡ್ಡಿ + ಇತರೆ ಖರ್ಚು ಇದ್ದಲ್ಲಿ | ದಾವಣಗೆರೆ ನಗರದ ಶಿವಕುಮಾರಸ್ವಾಮಿ ಬಡಾವಣೆ, ಒಂದನೇ ಹಂತ, 2ನೇ ಅಡ್ಡರಸ್ತೆ, ಸೈಟ್ ಸಂಖ್ಯೆ 56, ಮನೆ ಹಳೇ ನಂ. 855, ಹಾಲಿ ಡೋರ್ ನಂ. 855/56, ಖಾನೇಷುಮಾರಿ ನಂ. 682 ಇರುವ ಆರ್‌ಸಿಸಿ ಮೇಲ್ಚಾವಣೆ ಹೊಂದಿರುವ ನಾಲ್ಕು ಅಂತಸ್ತಿನ ಮನೆ | ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ಮುಂಭಾಗದಲ್ಲಿ ದಿನಾಂಕ 18-02-2021 ನೇ ಗುರುವಾರ ಬೆಳಿಗ್ಗೆ 11.30 ಗಂಟೆಗೆ |

**ಸೂಚನೆ :** (1) ಹರಾಜಿನಲ್ಲಿ ಬಿಡ್ ಸವಾಲು ಮಾಡತಕ್ಕವರು ಹರಾಜಿಗೆ ಮುಂಚೆ ರೂ.25,000=00 ನಗದು ಹಣವನ್ನು ಮಾರಾಟಾಧಿಕಾರಿಗಳವರ ಕಡೆ ಪಾವತಿ ಮಾಡತಕ್ಕದ್ದು. ಸೊಸೈಟಿಯವರು ಭಾಗವಹಿಸಿದಲ್ಲಿ ಸದರಿ ಡಿಪಾಸಿಟ್ ಪಾವತಿ ಮಾಡಬೇಕಾಗಿಲ್ಲ. (2) ಅತ್ಯಧಿಕ ಸವಾಲು ಮಾಡಿ ಸ್ವತ್ತುಗಳನ್ನು ಕೊಳ್ಳುವವರು ಮಾರಾಟಾಧಿಕಾರಿಗಳು ಹರಾಜನ್ನು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡಾ 15ರಷ್ಟು ಹಣವನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರಿಗೆ ಹಾಗೂ ನೊಂದಣಿಗೆ ತಗಲುವ ವೆಚ್ಚವನ್ನು ಹರಾಜು ಆದ 45 ದಿವಸಗಳೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಡಿಪಾಸಿಟ್ ಮೊತ್ತವನ್ನು ಸೊಸೈಟಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (3) ಮಾರಾಟಾಧಿಕಾರಿಗಳು ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದೇ ಕಾರಣವನ್ನು ನೀಡದೆ ಮುಂದೂಡುವ ಇಲ್ಲವೇ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ. (4) ಈ ಸ್ಥಿರಾಸ್ತಿಯು ಹೇಗಿದೆಯೂ ಹಾಗೆ ಹರಾಜು ಮಾಡಲಾಗುವುದು. (5) ಹರಾಜಿನಲ್ಲಿ ಭಾಗವಹಿಸುವವರು ತಮ್ಮ ಗುರುತಿನ ಚೀಟಿ ಹಾಗೂ ವಿಳಾಸ ದೃಢೀಕರಣ ಪತ್ರವನ್ನು ಒದಗಿಸತಕ್ಕದ್ದು (6) ಹೆಚ್ಚಿನ ಮಾಹಿತಿಗಾಗಿ ಮಾರಾಟಾಧಿಕಾರಿಗಳನ್ನು ಅಥವಾ ಸಂಘದ ಕಾರ್ಯದರ್ಶಿಯವರನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಅಧ್ಯಕ್ಷರು — ಸಹಿ/- ಪ್ರಭಾರ ಕಾರ್ಯದರ್ಶಿ — ಸಹಿ/- ಮಾರಾಟಾಧಿಕಾರಿಗಳು

# ಪ್ರಚೋದನೆಗೆ ಕಡಿವಾಣ ಹಾಕದಿದ್ದರೆ ಕ್ರಮ

## ಸಾಮಾಜಿಕ ಜಾಲ ತಾಣಗಳಿಗೆ ಎಚ್ಚರಿಕೆ

ನವದಹೆಲಿ, ಫೆ. 11 – ಪ್ರಚೋದನಕಾರಿ ಅಂಶಗಳಿಗೆ ಕಡಿವಾಣ ಹಾಕದೇ ಹೋದರೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಸಾಮಾಜಿಕ ಜಾಲತಾಣಗಳಿಗೆ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ. ಟ್ವಿಟ್ಟರ್ ಹಲವಾರು ಖಾತೆಗಳನ್ನು ತಡೆಯಬೇಕೆಂದು ಕೇಂದ್ರ ಸರ್ಕಾರ ಇತ್ತೀಚೆಗಷ್ಟೇ ಸೂಚನೆ ನೀಡಿತ್ತು.

ಪ್ರಚೋದನಕಾರಿ ಅಂಶಗಳ ಕುರಿತು ಟ್ವಿಟ್ಟರ್ ಕ್ರಮ ತೆಗೆದುಕೊಂಡಿಲ್ಲ ಎಂದು ನಿನ್ನೆಯಷ್ಟೇ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿತ್ತು. ಅದರ ಬೆನ್ನಲ್ಲೇ ಹೇಳಿಕೆ ನೀಡಿರುವ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್, ಕ್ಯಾಪಿಟಲ್ ಹಿಲ್ ಸಮಸ್ಯೆ ಹಾಗೂ ಕೆಂಪು ಕೋಟೆ ಸಮಸ್ಯೆಯ ನಡುವೆ ಸಾಮಾಜಿಕ ಜಾಲತಾಣ ಮಾಧ್ಯಮಗಳು ಭಿನ್ನ ನಿಲುವು ತಳೆಯುವಂತಿಲ್ಲ ಎಂದಿದ್ದಾರೆ.

ನಾವು ಮಾಧ್ಯಮ ಸ್ವಾತಂತ್ರ್ಯ ಹಾಗೂ ವ್ಯಕ್ತಿಗಳ ಹಕ್ಕಿಗೆ ಬದ್ಧರಾಗಿದ್ದೇವೆ. ಇದೇ ವೇಳೆ ದೇಶದ ಕಾನೂನು ಸುವ್ಯವಸ್ಥೆ, ಸುರಕ್ಷತೆ ಹಾಗೂ ಭದ್ರತೆಯ ಬಗ್ಗೆಯೂ ಸಮಾನ ಕಾಳಜಿ ಹೊಂದಿದ್ದೇವೆ ಎಂದವರು ತಿಳಿಸಿದ್ದಾರೆ.

ಶತ್ರುತ್ವ, ಹಿಂಸೆ ಹಾಗೂ ಅಪಪ್ರಚಾರವನ್ನು ದಯವಿಟ್ಟು ಹರಡಬೇಡಿ. ಸಂವಿಧಾನ ಹಾಗೂ ನೆಲದ ಕಾನೂನು ಪಾಲಿಸಿ. ಇಲ್ಲವಾದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ. ಟ್ವಿಟ್ಟರ್‌ನ 1,100 ಖಾತೆಗಳ ವಿರುದ್ಧ ಕ್ರಮಕ್ಕೆ ಕೇಂದ್ರ ಸರ್ಕಾರ ಸೂಚನೆ ನೀಡಿತ್ತು. ಈ ಖಾತೆಗಳು ರೈತರ ಪ್ರತಿಭಟನೆಯ ಬಗ್ಗೆ ಅಪ ಪ್ರಚಾರ ಮಾಡುತ್ತಿವೆ ಎಂದು ಸರ್ಕಾರ ತಿಳಿಸಿತ್ತು. ಇಷ್ಟಾದರೂ ಇವುಗಳ ವಿರುದ್ಧ ಕ್ರಮ ತೆಗೆದುಕೊಳ್ಳದ ಬಗ್ಗೆ ಸರ್ಕಾರ ಅಸಮಾಧಾನ ವ್ಯಕ್ತಪಡಿಸಿತ್ತು.

ಅಮೆರಿಕದ ಕ್ಯಾಪಿಟಲ್ ಹಿಲ್‌ನಲ್ಲಿ ಗಲಭೆ ಉಂಟಾದ ತಕ್ಷಣ ಸಾಮಾಜಿಕ ಮಾಧ್ಯಮ ಕಂಪನಿಗಳು ಕ್ರಮ ತೆಗೆದುಕೊಂಡವು. ಆದರೆ, ಗಣರಾಜ್ಯೋತ್ಸವದ ದಿನದಂದು ಕೆಂಪು ಕೋಟೆಯಲ್ಲಿ ಹಿಂಸಾಚಾರ ನಡೆದಾಗ ಇದೇ ರೀತಿಯ ಕ್ರಮ ತೆಗೆದುಕೊಳ್ಳಲಿಲ್ಲ. ಈ ರೀತಿಯ ದ್ವಿಮುಖ ಮಾನದಂಡ ಇಲ್ಲಿ ಕೆಲಸ ಮಾಡದು ಎಂದು ಪ್ರಸಾದ್ ರಾಜ್ಯಸಭೆಯಲ್ಲಿ ಹೇಳಿದ್ದಾರೆ.

ಪ್ರಚೋದನಕಾರಿ ವಿಷಯ ಅದರಲ್ಲೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ರೈತರ ಹತ್ಯಾಕಾಂಡಕ್ಕೆ ಸಂಚು ನಡೆಸುತ್ತಿದ್ದಾರೆ ಎಂದು ಅಪಪ್ರಚಾರ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇದೇನು ತಮಾಷೆಯೇ? ಎಂದು ಸಚಿವರು ಪ್ರಶ್ನಿಸಿದ್ದಾರೆ.

ಸಾಮಾಜಿಕ ಜಾಲತಾಣಗಳು ತಮ್ಮದೇ ಆದ ನಿಯಂತ್ರಣ ವ್ಯವಸ್ಥೆ ಹೊಂದಿರಬಹುದು. ಆದರೆ, ಅವು ಭಾರತದ ನಿಯಮಗಳನ್ನು ಪಾಲಿಸುವುದಿಲ್ಲ ಎಂದರ್ಥವಲ್ಲ. ಇಂಥದೆಲ್ಲಾ ಇಲ್ಲಿ ಕೆಲಸ ಮಾಡುವುದಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪರಿಗಣಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸುದ್ದಿ ಮಾಧ್ಯಮಗಳು, ಪತ್ರಕರ್ತರು, ಕಾರ್ಯಕರ್ತರು ಹಾಗೂ ರಾಜಕಾರಣಿಗಳ ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಟ್ವಿಟ್ಟರ್ ಹೇಳಿತ್ತು.

ಈ ಬಗ್ಗೆ ಆಕ್ಷೇಪಿಸಿರುವ ಪ್ರಸಾದ್, ಅಮೆರಿಕದ ಕ್ಯಾಪಿಟಲ್ ಹಿಲ್ ಮೇಲೆ ದಾಳಿ ನಡೆದಾಗ ಮೈಕ್ರೋಬ್ಲಾಗಿಂಗ್ ಕಂಪನಿಗಳು ಪೊಲೀಸರ ಜೊತೆ ನಿಂತಿದ್ದವು. ಆದರೆ, ನಮ್ಮ ಘನತೆಯ ಸಂಕೇತವಾದ ಕೆಂಪು ಕೋಟೆಯ ಮೇಲೆ ದಾಳಿ ನಡೆದಾಗ ಅವು ವಿರುದ್ಧ ದಿಕ್ಕಿಗೆ ನಡೆದಿವೆ ಎಂದಿರುವ ಪ್ರಸಾದ್, ನಾವು ನಿಮ್ಮ ಉತ್ತಮ ಕೆಲಸ ಗೌರವಿಸುತ್ತೇವೆ. ನೀವು ವಹಿವಾಟು, ವಿದೇಶಿ ನೇರ ಹೂಡಿಕೆ ತರುವುದು ಹಾಗೂ ಹಣವನ್ನು ತರುತ್ತೀರಿ. ಆದರೆ, ದೇಶದ ಕಾನೂನು ಹಾಗೂ ನಿಯಮಗಳನ್ನು ಗೌರವಿಸಬೇಕು ಎಂದವರು ತಿಳಿಸಿದ್ದಾರೆ.

# ನಗರದ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಭಕ್ತಾಂಜನೇಯ ಸ್ವಾಮಿ ಮೂರ್ತಿ ಪ್ರತಿಷ್ಠಾಪನೆ



ದಾವಣಗೆರೆ, ಫೆ.11- ನಗರದ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ವತಿಯಿಂದ ಇದೇ ದಿನಾಂಕ 14 ರಂದು ಬೆಳಿಗ್ಗೆ 8.33 ಕ್ಕೆ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಭಕ್ತಾಂಜನೇಯ ಸ್ವಾಮಿ ಮೂರ್ತಿಯ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷರಾದ ಆರ್.ಎಲ್ ಪ್ರಭಾಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಆರ್ಯವೈಶ್ಯ ಸಮಾಜದ ಪೀಠಾಧ್ಯಕ್ಷರಾದ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಮೂರ್ತಿ ಪ್ರತಿಷ್ಠಾಪನೆ ಮಾಡಲಿದ್ದಾರೆ. ನಂತರ ಸರ್ವ ಭಕ್ತಾದಿಗಳಿಗೆ ಆಂಜನೇಯ ಸ್ವಾಮಿಯ ದಿವ್ಯದರ್ಶನ ಮತ್ತು ಹನುಮಾನ್ ಚಾಲೀಸ್ ಪಠಣ ನಡೆಯಲಿದೆ ಎಂದು ಅವರು ಹೇಳಿದರು.

ಅಂದು ಸಂಜೆ 6 ರಿಂದ ನವೀಕರಣಗೊಂಡ ಕಲ್ಯಾಣ ಮಂಟಪದ ಮತ್ತು ದೇವಸ್ಥಾನದ ಅಡುಗೆ ಮನೆ ಹಾಗೂ ಶ್ರೀ ರಾಜನಹಳ್ಳಿ ಸುಬ್ರಹ್ಮಣ್ಯ ಶ್ರೇಷ್ಠಿ ಡೈನಿಂಗ್ ಹಾಲ್ ಉದ್ಘಾಟನೆಯನ್ನು ಶ್ರೀಗಳು ನೆರವೇರಿಸಲಿದ್ದಾರೆ.

ಪ್ರತಿಷ್ಠಾಪನೆ ಕಾರ್ಯಕ್ರಮದ ಅಂಗವಾಗಿ ನಾಳೆ ದಿನಾಂಕ 12 ರ ಶುಕ್ರವಾರ ಸಂಜೆ 5.30 ರಿಂದ ಸಂಕಲ್ಪ, ಶ್ರೀ ಗಣಪತಿ ಪೂಜಾ, ಪುಣ್ಯಾಹವಾಚನ, ರಕ್ಷಾ ಬಂಧನ, ಅಂಕುರಾರ್ಪಣೆ, ಮಂಟಪ ಆರಾಧನೆ, ಧ್ವಜಾರೋಹಣ, ಅಗ್ನಿ ಪ್ರತಿಷ್ಠಾಪನೆ ವಾಸ್ತು ಹೋಮ, ವಿಗ್ರಹ ಜಲಾಧಿವಾಸ, ನೀರಾಜನ ಮಂತ್ರಪುಷ್ಪ ಹಾಗೂ ತೀರ್ಥ ಪ್ರಸಾದ ವಿತರಣೆಯಾಗಲಿದೆ.

ನಾಡಿದ್ದು ದಿನಾಂಕ 13 ರ ಶನಿವಾರ ಬೆಳಿಗ್ಗೆ 7.30 ಕ್ಕೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ಉತ್ಸವಮೂರ್ತಿಗೆ ಮತ್ತು ಆಂಜನೇಯಸ್ವಾಮಿಗೆ ಕ್ಷೀರಾಭಿಷೇಕ, 7.45 ಕ್ಕೆ ಗಣಪತಿ ಪೂಜೆ, ಮನ್ಯಸೂಕ್ತ ಹೋಮ ಮತ್ತು ನವಗ್ರಹ ಹೋಮ ನಡೆಯಲಿದೆ.

ಬೆಳಿಗ್ಗೆ 10.30 ಕ್ಕೆ ನಗರದ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಿಂದ ಕನ್ಯಕಾಪರಮೇಶ್ವರಿ ದೇವಸ್ಥಾನದವರೆಗೆ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು ಪೂರ್ಣಕುಂಭ ಹಾಗೂ ಮೆರವಣಿಗೆ ಮೂಲಕ ಬರಮಾಡಿಕೊಳ್ಳಲಾಗುವುದು ಎಂದು ಹೇಳಿದರು.

> ಇಂದಿನಿಂದ ಮೂರು ದಿನ ವಿವಿಧ ಪೂಜಾ ಕಾರ್ಯಕ್ರಮಗಳು, ನಾಳೆ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರಿಗೆ ಪೂರ್ಣಕುಂಭದೊಂದಿಗೆ ಸ್ವಾಗತ.
> - ಆರ್.ಎಲ್. ಪ್ರಭಾಕರ್, ಅಧ್ಯಕ್ಷರು, ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘ.

ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಅಮ್ಮನವರ ಅಗ್ನಿಪ್ರವೇಶ ಹಾಗೂ ವಿಶ್ವರೂಪ ದರ್ಶನ ದಿನದ ಅಂಗವಾಗಿ ಬೆಳಿಗ್ಗೆ 10.45 ಕ್ಕೆ ವಾಸವಿ ಸಹಸ್ರನಾಮ ಪೂರ್ವಕ ಹೋಮ, ಸೌಂದರ್ಯಲಹರಿ ಪಠಣ ಜರುಗಲಿದೆ.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಆರ್.ಜಿ. ನಾಗೇಂದ್ರಪ್ರಕಾಶ್, ಆರ್.ಎಸ್. ನಾರಾಯಣಸ್ವಾಮಿ, ಕಾಸಲ್ ಎಸ್. ಸತೀಶ್, ಜೆ. ರವೀಂದ್ರ ಗುಪ್ತ, ಎ.ಎಸ್. ಸತ್ಯನಾರಾಯಣಸ್ವಾಮಿ, ಲಾಲಾ ವೆಂಕಟಾಚಲಪತಿ ಶ್ರೇಷ್ಠಿ, ಬಿ.ಎಸ್. ಶಿವಾನಂದ್, ಎಂ. ನಾಗರಾಜ ಗುಪ್ತ, ಸಾಯಿಪ್ರಸಾದ್, ರಂಗನಾಥ, ಸುರೇಶ್ ಪಾಂಡುರಂಗಿ ಮತ್ತಿತರರಿದ್ದರು.

# ಹರಿಹರದ ಹರಿಹರೇಶ್ವರ ಬ್ಯಾಂಕ್ ಅಧ್ಯಕ್ಷರಾಗಿ ಜಿ.ಕೆ. ಮಲ್ಲಿಕಾರ್ಜುನ

## ಉಪಾಧ್ಯಕ್ಷರಾಗಿ ಕೆ.ರವಿಚಂದ್ರ ಆಯ್ಕೆ



ಹರಿಹರ, ಫೆ.11- ನಗರದ ಪ್ರತಿಷ್ಠಿತ ಶ್ರೀ ಹರಿಹರೇಶ್ವರ ಬ್ಯಾಂಕ್ ಅಧ್ಯಕ್ಷರಾಗಿ ಜಿ.ಕೆ. ಮಲ್ಲಿಕಾರ್ಜುನ, ಕೆ.ರವಿಚಂದ್ರ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ಸಭಾಂಗಣದಲ್ಲಿ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಜಿ.ಕೆ. ಮಲ್ಲಿಕಾರ್ಜುನ ಅವರು ಏಳು ಮತಗಳನ್ನು ಪಡೆದು ಆಯ್ಕೆಯಾದರು. ಅವರ ಪ್ರತಿಸ್ಪರ್ಧಿಯಾಗಿದ್ದ ಪರಶುರಾಮ ಅಂಬೇಕರ್ 5 ಮತಗಳನ್ನು ಪಡೆದು ಪರಾಜಿತರಾದರು.

ಉಪಾಧ್ಯಕ್ಷ ಸ್ಥಾನಕ್ಕೆ ಕೆ. ರವಿಚಂದ್ರ ಮಾತ್ರ ನಾಮಪತ್ರವನ್ನು ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ಜಿ. ವೀರಯ್ಯ, ಬಿ.ಕೆ. ಅನ್ವರ್ ಪಾಷಾ, ಕೆ. ಅಣ್ಣಪ್ಪ, ವಾಸುದೇವ ಹೋವಳೆ, ಟಿ. ಓಬಳಪ್ಪ, ಹೆಚ್. ಅಜ್ಜಯ್ಯ, ಬಿ.ಹೆಚ್. ರಾಧಾ, ಆರ್. ವಿದ್ಯಾ ಮೆಹರ್ವಾಡೆ, ಹೆಚ್.ಎಂ. ವೀರಭದ್ರಯ್ಯ, ನಾಗೇಂದ್ರಸಾ ಕಾಟ್ವೆ, ಸಿಬ್ಬಂದಿಗಳಾದ ರೇಖಾ ರವೀಂದ್ರ, ಪಿ. ಶಶಿಕಲಾ, ಶಿವಕುಮಾರ್, ಪ್ರಶಾಂತ, ಎಸ್. ಮಂಜುನಾಥ್, ಪ್ರಕಾಶ್, ಸತ್ಯನಾರಾಯಣ ಹೋವಳೆ, ಮಧು ಇತರರು ಹಾಜರಿದ್ದರು.

ಎನ್.ಜಿ. ರುದ್ರಪ್ಪ ಚುನಾವಣಾ ಅಧಿಕಾರಿಯಾಗಿದ್ದರು.

# ಇಂದು ಕಟ್ಟೆ ದುರುಗಮ್ಮ ದೇವಿ ದೇವಸ್ಥಾನಕ್ಕೆ ಗುದ್ದಲಿ ಪೂಜೆ



ನಗರದ ಹೊಂಡದ ರಸ್ತೆ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಹತ್ತಿರ ಇರುವ ಶ್ರೀ ಕಟ್ಟೆ ದುರುಗಮ್ಮದೇವಿ ದೇವಸ್ಥಾನದ ನವ ನಿರ್ಮಾಣಕ್ಕೆ ಗುದ್ದಲಿ ಪೂಜೆಯನ್ನು ಇಂದು ಬೆಳಿಗ್ಗೆ 8.30ಕ್ಕೆ ಪುರೋಹಿತರ ಪೌರೋಹಿತ್ಯದಲ್ಲಿ ನಡೆಯಲಿದೆ. ಭಕ್ತಾಧಿಗಳು ಕಾರ್ಯಕ್ರಮಕ್ಕೆ ಆಗಮಿಸಿ ದೇವಿ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.


ಹೃದಯಪೂರ್ವಕ ಅಭಿನಂದನೆಗಳು

ದಾವಣಗೆರೆ ತಾಲ್ಲೂಕು ಆಲೂರು ಗ್ರಾಮ ಪಂಚಾಯಿತಿಗೆ ನನ್ನನ್ನು ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನನ್ನನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ ಗ್ರಾಮ ಪಂಚಾಯಿತಿ ಎಲ್ಲಾ ಸದಸ್ಯರಿಗೂ ಹಾಗೂ ಆಲೂರು, ಮಲ್ಲಾಪುರ ಗ್ರಾಮದ ಎಲ್ಲಾ ಮುಖಂಡರುಗಳಿಗೂ ಹಾಗೂ ಗ್ರಾಮಸ್ಥರಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.



ಎಂ.ನಾಗಮ್ಮ ಮಂಜುನಾಥ್
ಅಧ್ಯಕ್ಷರು,
ಆಲೂರು ಗ್ರಾಮ ಪಂಚಾಯಿತಿ

ಕೆ.ಬಿ. ಕರಿಬಸಪ್ಪ
ಉಪಾಧ್ಯಕ್ಷರು,
ಆಲೂರು ಗ್ರಾಮ ಪಂಚಾಯಿತಿ



Stock CLEARANCE SALE



Date : 12, 13 & 14 February 2021
Time : 10 am to 8 pm

Venu : SHREE ENTERPRIES
Near sukshema Hospital, Shamanur Road, Davangere. Ph. : (08192) 226059

Products : Chairs, Kitchen wares, Small Appliances
KITCHEN ESSENTIALS, Prestige, Godrej, WONDERCHEF Cook with Pride, ProMax, coconut



ಆಹಾರದಿಂದ ಆರೋಗ್ಯ ಆರೋಗ್ಯವೇ ಭಾಗ್ಯ

ಜೀನಿ Jeeni MILLET HEALTH MIX

ಹಳ್ಳಿಯ ಜನರು ಕಲ್ಲಿನಿಂದ ಸಿದ್ಧಗೊಳಿಸಿದ "ಜೀನಿ ಮಿಲೆಟ್ ಹೆಲ್ತ್ ಮಿಕ್ಸ್" ಸೇವಿಸಿ ಆರೋಗ್ಯವಂತರಾಗಿ



Natural ORGANIC · NO ADDITIVES · NO ADDED SUGAR · fssai 11220327000212 · ISO 9001:2015

ಮಕ್ಕಳಿಗೆ

9 ಸಿರಿ ಧಾನ್ಯಗಳನ್ನೊಳಗೊಂಡಂತೆ ಮತ್ತು 15 ಧಾನ್ಯಗಳು

ಆರ್‌ಆರ್ ಎಂಟರ್‌ಪ್ರೈಸಸ್ (ಫ್ಲಾಟ್ ಫಾರಂ 2)
ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್ ಒಳಗಡೆ, ಹೈಸ್ಕೂಲ್ ಮೈದಾನ, ದಾವಣಗೆರೆ.
ಫೋ. : 998046 4968, 9008336178


# ಕಂದನಕೋವಿ ಗ್ರಾ.ಪಂ. ಅಧ್ಯಕ್ಷರಾಗಿ ಗಾಯತ್ರಿ, ಉಪಾಧ್ಯಕ್ಷರಾಗಿ ಸಂಗನಬಸಪ್ಪ



ದಾವಣಗೆರೆ, ಫೆ.11- ಕಂದನಕೋವಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಶ್ರೀಮತಿ ಗಾಯತ್ರಿ ಮುನಿಯನಾಯ್ಕ, ಉಪಾಧ್ಯಕ್ಷರಾಗಿ ಸಂಗನಬಸಪ್ಪ ಅವರುಗಳು ಆಯ್ಕೆಯಾಗಿದ್ದಾರೆ. ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಕೊಟ್ರೇಶ್ ಅವರು ಚುನಾವಣಾಧಿಕಾರಿಯಾಗಿದ್ದರು.


ಸಿದ್ಧ ಬೆನಕ ಸೌಹಾರ್ದ ಸಹಕಾರಿ ನಿ.,
ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ

ಬೇಕಾಗಿದ್ದಾರೆ

ನಮ್ಮ ಸಂಸ್ಥೆಯಿಂದ ಆರಂಭಿಸುವ ಜನರಿಕ್ ಔಷಧ ಮಳಿಗೆಗಳಲ್ಲಿ ಕೆಲಸ ಮಾಡಲು ಡಿ.ಫಾರ್ಮ/ಬಿ.ಫಾರ್ಮ ಅಭ್ಯರ್ಥಿಗಳು ಬೇಕಾಗಿದ್ದಾರೆ. ಅನುಭವಿಗಳಿಗೆ ಆದ್ಯತೆ.

ಸಂಪರ್ಕಿಸಿ
9449586345, 9845263706


# ದಕ್ಷಿಣ ವೃತ್ತ ಸಿಪಿಐ ಗುರುಬಸವರಾಜಗೆ ಮುಖ್ಯಮಂತ್ರಿ ಪದಕ



ದಾವಣಗೆರೆ, ಫೆ.11- 2019ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ ಇಲ್ಲಿನ ದಕ್ಷಿಣ ವೃತ್ತ ಸಿಪಿಐ ಹೆಚ್. ಗುರುಬಸವರಾಜ ಭಾಜನರಾಗಿದ್ದು, ಎಸ್ಪಿ ಹನುಮಂತರಾಯ ಅವರು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಇಂದು ಅಭಿನಂದಿಸಿದರು.

ಇದೇ ದಿನಾಂಕ 8ರಂದು ಬೆಂಗಳೂರಿನ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ನಡೆದ ಮುಖ್ಯಮಂತ್ರಿ ಪದಕ ಪ್ರಧಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಅವರಿಂದ ಪದಕವನ್ನು ಗುರುಬಸವರಾಜ ಸ್ವೀಕರಿಸಿದ್ದರು.

# ನಗರದಲ್ಲಿ ಇಂದು ಜಿಲ್ಲಾ ಜೆಡಿಎಸ್ ಸಭೆ

ಜಿಲ್ಲಾ ಜೆಡಿಎಸ್ ಸಮಾಲೋಚನಾ ಸಭೆಯು ಇಂದು ಬೆಳಿಗ್ಗೆ 10.30 ಕ್ಕೆ ಬಾಲಭವನದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಜಿಲ್ಲಾ ವೀಕ್ಷಕ ಜೆ. ಅಮಾನುಲ್ಲಾಖಾನ್ ತಿಳಿಸಿದ್ದಾರೆ.


ಹೃತ್ಪೂರ್ವಕ ಕೃತಜ್ಞತೆಗಳು

ದಾವಣಗೆರೆ ತಾಲ್ಲೂಕಿನ ಬೆಳವನೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಶ್ರೀ ಮಹಾಂತೇಶ್ ಜೆ.ಹೆಚ್. ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಶೃತಿ ನಾಗರಾಜ್ ಅವರನ್ನು ಆಯ್ಕೆ ಮಾಡಿದ ಹೊಸ ಬೆಳವನೂರು, ಹಳೇ ಬೆಳವನೂರು, ಮರುಳಸಿದ್ದೇಶ್ವರ ನಗರ, ತುರ್ಚಘಟ್ಟ, ತರಳುಬಾಳು ನಗರ, ಚಂದ್ರನಹಳ್ಳಿಯ ಎಲ್ಲಾ ಗ್ರಾ.ಪಂ. ಸದಸ್ಯರುಗಳಿಗೆ, ಹಿರಿಯರಿಗೆ ಮತ್ತು ಎಲ್ಲಾ ಗ್ರಾಮಸ್ಥರಿಗೆ ಹಾಗೂ ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ

ಹೃತ್ಪೂರ್ವಕ ಕೃತಜ್ಞತೆಗಳು



ಶ್ರೀ ಮಹಾಂತೇಶ್ ಜೆ.ಹೆಚ್.
ಅಧ್ಯಕ್ಷರು, ಬೆಳವನೂರು ಗ್ರಾ.ಪಂ.
ಫೋ: 99021 22498



ಶ್ರೀಮತಿ ಶೃತಿ ನಾಗರಾಜ್
ಉಪಾಧ್ಯಕ್ಷರು, ಬೆಳವನೂರು ಗ್ರಾ.ಪಂ.
ಫೋ: 88842 42617



ಮೊದಲನೇ ವರ್ಷದ ಪುಣ್ಯಸ್ಮರಣೆ



ದಿ. ಡಾ|| ರಂಗಸ್ವಾಮಿ ಹೆಚ್.ಬಿ.
MBBS, MS, PGDHM, (ಹಿರೇ ಹಾಲಿವಾಣ), ಹಿರಿಯ ಶಸ್ತ್ರ ಚಿಕಿತ್ಸಾ ತಜ್ಞರು ಚಿಗಟೇರಿ ಜಿಲ್ಲಾ ಆಸ್ಪತ್ರೆ

ಇವರು ದಿ: 15.02.2020 ರಂದು ದೈವಾಧೀನರಾದರು. ಅವರ ಮೊದಲ ವರ್ಷದ ಪುಣ್ಯಸ್ಮರಣೆಯನ್ನು ದಿ.12.02.2021 ರಂದು ಮೃತರ ಸ್ವಗೃಹವಾದ # 3370/7A MCC 'B' Block 1st ಮೇನ್ 1st ಕ್ರಾಸ್, ಕುವೆಂಪುನಗರ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಡಾ|| ಭಾರತಿ ಎಸ್.ಜಿ. (ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು MS OBG WCH)
ಡಾ|| ಚಿರಾಗ್ ಹೆಚ್.ಬಿ.ಆರ್, ಗಗನ್ ಹೆಚ್.ಬಿ.ಆರ್.
81977 32674





ಹಳೇಬಾತಿ ಗ್ರಾಮ ಪಂಚಾಯಿತಿ ಚುನಾವಣೆ - 2021

ಹೃದಯಪೂರ್ವಕ ಕೃತಜ್ಞತೆಗಳು



ಹಳೇಬಾತಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸಿದ್ದೇಶ್ ಎಸ್.ಆರ್. ಆದ ನನ್ನನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ನನ್ನ ಆತ್ಮೀಯ ನೂತನ ಗ್ರಾಮ ಪಂಚಾಯಿತಿ ಸರ್ವ ಸದಸ್ಯರಿಗೂ ಹಾಗೂ ಹಳೇಬಾತಿ, ಗುಡ್ಡದ ಕ್ಯಾಂಪ್ ಮತ್ತು ನೀಲಾನಹಳ್ಳಿ ಗ್ರಾಮಸ್ಥರಿಗೂ, ಹಿರಿಯ ಮುಖಂಡರಿಗೂ ಮತ್ತು ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

ಸಿದ್ದೇಶ್ ಎಸ್.ಆರ್.
ಅಧ್ಯಕ್ಷರು
ಹಳೇಬಾತಿ ಗ್ರಾಮ ಪಂಚಾಯಿತಿ



ಗದಿಗೆಮ್ಮ – ಉಪಾಧ್ಯಕ್ಷರು, ಹಳೇಬಾತಿ
ಪುಷ್ಪ ಎ. – ಗ್ರಾ.ಪಂ. ಸದಸ್ಯರು, ಹಳೇಬಾತಿ
ಸವಿತ – ಗ್ರಾ.ಪಂ. ಸದಸ್ಯರು, ಹಳೇಬಾತಿ
ಬಿ.ಪಿ. ಕೆಂಚಪ್ಪ – ಗ್ರಾ.ಪಂ. ಸದಸ್ಯರು, ಗುಡ್ಡದ ಕ್ಯಾಂಪ್
ಪ್ರಭು – ಗ್ರಾ.ಪಂ. ಸದಸ್ಯರು, ಗುಡ್ಡದ ಕ್ಯಾಂಪ್
ಆರ್. ಸ್ಟೆಲ್ಲಾಕುಮಾರಿ – ಗ್ರಾ.ಪಂ. ಸದಸ್ಯರು, ಗುಡ್ಡದ ಕ್ಯಾಂಪ್
ನಾಗರಾಜ್ – ಗ್ರಾ.ಪಂ. ಸದಸ್ಯರು, ನೀಲಾನಹಳ್ಳಿ
ಗಾಯಿತ್ರ ಜಿ. – ಗ್ರಾ.ಪಂ. ಸದಸ್ಯರು, ನೀಲಾನಹಳ್ಳಿ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte